identity can be properly understood with the help of *bhāga-lakṣaṇā* (36.43). Sentences like "*tat tvam asi*" convey an *akhaṇḍārtha* (44-45). The Mahā-vākyas such as "*prajñānaṁ brahma*" "*ahaṁ brahmāsmi*" and "*ayam ātmā brahma*" are e ucidated (46-48). Those tremendous words "That thou art", which is the supreme discovery of the seers of the Upaniṣads and which is repeated again and again, is explained here in ten verses (49-58). Continuous and deep meditation over such Mahā-vākyas as "*ayam ātmā brahma*" or "*ahaṁ brahma asmi*" leads to akhaṇḍa-vṛtti, which finally gets merged into the Ātman (59-61). This is the panacea for all the ills of life. This attains the great joy of the 'Kingdom of the Self'. The seed of *karma* gets burnt in it and never sprouts again. Doubts and bondage are cut asunder thereby. (62).

Thus the second chapter refers to the higher order of reality, which reveals something that is supremely great in human life. It is a pointer to the highest beatitude that a man can reach in this life.

The third Prakaraṇa starts with a discussion of how śruti can bring about direct knowledge of the Ātman. The help of senses and mind is necessary for perceiving an external object; but that is not necessary in the case of Ātman that shines by itself within. Ātman is the source of energy for all the senses, though it remains unperceived by them (1-9). For the realisation of this Ātman, one

should control his senses, make one's mind pure as well as steady, and meditate on the Ātman at a lonely spot. Detached and perseverant, one should eat limited, pure and wholesome food, study the Yoga-śāstra, sit steadily in a comfortable posture, make the mind quiet with the help of breath-control, and concentrate it on some gross or subtle object. Thereby the mind becomes dementalised, and one is able to cut asunder the bondage of infatuation (10-11). After the realisation of Ātman takes place, one may be active in society or remain aloof steeped in meditation—that does not lead him to bondage at all. There is no gain that is higher than the attainment or realisation of Ātman (12-15).

Gaṅgādhara Sarasvatī gives a graphic description of a jīvanmukta as follows :—

The fire of knowledge burns his *saṁcita karma*, the present and future actions do not touch a realised soul; only the *prārabdha karma* continues till his death. He has no longer any attachment for his body. Even gods can do him no wrong. He naturally leads a pious life; maintains always the equipoise of mind; and being pleased by the realisation of Ātman he moves unhindered over the earth. A realised soul may lead the life of a house-holder or that of an ascetic. He may wander about as he pleases, doing good to others. Even gods bow down to him. The Jīvanmukta sings the glory of his preceptor who conferred on him the boon of salvation.

He is overjoyed by the mystical experience which reveals to him that the world is a mere appearance and not a reality (6–31). The Ātman, though alone, overcomes the enemies (i. e. the ṣadripu-s) and annihilates the world (32–33). The author gives a poetic description of the realised soul by using punning words and apparently contradictory terms (34-36). Ātman is god Brahmā, Viṣṇu and Śiva, though unrelated to the creation, maintenance and destruction of the world. Ātman is compared to a lion that kills the elephants in the form of infatuation (37–40). The realised soul purifies the society by his beneficent advice. He and his family are extremely blessed. He leads a fruitful life and when his *prābrabdha karma* comes to an end, he becomes the ocean of bliss (41–43). The author gives a superb description of the saṁvinmaya Puruṣa, pointing out how he surpasses the moon and compares that Puruṣa to an ocean, the fire, a sword, the sun and the crest-jewel. He hopes that this work will bring happiness to his readers, who posses virtuess like peace of mind, who are desirous of the nectar of Vedānta, and who resort to the "wish–fulfilling tree of absolution" (i. e. Kaivalya-kalpa-druma which is the name of his commentary on the Svārājya-siddhi). Finally Gaṅgādhara Sarasvatī places the offering of his word–flowers at the sacred feet of Śiva and Pārvati (44–47).

The third chapter is fittingly called Kaivalya, as it describes the nature of realisation, the means

thereof, the state of a realised soul (Jīvanmukta) and the glory of realisation. The description of the realised person is so exhaustive and excellent in verses 16 to 45 that this part may as well be called Jīvanmukta Gītā.

Svārājya-siddhi is thus a brief summary of the Upaniṣads as well as a metrical exposition of the Brahma Sūtras and the Śāṅkara-bhāṣya in short.

Style

Gaṅgādhara Sarasvatī writes in a simple, direct, forceful, compact and charming style. His expression is more lucid and less pedantic than that of many other scholars. He has easy command over the Sanskrit diction and he handles metaphysical arguments with ease and without repetition of thought.

In addition to philosophical acumen he reveals his skill in poetic composition. He uses a number of figures of speech. Thus in I.6 there is Dṛṣṭānta. Śleṣa is seen in many verses such as III.32–35, 37–39. Paramparita Rūpaka is found in III.40, 45 and Vyatireka in III.44. In III.41 the simile is based on paranomasia.

Svārājya-siddhi is composed in elegant verse and long metres like Sragdharā as well as Harana-rtana are employed. It has good poetic quality in

spite of the fact that it has to expound terse and controversial philosophy.

Following are the metres used in this work :—

Anuṣṭup—III.47

Aupacchandasika—III.13

Bhujaṅga-prayāta—II.43.45

Gīti—III.36

Haranartana—II,17–28

Indravajrā—II.59

Mālinî—III.12

Mandākrāntā—I.'–2; III.40

Mañjubhāṣiṇi—II.39–42; III.1–6, 8–11

Praharṣiṇî—I.40–49

Puṣpitāgrā—III.30

Rathoddhatā—II.16

Śārdūla-Vikrîḍita—I.3, 12-13; II.38; III.23-25, 45

Śālinî—I.5

Śikhariṇî—I.4; III.26–29, 31–35, 37

Sragdharā—I.6–11, 14–39, 50–54;
II.1–15, 29–37, 60–62; III.7

Sragviṇî—III.14-22

Upendravajrā--–III.38–39

Vasanta-tilakā—II.46–58; III.41–44, 46

Thus Sragdharā appears to be the most favourite metre of our author, as he has composed 65 verses (more than one third of the whole work) in this metre As it is a long metre containing twenty-one syllables in each quarter, it is possible to express one thought or argument completely in such a verse.

The following Manuscripts were used for the preparation of the Text :—

	Bhandarkar Oriental Research	
क–No. 677/1887-91	Institute	Poona
ख–No. 363/1899-1915	,,	,,
ग–No. 377/1881-82	,,	,,
घ–No. 311/1899-1915	,,	,,
ङ–No. 312/1899-1915	,,	,,
च–No. 368/1899-1915	,,	,,

छ–No. 7654 The Scindia Oriental Institute, Ujjain

Two Manuscripts in the Kurukshetrat University Library, one in the Oriental Institute, Mysore and one in the Nagapur University were consulted. There were hardly any varient readings worth mention.

I am thankful to the authorities of the above Institutions for their help.

ಪ್ರಸ್ತಾವನೆ

(೧)

ಭಾರತವು ವೇದಕಾಲದಿಂದ ಇಂದಿನವರೆಗೆ ತತ್ತ್ವಜ್ಞಾನದ ಪರಂಪರೆಗಾಗಿ ಸುಪ್ರಸಿದ್ಧವಾಗಿದೆ. ಅನೇಕ ಋಷಿಮುನಿಗಳು ಮತ್ತು ಸಾಧುಸಂತರು ತಮ್ಮ ತಪಸ್ಸು, ಅಂತರ್ಜ್ಞಾನ, ಚಿಂತನೆ ಹಾಗು ವಿದ್ವತ್ಪೂರ್ಣ ಭಾಷ್ಯಗಳಿಂದ ಈ ಪರಂಪರೆಯನ್ನು ಸಮೃದ್ಧಗೊಳಿಸಿದ್ದಾರೆ. ಉಪನಿಷತ್ಕಾಲದ ಋಷಿಗಳು ಮಹಾ ಮೇಧಾವಿಗಳಾಗಿದ್ದರು ಮತ್ತು ಅವರು ತಮ್ಮ ಹೃದಯದಾಳದಿಂದ ಬರುವ ವಿಚಾರ-ಗಳನ್ನು ಮುಕ್ತವಾಗಿ ವ್ಯಕ್ತಗೊಳಿಸಿದರು. ಉಪನಿಷತ್ತುಗಳ ಉಪದೇಶವನ್ನು ಬ್ರಹ್ಮಸೂತ್ರಗಳಲ್ಲಿ ವ್ಯವಸ್ಥಿತವಾಗಿ ವಿಂಗಡಿಸಲಾಯಿತು. ಭಗವದ್ಗೀತೆಯಲ್ಲಿ ಉಪನಿಷತ್ತುಗಳ ಸಾರವು ಸರ್ವಸಾಮಾನ್ಯ ಜನರಿಗೆ ದಿನನಿತ್ಯದ ವ್ಯವಹಾರದಲ್ಲಿ ಉಪಯುಕ್ತವಾಗುವಂತೆ ಕೊಡಲಾಗಿದೆ. ವಿವಿಧ ಆಚಾರ್ಯರು ಪ್ರಸ್ಥಾನತ್ರಯಿ-ಯಾದ ಉಪನಿಷತ್ತುಗಳು, ಬ್ರಹ್ಮಸೂತ್ರಗಳು ಮತ್ತು ಭಗವದ್ಗೀತೆ ಇವುಗಳ ಮೇಲೆ ಭಾಷ್ಯಗಳನ್ನು ಬರೆದು ತಮ್ಮ ಸಂಪ್ರದಾಯವನ್ನು ಮಂಡಿಸಿದರು. ಅವರ ಅನೇಕ ಅನುಯಾಯಿಗಳು ಮುಂದಿನ ಶತಮಾನಗಳಲ್ಲಿ ತಮ್ಮ ತಾತ್ತ್ವಿಕ ನೆಲೆಯನ್ನು ವಿವರಿಸಲು, ಪ್ರತಿವಾದಿಗಳ ಆಕ್ಷೇಪಗಳನ್ನು ನಿರಾಕರಿಸಲು ಮತ್ತು ಅನ್ಯ ದರ್ಶನ-ಗಳನ್ನು ಖಂಡಿಸಲು ಅನೇಕ ಸಣ್ಣ ಹಾಗು ದೊಡ್ಡ ಗ್ರಂಥಗಳನ್ನು ಗದ್ಯ ಮತ್ತು ಪದ್ಯ ರೂಪಗಳಲ್ಲಿ ಬರೆದರು. ಹೀಗೆ ಭಾರತದಲ್ಲಿ ತತ್ತ್ವಜ್ಞಾನದ ಪರಂಪರೆಯು ಪ್ರದೀರ್ಘ ಹಾಗು ಅಖಂಡವಾಗಿದೆ.

ಅದ್ವೈತ ವೇದಾಂತದ ಪರಂಪರೆಯ ಉಗಮವನ್ನು ನಾವು ವೇದಕಾಲದಲ್ಲಿಯೇ ಕಾಣಬಹುದು. ವೇದಗಳಲ್ಲಿ ನಿಃಸಂಶಯವಾಗಿ ಅಗ್ನಿ, ಇಂದ್ರ, ವರುಣ, ಬೃಹಸ್ಪತಿ, ಅಶ್ವಿನೀಕುಮಾರರು, ಮಿತ್ರ, ಉಷಸ್, ಪೂಷನ್, ಯಮ, ವಿಷ್ಣು ಮತ್ತು ರುದ್ರ ಮುಂತಾದ ದೇವತೆಗಳನ್ನು ಕುರಿತು ಸ್ತುತಿ ಹಾಗು ಪ್ರಾರ್ಥನೆಗಳಿವೆ; ಆದರೆ "ದೇವನೊಬ್ಬನೇ, ವಿದ್ವಾಂಸರು ಅವನನ್ನು ವಿವಿಧ ರೀತಿಯಲ್ಲಿ ವರ್ಣಿಸುತ್ತಾರೆ"

ಎಂಬ ವಿಚಾರವನ್ನೂ ಅಲ್ಲಿ ಕಾಣುತ್ತೇವೆ.[೧] ಆ ಒಬ್ಬ ದೇವನೇ ಎಲ್ಲ ಪ್ರಾಣಿಗಳಿಗೆ ಜೀವ ಮತ್ತು ಶಕ್ತಿಯನ್ನು ಕೊಡುತ್ತಾನೆ; ಅವನ ಆಜ್ಞೆಗಳನ್ನು ಎಲ್ಲ ಪ್ರಾಣಿಗಳು ಮತ್ತು ದೇವತೆಗಳು ಕೂಡ ಪಾಲಿಸುತ್ತಾರೆಂದು ಹಿರಣ್ಯಗರ್ಭಸೂಕ್ತದಲ್ಲಿ ಹೇಳಲಾಗಿದೆ. ಅವನೇ ಎಲ್ಲ ದೇವತೆಗಳ ಪ್ರಾಣ ಹಾಗು ದೇವಾಧಿದೇವನೆಂದು ಆ ಸೂಕ್ತವು ವರ್ಣಿಸುತ್ತದೆ.[೨] ಪರಮಾತ್ಮನ ಮಹಾಶಕ್ತಿಯು ತಾನು ಎಲ್ಲ ದೇವತೆಗಳ ಆಧಾರವೆಂದು ತನ್ನನ್ನು ವಾಗಾಂಭೃಣೀ ಸೂಕ್ತದಲ್ಲಿ ವರ್ಣಿಸುತ್ತದೆ.[೩] ಆ ಒಬ್ಬ ದೇವನೇ ಎಲ್ಲ ದೇವತೆಗಳಿಗೆ ಹೆಸರುಗಳನ್ನು ಕೊಡುತ್ತಾನೆ ಮತ್ತು ಎಲ್ಲ ಲೋಕಗಳು ಅವನನ್ನು ಕುರಿತು ಪ್ರಶ್ನಿಸುತ್ತವೆಯೆಂದು ಇನ್ನೊಂದು ಸೂಕ್ತದಲ್ಲಿ ಹೇಳಲಾಗಿದೆ.[೪] ಪುರುಷನೇ ಈ ಎಲ್ಲ ಜಗತ್ತು; ಭೂತ ಹಾಗು ಭವಿಷ್ಯತ್ ಅವನೇ ಎಂದು ಪುರುಷ ಸೂಕ್ತದಲ್ಲಿ ಹೇಳಿದೆ.[೫]

---

೧) ಸುಪರ್ಣಂ ವಿಪ್ರಾಃ ಕವಯೋ ವಚೋಭಿಃ
ಏಕಂ ಸನ್ತಂ ಬಹುಧಾ ಕಲ್ಪಯನ್ತಿ । — ಋಗ್ವೇದ ೧೦.೧೧೪.೫

೨) (ಅ) ಯ ಆತ್ಮದಾ ಬಲದಾ ಯಸ್ಯ ವಿಶ್ವೇ
ಉಪಾಸತೇ ಪ್ರಶಿಷಂ ಯಸ್ಯ ದೇವಾಃ ।
(ಆ) ತತೋ ದೇವನಾಂ ಸಮವರ್ತತಾಸುರೇಕಃ ।
(ಇ) ಯೋ ದೇವೇಷ್ವಧಿ ದೇವ ಏಕ ಆಸೀತ್ ।
—ಋಗ್ವೇದ ೧೦.೧೨೧.೨, ೭, ೮

೩) ಅಹಂ ರುದ್ರೇಭಿರ್ವಸುಭಿಶ್ಚರಾಮಿ
ಅಹಮಾದಿತ್ಯೈರುತ ವಿಶ್ವದೇವೈಃ ।
ಅಹಂ ಮಿತ್ರಾವರುಣೋಭಾ ಬಿಭರ್ಮಿ
ಅಹಮಿಂದ್ರಾಗ್ನೀ ಅಹಮಶ್ವಿನೋಭಾ ।
—ಋಗ್ವೇದ ೧೦.೧೨೫.೧

೪ ಯೋ ದೇವಾನಾಂ ನಾಮಧಾ ಏಕ ಏವ
ತಂ ಸಂಪ್ರಶ್ನಂ ಭುವನಾ ಯಾನ್ತ್ಯನ್ಯಾ ।
—ಋಗ್ವೇದ ೧೦.೮೨.೩

೫) ಪುರುಷ ಏವ ಇದಂ ಸರ್ವಂ
ಯದ್ ಭೂತಂ ಯಚ್ಚ ಭವ್ಯಮ್ । —ಋಗ್ವೇದ ೧೦.೯೦.೨

ಈ ಮಂತ್ರವು ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ 'ಸರ್ವಂ ಖಲು ಇದಂ ಬ್ರಹ್ಮ' ಅಥವಾ 'ಆತ್ಮಾ ವಾ ಇದಂ ಸರ್ವಮ್' ಈ ಪ್ರಸಿದ್ಧ ವಾಕ್ಯಗಳಿಗೆ ಹಿನ್ನೆಲೆಯಾಗಿದೆಯೆಂದು ಹೇಳಬಹುದು.

ಮೂರು

ಪರಮಾತ್ಮನ ಸಾಕಾರರೂಪದ ವರ್ಣನೆಯಂತೆ ನಿರಾಕಾರರೂಪದ ನಿರೂಪಣೆಯನ್ನೂ ನಾವು ವೇದದಲ್ಲಿ ಕಾಣಬಹುದು. ಸತ್ಯವು ಒಂದೇ ಇದೆ; ಮೇಧಾವಿಗಳು ಅದನ್ನು ವಿವಿಧ ರೀತಿಯಲ್ಲಿ ವರ್ಣಿಸುತ್ತಾರೆಂದು ಒಬ್ಬ ಋಷಿಗಳು ಸ್ಪಷ್ಟಪಡಿಸುತ್ತಾರೆ.[೧] ಇನ್ನೊಬ್ಬ ಋಷಿಗಳು ಜಗತ್ತಿನ ಆದಿಯನ್ನು ಕುರಿತು ಚಿಂತಿಸುತ್ತ ಹೀಗೆ ಹೇಳುತ್ತಾರೆ— "ವಾಯುವಿರದಿದ್ದರೂ ಅದು ಒಂದು ತನ್ನ ಇಚ್ಛೆಯಿಂದಲೇ ಉಸಿರಾಡಿಸಿತು. ಅದನ್ನು ಬಿಟ್ಟರೆ ಬೇರೆ ಏನೂ ಆಗಿರಲಿಲ್ಲ......ಎಲ್ಲೆಡೆಯೂ ಶೂನ್ಯವು ಕವಿದಿರುವಾಗ ಅದು ಒಂದು ತನ್ನ ತಪಸ್ಸಿನ ಮಹಿಮೆಯಿಂದ ಜನಿಸಿತು.[೨] ವಿಶ್ವದ ಉತ್ಪತ್ತಿಯನ್ನು ಕುರಿತು ಒಂದು ಪ್ರಶ್ನೆಯನ್ನು ಆಲಂಕಾರಿಕ ರೀತಿಯಲ್ಲಿ ಕೇಳಲಾಗಿದೆ.[೩] ಅದಕ್ಕೆ ಉತ್ತರ ಹೀಗಿದೆ—"ಯಾವ ಮರದಿಂದ ದ್ಯಾವಾಪೃಥಿವಿ

---

೧) ಇಂದ್ರಂ ಮಿತ್ರಂ ವರುಣಮಗ್ನಿಮಾಹುಃ
ಅಥೋ ದಿವ್ಯ: ಸ ಸುಪರ್ಣೋ ಗರುತ್ಮಾನ್ ।
ಏಕಂ ಸದ್ ವಿಪ್ರಾ ಬಹುಧಾ ವದನ್ತಿ
ಅಗ್ನಿಂ ಯಮಂ ಮಾತರಿಶ್ವಾನಮಾಹುಃ ॥
—ಋಗ್ವೇದ ೧೦.೧೬೪.೪೬

೨) ಆನೀದವಾತಂ ಸ್ವಧಯಾ ತದೇಕಂ
ತಸ್ಮಾದ್ಧಾನ್ಯನ್ನ ಪರಃ ಕಿಂಚನಾಸ ॥
ತುಚ್ಛೇನಾಭ್ವಪಿಹಿತಂ ಯದಾಸೀತ್
ತಪಸಸ್ತನ್ಮಹಿನಾಜಾಯತೈಕಂ ॥ —ಋಗ್ವೇದ ೧೦.೧೨೧.೨,೩

ಹೋಲಿಸಿ—ಮಹತ್ ದೇವಾನಾಮ್ ಅಸುರತ್ವಮೇಕಮ್ ।
—ಋಗ್ವೇದ ೩.೫೫.೧-೨೨

ತದೇಕಂ ದೇವಾನಾಂ ಶ್ರೇಷ್ಠವಪುಷಮ್ ಅಪಶ್ಯಮ್ ।
—ಋಗ್ವೇದ ೫.೬೨.೧

ವಿಶ್ವೇ ದೇವಾಃ ಸಮನಸಃ ಸಕೇತಾಃ
ಏಕಂಕ್ರತುಮ್ ಅಭಿಯನ್ತಿ ಸಾಧು । —ಋಗ್ವೇದ ೬.೯.೫

ಏಕಂ ವಾ ಇದಂ ವಿಬಭೂವ ಸರ್ವಮ್ । —ಋಗ್ವೇದ ೮.೫೮.೨

೩) ಕಿಂ ಸ್ವಿದ್ ವನಂ ಕ ಉ ಸ ವೃಕ್ಷ ಆಸೀತ್
ಯತೋ ದ್ಯಾವಾಪೃಥಿವೀ ನಿಷ್ಟತಕ್ಷುಃ ।
—ಋಗ್ವೇದ ೧೦.೮೧.೪

ಗಳನ್ನು ಕೆತ್ತಿ ತೆಗೆದರೂ, ಆ ಮರ ಬ್ರಹ್ಮವೇ ಆಗಿತ್ತು. ಅದೇ ಭುವನಗಳಿಗೆ ಆಧಾರವಾಗಿ ನಿಂತಿತು."[೧]

ವೇದಗಳಲ್ಲಿ ಕಾಣಬಹುದಾದ, ಸ್ಥೂಲದಿಂದ ಸೂಕ್ಷ್ಮದ ಕಡೆಗೆ ಹೋಗುವ ವೈಚಾರಿಕ ಉತ್ಕ್ರಾಂತಿಯು ಉಪನಿಷತ್ತುಗಳಲ್ಲಿ ಇನ್ನೂ ಹೆಚ್ಚು ಸ್ಪಷ್ಟವಾಗಿ ಮೂಡಿ ಬಂದಿದೆ. ಉಪನಿಷತ್ತುಗಳು ಜಗತ್ತಿನ ಏಕಾತ್ಮತೆಯನ್ನು ಏಕಮುಖವಾಗಿ ಘೋಷಿಸುತ್ತವೆ. ವಿಶ್ವದ ಪ್ರಾರಂಭದಲ್ಲಿ 'ಸತ್' ಮಾತ್ರ ಇದ್ದಿತೆಂದು ಹೇಳ-ಲಾಗಿದೆ. ಅದಕ್ಕೆ 'ಆತ್ಮನ್' ಅಥವಾ 'ಬ್ರಹ್ಮನ್' ಎಂದು ಕರೆದಿದ್ದಾರೆ.[೨] ಮಣ್ಣಿನ ಒಂದು ಮುದ್ದೆಯನ್ನು ತಿಳಿದುಕೊಂಡರೆ ಮಣ್ಣಿನಿಂದ ಮಾಡಿದ ಎಲ್ಲ ವಸ್ತುಗಳು ತಿಳಿದಂತಾಗುತ್ತವೆ; ಏಕೆಂದರೆ ಗಡಿಗೆ, ಮಡಿಕೆ ಮುಂತಾದ ನಾಮರೂಪಗಳಿಗೆ ಆಧಾರವಾಗಿ ಮಣ್ಣೊಂದೇ ಇರುತ್ತದೆ. ಅದರಂತೆಯೇ ಆತ್ಮನನ್ನು ತಿಳಿದು-ಕೊಂಡರೆ ಎಲ್ಲವೂ ತಿಳಿದುಬರುತ್ತದೆ.[೩] ಮನುಷ್ಯನು ಗಾಢವಾದ ಚಿಂತನೆಯಲ್ಲಿ ಮಗ್ನನಾಗಿರುವಾಗ ದ್ವೈತವನ್ನೊಡಗೂಡಿದ ಮತ್ತು ಕ್ಷಣಿಕವಾದ ಸಂಸಾರದ ಅರಿವು ಸಂಪೂರ್ಣವಾಗಿ ಅಳಿದುಹೋಗುತ್ತದೆ. ಈ ಸ್ಥಿತಿಯು ಇಂದ್ರಿಯಗಳ ಹಾಗೂ ಮನಸ್ಸಿನ ಆಚೆಗೆ ಇರುವದು. ಅದನ್ನು ವರ್ಣಿಸುವದು ಸಾಧ್ಯವಿಲ್ಲ.... ಅದು

---

೧) ಬ್ರಹ್ಮ ವನಂ ಬ್ರಹ್ಮ ಸ ವೃಕ್ಷ ಆಸೀತ್
ಯತೋ ದ್ಯಾವಾಪೃಥಿವೀ ನಿಷ್ಟತಕ್ಷುಃ ।
ಮನೀಷಿಣೋ ಮನಸಾ ವಿಬ್ರವೀಮಿ ವಃ
ಬ್ರಹ್ಮಾಧ್ಯತಿಷ್ಠದ್‌ಭುವನಾನಿ ಧಾರಯನ್ ॥
—ತೈತ್ತಿರೀಯ ಬ್ರಾಹ್ಮಣ ೨.೮.೯.೬

೨) ಸದೇವ ಸೋಮ್ಯ ಇದಮಗ್ರೇ ಆಸೀತ್ ಏಕಮೇವಾದ್ವಿತೀಯಮ್ ।
— ಛಾ. ೬.೨.೧

ಆತ್ಮಾ ವಾ ಇದಮೇಕ ಏವಾಗ್ರೇ ಆಸೀತ್ । —ಐ. ಆ. ೨.೪.೧.೧

ಬ್ರಹ್ಮ ವಾ ಇದಮಗ್ರೇ ಆಸೀತ್ । —ಬೃ. ೧.೪.೧೦

೩) ಯಥಾ ಸೋಮ್ಯ ಏಕೇನ ಮೃತ್ಪಿಂಡೇನ ಸರ್ವಂ
ಮೃಣ್ಮಯಂ ವಿಜ್ಞಾತಂ ಸ್ಯಾತ್, ವಾಚಾರಂಭಣಂ ವಿಕಾರೋ
ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್ । —ಛಾ. ೬.೧.೪

ಅವರ್ಣನೀಯವಾದ ಶಾಂತಿ ಮತ್ತು ಉತ್ತಮವಾದ ಶ್ರೇಯಸ್ಸು. ಅದು ಅದ್ವಿತೀಯವಾದುದು. ಅದೇ ಆತ್ಮ.[೧]

ಅದ್ವಯವಾದ ಬ್ರಹ್ಮವೊಂದೇ ಸತ್ಯ, ಅನ್ಯವೆಲ್ಲ ಕೇವಲ ಆಭಾಸವೆಂದು ಬೃಹದಾರಣ್ಯಕ ಉಪನಿಷತ್ತಿನಲ್ಲಿ ಹೇಳಲಾಗಿದೆ. ಈ ಬ್ರಹ್ಮವೇ ಯಾವಾಗಲೂ ದ್ರಷ್ಟಾರನಾಗಿರುವ ಆತ್ಮನು. ಆಭಾಸಮಯವಾದ ಜಗತ್ತಿನಲ್ಲಿ ಅವನು ಮಾತ್ರ ಸತ್ಯ. ಮನುಷ್ಯನಿಗೆ ದಿವ್ಯಜ್ಞಾನ ಪ್ರಾಪ್ತವಾದಾಗ ಆ ಆಭಾಸಗಳು ಲುಪ್ತವಾಗುವವು.[೨] "ನೋಡುವದು, ಕೇಳುವದು, ವಿಚಾರ ಮಾಡುವದು, ಕಲ್ಪಿಸುವದು ಮುಂತಾದ ಕ್ರಿಯೆಗಳು 'ಇನ್ನೊಂದು' ಇದ್ದಂತಿರುವಾಗ ಮಾತ್ರ ಸಾಧ್ಯ. ಆ 'ಇನ್ನೊಂದು' ಇರದಿದ್ದರೆ ನೋಡುವದು ಮುಂತಾದವುಗಳು ಅಸಾಧ್ಯವೇ ಎಂದು ಯಾಜ್ಞವಲ್ಕ್ಯರು ತಿಳಿಸುತ್ತಾರೆ. ಆದರೆ ಆ 'ಇನ್ನೊಂದು' ಕ್ಷಣಭಂಗುರವಾದುದು; ಅದು ಚಿರಸ್ಥಾಯಿಯಲ್ಲ ಎಂಬುದನ್ನು ಅನುಭವವು ತೋರಿಸುತ್ತದೆ.[೩] ಆದ್ದರಿಂದಲೇ ಶ್ರುತಿಯು "ಈ ಜಗತ್ತಿನಲ್ಲಿ ಭಿನ್ನವಾದುದು ಇಲ್ಲವೇ ಇಲ್ಲ" ಎಂದು ಸಾರುತ್ತದೆ.[೪]

ವೇದಗಳಲ್ಲಿ ಮತ್ತು ಉಪನಿಷತ್ತುಗಳಲ್ಲಿ ಕಾಣುವ ಈ ಅದ್ವೈತ ಪರಂಪರೆಯು ಮುಂದಿನ ಗ್ರಂಥಗಳಲ್ಲಿಯೂ ಕಂಡು ಬರುತ್ತದೆ. ಯಾಸ್ಕ ಋಷಿಗಳು ನಿರುಕ್ತದಲ್ಲಿ ಹೀಗೆ ಹೇಳುತ್ತಾರೆ—"ದೇವತೆಯ ಮಹಾಭಾಗ್ಯದ ಮೂಲಕ ಒಂದು ಆತ್ಮನನ್ನು ಅನೇಕ ವಿಧವಾಗಿ ಸ್ತುತಿಸುತ್ತಾರೆ. ಅನ್ಯ ದೇವರು ಒಂದು ಆತ್ಮನ ಅಂಗಾಂಗ-

---

೧) ಅದೃಷ್ಟಮ್ ಅವ್ಯವಹಾರ್ಯಮ್ ಅಗ್ರಾಹ್ಯಮ್ ಅಲಕ್ಷಣಮ್
ಅಚಿಂತ್ಯಮ್ ಅವ್ಯಪದೇಶ್ಯಮ್ ಏಕಾತ್ಮಪ್ರತ್ಯಯಸಾರಂ
ಪ್ರಪಂಚೋಪಶಮಂ ಶಾಂತಂ ಶಿವಮ್ ಅದ್ವೈತಂ
ಚತುರ್ಥಂ ಮನ್ಯನ್ತೇ ಸ ಆತ್ಮಾ। —ಮಾಂಡೂಕ್ಯ ಉಪ. ೭

೨) ಯತ್ರ ಹಿ ದ್ವೈತಮಿವ ಭವತಿ ತದಿತರಃ ಇತರಂ ಜಿಘ್ರತಿ, ತದಿತರಃ ಇತರಂ ಪಶ್ಯತಿ ...ಯತ್ರ ವಾ ಅಸ್ಯ ಸರ್ವಮಾತ್ಮೈವಾಭೂತ್ ತತ್ ಕೇನ ಕಂ ಜಿಘ್ರೇತ್, ತತ್ ಕೇನ ಕಂ ಪಶ್ಯೇತ್.... ।
—ಬೃ. ೨.೪.೧೪

೩) ರಾ. ದ ರಾನಡೆ, "ಯಾಜ್ಞವಲ್ಕ್ಯರು ಮತ್ತು ಆಭಾಸದ ತತ್ತ್ವಜ್ಞಾನ" ತಾತ್ತ್ವಿಕ ಹಾಗೂ ಅನ್ಯ ನಿಬಂಧಗಳು (ಜಮಖಂಡಿ ೧೯೫೬), ಪುಟ ೧೨೩-೨೪ (ಇಂಗ್ಲೀಷ).

೪) ನೇಹ ನಾನಾಸ್ತಿ ಕಿಂಚನ। ಬೃ. ೪.೪.೧೯

ಗಳಾಗಿವೆ."[1] ಮನು ಮಹರ್ಷಿ ಹೀಗೆ ಬೋಧಿಸುತ್ತಾರೆ:— "ಆತ್ಮನೇ ಎಲ್ಲ ದೇವತೆಗಳು; ಎಲ್ಲವೂ ಆತ್ಮನಲ್ಲಿ ನಿಂತಿದೆ. ಆತ್ಮನೇ ಶರೀರಗಳಿಗೆ ಕರ್ಮವನ್ನು ಜೋಡಿಸುತ್ತಾನೆ....ಕೆಲವರು ಇವನಿಗೆ ಅಗ್ನಿಯೆಂದು ಕರೆಯುತ್ತಾರೆ; ಅನ್ಯರು ಮರುತ್ ಅಥವಾ ಪ್ರಜಾಪತಿಯೆಂದು, ಹಲವರು ಇಂದ್ರ ಅಥವಾ ಪ್ರಾಣನೆಂದು ಮತ್ತು ಬೇರೆಯವರು ಶಾಶ್ವತವಾದ ಬ್ರಹ್ಮವೆಂದು ಕರೆಯುತ್ತಾರೆ.[2]

ಆದ್ಯ ಶಂಕರಾಚಾರ್ಯರ ಪರಮಗುರುಗಳಾದ ಗೌಡಪಾದಾಚಾರ್ಯರು ಮಾಂಡೂಕ್ಯ ಉಪನಿಷತ್ತಿನ ಭಾಷ್ಯವಾದ ತಮ್ಮ ಕಾರಿಕೆಗಳಲ್ಲಿ ಅದ್ವೈತ ವೇದಾಂತವನ್ನು ಪ್ರತಿಪಾದಿಸಿದರು. ಅವರ ಸಿದ್ಧಾಂತಕ್ಕೆ 'ಅಜಾತಿ-ವಾದ' ಎಂಬ ಹೆಸರಿದೆ. ಈ ಗ್ರಂಥದಲ್ಲಿ ಆಗಮ, ವೈತಥ್ಯ, ಅದ್ವೈತ ಮತ್ತು ಅಲಾತಶಾಂತಿ ಹೀಗೆ ನಾಲ್ಕು ಪ್ರಕರಣಗಳಿವೆ. ಮೊದಲನೆಯ ಪ್ರಕರಣವು ಜಾಗ್ರತ್, ಸ್ವಪ್ನ, ಸುಷುಪ್ತಿ ಮತ್ತು ತುರೀಯ. ಈ ಅವಸ್ಥೆಗಳನ್ನು ಪ್ರಣವದ ನಾಲ್ಕು ಮಾತ್ರೆಗಳೊಡನೆ ಹೊಂದಿಸುತ್ತದೆ.[3] ಎರಡನೆಯ ಪ್ರಕರಣವು ಜಗತ್ತು ಸ್ವಪ್ನದಂತೆ ಮಿಥ್ಯೆಯಾಗಿದೆಯೆಂಬುದನ್ನು ತಿಳಿಸುತ್ತದೆ.[4] ಮೂರನೆಯ ಪ್ರಕರಣವು ಜೀವಾತ್ಮ—ಪರಮಾತ್ಮರ ಐಕ್ಯವನ್ನು ಪ್ರತಿಪಾದಿಸುತ್ತದೆ.[5] ಜಗತ್ತು ನಿಜವಾಗಿ ನಿರ್ಮಾಣವಾಗುವದು ಸಾಧ್ಯವೇ ಇಲ್ಲ-

---

೧) ಮಹಾಭಾಗ್ಯಾತ್ ದೇವತಾಯಾಃ ಏಕ ಆತ್ಮಾ ಬಹುಧಾ ಸ್ತೂಯತೇ ।
ಏಕಸ್ಯ ಆತ್ಮನಃ ಅನ್ಯೇ ದೇವಾಃ ಪ್ರತ್ಯಂಗಾನಿ ಭವನ್ತಿ । ....
ತಾಸಾಂ ಮಹಾಭಾಗ್ಯಾತ್ ಏಕೈಕಸ್ಯಾ ಅಪಿ ಬಹೂನಿ ನಾಮಧೇಯಾನಿ
ಭವನ್ತಿ । ಅಥವಾ ಕರ್ಮ-ಪೃಥಕ್ತ್ವಾತ್ । —ನಿರುಕ್ತ ೭.೫

೨) ಆತ್ಮೈವ ದೇವತಾಃ ಸರ್ವಾಃ ಸರ್ವಮಾತ್ಮನ್ಯವಸ್ಥಿತಮ್ ।
ಆತ್ಮಾ ಹಿ ಜನಯತ್ಯೇಷಾಂ ಕರ್ಮಯೋಗಂ ಶರೀರಿಣಾಮ್ ॥
ಏನಮೇಕೇ ವದಂತ್ಯಗ್ನಿಂ ಮರುತೋನ್ಯೇ ಪ್ರಜಾಪತಿಮ್ ।
ಇಂದ್ರಮೇಕೇ ಪರೇ ಪ್ರಾಣಮ್ ಅಪರೇ ಬ್ರಹ್ಮ ಶಾಶ್ವತಮ್ ॥
—ಮನುಸ್ಮೃತಿ ೧೨.೧೧೯; ೧೩.೧೨೩

೩) ಅಕಾರೋ ನಯತೇ ವಿಶ್ವಮ್ ಉಕಾರಶ್ಚಾಪಿ ತೈಜಸಮ್ ।
ಮಕಾರಶ್ಚ ಪುನಃ ಪ್ರಾಜ್ಞಂ ನಾಮಾತ್ರೇ ವಿದ್ಯತೇ ಗತಿಃ ॥ ೧.೨೩

೪) ಅವ್ಯಕ್ತಾ ಏವ ಯೇಽನ್ತಸ್ತು ಸ್ಫುಟಾ ಏವ ಚ ಯೇ ಬಹಿಃ ।
ಕಲ್ಪಿತಾ ಏವ ತೇ ಸರ್ವೇ ವಿಶೇಷಸ್ತ್ವಿನ್ದ್ರಿಯಾನ್ತರೇ ॥ ೨.೧೫

೫) ಜೀವಾತ್ಮನೋರನನ್ಯತ್ವಮ್ ಅಭೇದೇನ ಪ್ರಶಸ್ಯತೇ ।
ನಾನಾತ್ವಂ ನಿಂದ್ಯತೇ ಯಚ್ಚ ತದೇವಂ ಹಿ ಸಮಂಜಸಮ್ । ೩.೧೩

ವೆಂದು ನಾಲ್ಕನೆಯ ಪ್ರಕರಣವು ಸಿದ್ಧಗೊಳಿಸುತ್ತದೆ. ಸುಡುವ ವಸ್ತುವನ್ನು ವೇಗದಿಂದ ತಿರುಗಿಸಿದರೆ ತೋರುವ ಅಗ್ನಿಚಕ್ರದಂತೆ ಈ ಜಗತ್ತು ಒಂದು ತೋರಿಕೆ ಮಾತ್ರ.[೧]

ಅದ್ವೈತ ವೇದಾಂತದ ಪ್ರಣೇತಾರರಲ್ಲಿ ಆದ್ಯ ಶಂಕರಾಚಾರ್ಯರು (ಕ್ರಿ. ಶ. ೭೮೮–೮೨೦) ಪ್ರಮುಖರೆಂದು ಪರಿಗಣಿಸಲಾಗಿದೆ. ಮುಖ್ಯ ಉಪನಿಷತ್ತುಗಳು, ಬ್ರಹ್ಮಸೂತ್ರಗಳು ಮತ್ತು ಭಗವದ್ಗೀತೆ ಇವುಗಳ ಮೇಲೆ ಅವರು ಭಾಷ್ಯಗಳನ್ನು ಬರೆದರಲ್ಲದೇ ಅನೇಕ ಚಿಕ್ಕ ಪ್ರಕರಣಗ್ರಂಥಗಳನ್ನೂ ಭಕ್ತಿಪೂರ್ಣವಾದ ಸ್ತೋತ್ರಗಳನ್ನೂ ಬರೆದರು. ಚರ್ಪಟಪಂಜರೀ, ಮೋಹಮುದ್ಗರ ಮುಂತಾದ ಪ್ರಬೋಧ ಗೀತೆಗಳಲ್ಲಿರುವ ಉಪದೇಶಪರ ಪದ್ಯಗಳು ಬಹಳ ಲೋಕಪ್ರಿಯವಾಗಿವೆ. ಅವರ ಶ್ರೇಷ್ಠವಾದ ವ್ಯಕ್ತಿತ್ವದ ಅನೇಕ ಮುಖಗಳನ್ನು ನಾವು ಅವರ ಕೃತಿಗಳಲ್ಲಿ ಕಾಣುತ್ತೇವೆ. ಅವರು ಉತ್ತಮ ವಿದ್ವಾಂಸರು, ಶ್ರೇಷ್ಠ ತಾರ್ಕಿಕರು, ಗಂಭೀರ ತತ್ತ್ವಚಿಂತಕರು, ಗಂಗಾಪ್ರವಾಹದಂತೆ ನಿರ್ಮಲ ಹಾಗೂ ಶಕ್ತಿಪೂರ್ಣ ಲೇಖನಶೈಲಿಯುಳ್ಳವರು, ಅಚಲ ದೇವಭಕ್ತರು ಮತ್ತು ನಿಷ್ಠೆಯಿಂದ ಸಮಾಜಕಾರ್ಯ ಮಾಡುವ ಮಹಾಪುರುಷರು. ಅವರ ಪ್ರಬೋಧಗೀತೆಗಳಲ್ಲಿ ಕಾಣುವ 'ಆಂತರಿಕತೆ'ಯನ್ನು ಬೇರೆಡೆಯಲ್ಲಿ ಕ್ವಚಿತ್ತಾಗಿ ಕಾಣುತ್ತೇವೆ. ಬಹಿರ್ಮುಖರಾದ ಜನರನ್ನು ಅಂತರ್ಮುಖರನ್ನಾಗಿ ಮಾಡಲು ಶಂಕರಾಚಾರ್ಯರು ಬಯಸುತ್ತಾರೆ. ಶಂಕರಾಚಾರ್ಯರು ಮಹಾ ಯೋಗಿಗಳಾಗಿದ್ದರೆಂಬುದು ಅವರ 'ಲಘುವಾಕ್ಯವೃತ್ತಿ' ಮುಂತಾದ ಪ್ರಬೋಧಗೀತೆಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ.[೨] ಯೋಗಾಭ್ಯಾಸದ ಸೂಕ್ಷ್ಮ ಮನೋವಿಜ್ಞಾನವು ಈ ಗೀತೆಗಳಲ್ಲಿ ಸಮರ್ಥರೀತಿಯಿಂದ ಪ್ರಕಟವಾಗಿದೆ. ಇದನ್ನು ವ್ಯಕ್ತ ಮಾಡಿದ ವ್ಯಕ್ತಿಯು ತನ್ನ ಶುದ್ಧವಾದ ಮನಸ್ಸನ್ನು ಸಂಪೂರ್ಣವಾಗಿ ಸ್ಥಿರಗೊಳಿಸಿ

---

೧) ಋಜುವಕ್ರಾದಿಕಾಭಾಸಮ್ ಅಲಾತಸ್ಪನ್ದಿತಂ ಯಥಾ ।
ಗ್ರಹಣಗ್ರಾಹಕಾಭಾಸಂ ವಿಜ್ಞಾನಸ್ಪನ್ದಿತಂ ತಥಾ ॥ ೪.೪೭

೨) ಮುಕ್ತಾಭಿರಾವೃತಂ ಸೂತ್ರಂ ಮುಕ್ತಯೋರ್ಮಧ್ಯ ಈಕ್ಷ್ಯತೇ ।
ತಥಾ ವೃತ್ತಿವಿಕಲ್ಪೈಶ್ಚಿತ್ ಸ್ಪಷ್ಟಾ ಮಧ್ಯೇ ವಿಕಲ್ಪಯೋಃ ॥
ನಷ್ಟೇ ಪೂರ್ವವಿಕಲ್ಪೇ ತು ಯಾವದನ್ಯಸ್ಯ ನೋದಯಃ ।
ನಿರ್ವಿಕಲ್ಪಕಚೈತನ್ಯಂ ಸ್ಪಷ್ಟಂ ತಾವದ್ವಿಭಾಸತೇ ॥
ಏಕ-ದ್ವಿ-ತ್ರಿ-ಕ್ಷಣೇಷ್ವೇವಂ ವಿಕಲ್ಪಸ್ಯ ನಿರೋಧನಮ್ ।
ಕ್ರಮೇಣಾಭ್ಯಸ್ಯತಾಂ ಯತ್ನಾದ್ ಬ್ರಹ್ಮಾನುಭವಕಾಂಕ್ಷಿಭಿ ॥
—ಲಘುವಾಕ್ಯವೃತ್ತಿ ೧೦-೧೨

ಪ್ರದೀರ್ಘ ಕಾಲದ ವರೆಗೆ ಆತ್ಮಾನುಭವವನ್ನು ಪಡೆದಿರಬೇಕು. ಈ ಅಂತರಿಕ ಜ್ಞಾನವು ಬೇರೆಯವರಲ್ಲಿ ಕ್ವಚಿತ್ತಾಗಿ ಕಾಣಿಸುತ್ತದೆ. ನಮ್ಮ ಮನಸ್ಸಿನ ಮೇಲೆ ಪರಿಣಾಮವಾಗುವದು ಕೇವಲ ಅವರ ತಾರ್ಕಿಕ ಕೌಶಲ್ಯ ಅಥವಾ ಪಾಂಡಿತ್ಯವಲ್ಲ; ಅವರಲ್ಲಿ ಕಾಣುವ 'ಯೋಗಿ'ಗೆ ನಾವು ಮರಳಾಗುತ್ತೇವೆ. ನ್ಯಾಯಶಾಸ್ತ್ರದ ಸೂಕ್ಷ್ಮತೆಗಳಲ್ಲಿ ಹೆಚ್ಚು ಪಳಗಿದ ತಾರ್ಕಿಕರು ಇರಬಹುದು; ಅವರು ತಮ್ಮ ವಿಚಾರಗಳನ್ನು ಹೆಚ್ಚು ತರ್ಕಕರ್ಕಶ ಹೇತುಗಳಿಂದ ಮಂಡಿಸಬಹುದು; ಆದರೆ ಆದ್ಯ ಶಂಕರಾಚಾರ್ಯರ ಮಾತುಗಳಲ್ಲಿ ಕಂಡುಬರುವ ಅಂತಃಪ್ರಜ್ಞೆಯು ಬೇರೆಯವರಲ್ಲಿ ಕಾಣುವದು ದುರ್ಲಭವಾದುದು.

ಅದ್ವೈತ ಪರಂಪರ

ಅದ್ವೈತ ವೇದಾಂತವು ಒಂದು ಶ್ರೇಷ್ಠವಾದ ದರ್ಶನವಾಗಿದ್ದು ಅದರ ಸಿದ್ಧಾಂತಗಳನ್ನು ಪ್ರತಿಪಾದಿಸುವ ಗ್ರಂಥಗಳ ಸಂಖ್ಯೆಯು ಬಹಳ ದೊಡ್ಡದಾಗಿದೆ. ಮೌಲಿಕತೆ, ರಭಸ ಮತ್ತು ತತ್ತ್ವಜ್ಞಾನದ ಅಂತಃಪ್ರಜ್ಞೆಯುಳ್ಳ ವಿದ್ವಾಂಸರ ಮಾಲಿಕೆಯು ವಿಶಾಲವಾಗಿದೆ. ಅವರು ಅನೇಕ ಶತಮಾನಗಳಿಂದ ಹರಿದು ಬಂದ ಮತ್ತು ಅಖಂಡವಾದ ಅದ್ವೈತ ಪರಂಪರೆಯ ಪ್ರತೀಕರಾಗಿದ್ದಾರೆ. ಆ ಪರಂಪರೆಯು ಹೀಗಿದೆ :—

ಒಂಬತ್ತನೆಯ ಶತಮಾನ

ಮಂಡನಮಿಶ್ರ—ಬ್ರಹ್ಮಸಿದ್ಧಿ

ಸುರೇಶ್ವರ—ನೈಷ್ಕರ್ಮ್ಯ-ಸಿದ್ಧಿ, ಬ್ರಹದಾರಣ್ಯಕೋಪನಿಷದ್ ಭಾಷ್ಯವಾರ್ತಿಕ

ಪದ್ಮಪಾದ—ಪಂಚಪಾದಿಕಾ

ಸರ್ವಜ್ಞಾತ್ಮಮುನಿ—ಸಂಕ್ಷೇಪಶಾರೀರಕ

ವಾಚಸ್ಪತಿಮಿಶ್ರ—ಭಾಮತೀ

ತೋಟಕಾಚಾರ್ಯ—ಶ್ರುತಿಸಾರ-ಸಮುದ್ಧರಣ

ಹತ್ತನೆಯ ಶತಮಾನ

ಜ್ಞಾನೋತ್ತಮ–ಮಿಶ್ರ—ವಾರ್ತಿಕ-ಭಾಷ್ಯ

ಒಂಬತ್ತು

ಹನ್ನೊಂದನೆಯ ಶತಮಾನ

ವಿಮುಕ್ತಾತ್ಮನ್—ಇಷ್ಟಸಿದ್ಧಿ
ಆನಂದಬೋಧ ಭಟ್ಟಾರಕಾಚಾರ್ಯ—ನ್ಯಾಯಮಕರಂದ

ಹನ್ನೆರಡನೆಯ ಶತಮಾನ

ಶ್ರೀಹರ್ಷ—ಖಂಡನ ಖಂಡಖಾದ್ಯ

ಹದಿಮೂರನೆಯ ಶತಮಾನ

ಚಿತ್ಸುಖ—ತತ್ತ್ವಪ್ರದೀಪಿಕಾ, ಖಂಡನ-ಖಂಡಖಾದ್ಯ ಭಾಷ್ಯ
ಪ್ರಕಾಶಾತ್ಮನ್—ಪಂಚಪಾದಿಕಾ-ವಿವರಣ
ಅಮಲಾನಂದ—ಕಲ್ಪತರು
ಆನಂದಗಿರಿ—ಶಾಂಕರಭಾಷ್ಯ, ವಾಕ್ಯವೃತ್ತಿ ಮುಂತಾದವುಗಳ ಟಿಪ್ಪಣಿ

ಹದಿನಾಲ್ಕನೆಯ ಶತಮಾನ

ವಿದ್ಯಾರಣ್ಯ—ಪಂಚದಶೀ, ಜೀವನ್ಮುಕ್ತಿವಿವೇಕ, ವಾರ್ತಿಕಸಾರ, ವಿವರಣ-ಪ್ರಮೇಯ-ಸಂಗ್ರಹ
ಗೋವಿಂದಾನಂದ—ರತ್ನಪ್ರಭಾ
ಅಖಂಡಾನಂದ—ತತ್ತ್ವದೀಪನ
ರಾಮಾನಂದ—ವೇದಾಂತ-ಕೌಮುದೀ

ಹದಿನೈದನೆಯ ಶತಮಾನ

ಸದಾನಂದ—ವೇದಾಂತ-ಸಾರ
ನೃಸಿಂಹಾಶ್ರಮ—ಅದ್ವೈತ ದೀಪಿಕಾ, ಭೇದಧಿಕ್ಕಾರ, ವೇದಾಂತ-ರತ್ನಕೋಶ, ತತ್ತ್ವಬೋಧಿನಿ
ಪ್ರಕಾಶಾನಂದ—ವೇದಾಂತ-ಸಿದ್ಧಾಂತ-ಮುಕ್ತಾವಲಿ
ಜಗನ್ನಾಥಾಶ್ರಮ—ಭಾಷ್ಯದೀಪಿಕಾ

ಹದಿನಾರನೆಯ ಶತಮಾನ

ಅಪ್ಪಯ್ಯ ದೀಕ್ಷಿತ—ಸಿದ್ಧಾಂತ-ಲೇಶ, ಪರಿಮಲ, ನ್ಯಾಯರಕ್ಷಾಮಣಿ, ನಯಮಂಜರೀ
ಮಧುಸೂದನ ಸರಸ್ವತೀ—ಅದ್ವೈತಸಿದ್ಧಿ, ಸಿದ್ಧಾಂತಬಿಂದು, ಗೂಢಾರ್ಥ-ದೀಪಿಕಾ
ಧರ್ಮರಾಜಾಧ್ವರೀಂದ್ರ—ವೇದಾಂತ ಪರಿಭಾಷಾ

ನಾರಾಯಣಾಶ್ರಮ—ತತ್ತ್ವವಿವೇಕ-ದೀಪನ, ಭೇದಧಿಕ್ಕಾರ-ಸತ್‌ಕ್ರಿಯಾ
ಅದ್ವೈತಾನಂದ—ಬ್ರಹ್ಮವಿದ್ಯಾಭರಣ

ಹದಿನೇಳನೆಯ ಶತಮಾನ

ಕೃಷ್ಣಾನಂದ—ಸಿದ್ಧಾಂತ-ಸಿದ್ಧಾಂಜನ
ಭಟ್ಟೋಜೀ ದೀಕ್ಷಿತ—ತತ್ತ್ವಕೌಸ್ತುಭ, ವೇದಾಂತ-ತತ್ತ್ವದೀಪನ-ವ್ಯಾಖ್ಯಾ
ರಾಮತೀರ್ಥ—ಅನ್ವಯ-ಪ್ರಕಾಶಿಕಾ (ಪಂಚಪಾದಿಕಾ-ವ್ಯಾಖ್ಯಾ)
ಲಕ್ಷ್ಮೀನೃಸಿಂಹ—ಆಭೋಗ (ಕಲ್ಪತರು-ವ್ಯಾಖ್ಯಾ)

ಹದಿನೆಂಟನೆಯ ಶತಮಾನ

ಸದಾನಂದ ಕಾಶ್ಮೀರಕ—ಅದ್ವೈತ-ಬ್ರಹ್ಮ-ಸಿದ್ಧಿ
ನರಸಿಂಹ ಭಟ್ಟ—ಅದ್ವೈತ-ಚಂದ್ರಿಕಾ (ಭೇದಧಿಕ್ಕಾರ-ವ್ಯಾಖ್ಯಾ)
ಬ್ರಹ್ಮೇಂದ್ರ ಸರಸ್ವತೀ—೧೦೮ ಉಪನಿಷತ್ತುಗಳ ಟಿಪ್ಪಣಿ

ಹತ್ತೊಂಬತ್ತನೆಯ ಶತಮಾನ

ಗಂಗಾಧರ ಸರಸ್ವತೀ—ವೇದಾಂತ-ಸಿದ್ಧಾಂತ-ಸೂಕ್ತಿಮಂಜರೀ,
ಸಿದ್ಧಾಂತ-ಬಿಂದು-ಶೀಕರ (ಸಿದ್ಧಾಂತ ಲೇಶ-ವ್ಯಾಖ್ಯಾ)

ಹೀಗೆ ಪ್ರಮುಖವಾದ ಅದ್ವೈತ-ಆಚಾರ್ಯರು ಮತ್ತು ಅವರ ಹಲವು ಕೃತಿಗಳಾಗಿವೆ. 'ಸ್ವಾರಾಜ್ಯಸಿದ್ಧಿ'ಯು ಈ ಪ್ರಖ್ಯಾತ ಪರಂಪರೆಗೆ ಸೇರಿದ ಒಂದು ಗ್ರಂಥ.

(೨)

‘ಸಿದ್ಧಿ’-ಸಾಹಿತ್ಯ

ಅದ್ವೈತ–ವೇದಾಂತದ ಇತಿಹಾಸದಲ್ಲಿ ‘ಸಿದ್ಧಿ’ ಸಾಹಿತ್ಯಕ್ಕೆ ನಿಜವಾಗಿ ಒಂದು ವಿಶೇಷವಾದ ಸ್ಥಾನವಿದೆ. ‘ಸಿದ್ಧಿ’ ಅಂದರೆ ಪರಿಶುದ್ಧವಾದ ವಿಚಾರಣೆಯಿಂದ ಹುಟ್ಟುವ ಸುನಿಶ್ಚಿತವಾದ ಸಿದ್ಧಾಂತ. ತಾರ್ಕಿಕ ಚರ್ಚೆಯು ಇದಕ್ಕೆ ಹಿನ್ನೆಲೆಯಾಗಿರುತ್ತದೆ. ಅದ್ವೈತ ತತ್ತ್ವಜ್ಞಾನದ ಅನುಯಾಯಿಗಳಿಗೆ ‘ಸಿದ್ಧಿ’ (ಅಂದರೆ ಸಿದ್ಧಾಂತ) ಈ ಶಬ್ದದ ಬಗೆಗೆ ವಿಶೇಷವಾದ ಮೆಚ್ಚುಗೆ ಇತ್ತೆಂಬುದನ್ನು ನಾವು ಕೆಳಗಿನ ಪ್ರಮಾಣ ಗ್ರಂಥಗಳಿಂದ ಕಂಡುಕೊಳ್ಳಬಹುದು.

೧ ಮಂಡನಮಿಶ್ರ ಇವರು ಬರೆದ ಬ್ರಹ್ಮ–ಸಿದ್ಧಿ
೨. ಸುರೇಶ್ವರ ಇವರು ಬರೆದ ನೈಷ್ಕರ್ಮ್ಯ–ಸಿದ್ಧಿ
೩. ವಿಮುಕ್ತಾತ್ಮನ್ ಇವರು ಬರೆದ ಇಷ್ಟ–ಸಿದ್ಧಿ
೪. ಮಧುಸೂದನ ಸರಸ್ವತೀ ಇವರು ಬರೆದ ಅದ್ವೈತ–ಸಿದ್ಧಿ
೫. ಸದಾನಂದ ಕಾಶ್ಮೀರಕ ಇವರು ಬರೆದ ಅದ್ವೈತ-ಬ್ರಹ್ಮ–ಸಿದ್ಧಿ
೬. ಗಂಗಾಧರ ಸರಸ್ವತೀ ಇವರು ಬರೆದ ಸ್ವಾರಾಜ್ಯ–ಸಿದ್ಧಿ

ಈ ಆರು ‘ಸಿದ್ಧಿ’ ಗ್ರಂಥಗಳು ಅದ್ವೈತ-ವೇದಾಂತದ ಮುಖ್ಯ ತತ್ತ್ವಗಳನ್ನು ಕುರಿತು ಬರೆದ ಸಂಗ್ರಾಹಕ ಕೃತಿಗಳಾಗಿವೆ ಮತ್ತು ಅದ್ವೈತ ತತ್ತ್ವಜ್ಞಾನದ ವಿಶೇಷವಾದ ಅಂಗಗಳನ್ನು ಅಥವಾ ಅಂಶಗಳನ್ನು ಮುಖ್ಯವಾಗಿ ತಿಳಿಸುತ್ತವೆ.[೧]

---

೧) ‘ಸಿದ್ಧಿ’ ಶಬ್ದವು ಅನೇಕ ಬೌದ್ಧ ಗ್ರಂಥಗಳಲ್ಲಿ ಕಂಡು ಬರುತ್ತದೆ:—
ವಸುಬಂಧು ಬರೆದ ವಿಜ್ಞಪ್ತಿ-ಮಾತ್ರತಾ-ಸಿದ್ಧಿ
ಧರ್ಮಕೀರ್ತಿ ಬರೆದ ಬಾಹ್ಯಾರ್ಥಸಿದ್ಧಿ ಮತ್ತು ಸಂತಾನಾಂತರ-ಸಿದ್ಧಿ
ಶಾಂತರಕ್ಷಿತ ಬರೆದ ತತ್ತ್ವ-ಸಿದ್ಧಿ
ಇಂದ್ರಭೂತಿ ಬರೆದ ಜ್ಞಾನಸಿದ್ಧಿ
ರತ್ನಕೀರ್ತಿ ಬರೆದ ಅಪೋಹಸಿದ್ಧಿ ಮತ್ತು ಕ್ಷಣಭಂಗಸಿದ್ಧಿ
ಉದಯನಾಚಾರ್ಯ ಬರೆದ ಪ್ರಬೋಧಸಿದ್ಧಿ

ವಿಶಿಷ್ಟಾದ್ವೈತದ ಅನುಯಾಯಿಗಳಾದ ಯಾಮುನಾಚಾರ್ಯರು ಆತ್ಮಸಿದ್ಧಿ, ಸಂವಿತ್‌ಸಿದ್ಧಿ ಮತ್ತು ಈಶ್ವರಸಿದ್ಧಿಯೆಂಬ ಮೂರು ಚಿಕ್ಕ ಗ್ರಂಥಗಳನ್ನು (ಸಿದ್ಧಿತ್ರಯ)

(ಉಳಿದ ಕೆಳನೋಟಕ್ಕೆ ಮುಂದಿನ ಪೇಜಿನಲ್ಲಿ ನೋಡಿರಿ)

೧. ಬ್ರಹ್ಮ-ಸಿದ್ಧಿ

ಮಂಡನಮಿಶ್ರರು ಆದ್ಯ ಶಂಕರಾಚಾರ್ಯರ ಸಮಕಾಲೀನರಾಗಿದ್ದು ಬ್ರಹ್ಮ-ಸಿದ್ಧಿಯು ಅದ್ವೈತ ವೇದಾಂತದ 'ಸಿದ್ಧಿ' ಗ್ರಂಥಗಳಲ್ಲಿ ಕಾಲಾನುಕ್ರಮವಾಗಿ ಮೊದಲ-ನೆಯದಾಗಿದೆ. ಅದು ಗದ್ಯದಲ್ಲಿ ಬರೆಯಲಾಗಿದ್ದು ಮಧ್ಯಮಧ್ಯದಲ್ಲಿ ಶ್ಲೋಕಗಳಿವೆ. ಈ ಗ್ರಂಥದಲ್ಲಿ ನಾಲ್ಕು ಭಾಗಗಳಿವೆ. ಬ್ರಹ್ಮಕಾಂಡವೆಂಬ ಮೊದಲನೆಯ ಭಾಗದಲ್ಲಿ ಮಂಡನಮಿಶ್ರರು ಬ್ರಹ್ಮಸ್ವರೂಪವನ್ನು ಚರ್ಚಿಸುತ್ತಾರೆ. ತರ್ಕಕಾಂಡವೆಂಬ ಎರಡ-ನೆಯ ಭಾಗದಲ್ಲಿ ಅವರು 'ಭೇದವು' ಪ್ರತ್ಯಕ್ಷವಾಗುವದಿಲ್ಲ ಎಂದು ಸಿದ್ಧಪಡಿಸಿದ್ದಾರೆ. ಆದ್ದರಿಂದ ಪ್ರತ್ಯಕ್ಷವು ಭೇದವನ್ನು ತೋರಿಸುತ್ತದೆ ಎಂಬ ಭ್ರಮೆಯಿಂದ ಯಾರೂ ಉಪನಿಷತ್ತುಗಳ ಅರ್ಥವನ್ನು ದ್ವೈತಪರವಾಗಿ ಮಾಡಬಾರದೆಂದು ಅವರ ಅಭಿಪ್ರಾಯ. ನಿಯೋಗಕಾಂಡವೆಂಬ ಮೂರನೆಯ ಭಾಗವು ಉಳಿದ ಭಾಗಗಳಿಗಿಂತ ಹೆಚ್ಚು ವಿಸ್ತೃತವಾಗಿದ್ದು ಅದರಲ್ಲಿ ಮಂಡನಮಿಶ್ರರು 'ಶ್ರುತಿಯು ನಮಗೆ ಕೇವಲ ವಿಧಿ ನಿಷೇಧಗಳನ್ನು ಕುರಿತು ಆಜ್ಞಾಪಿಸುತ್ತದೆ' ಎಂಬ ಮೀಮಾಂಸಕರ ಮತವನ್ನು ಖಂಡಿಸಿದ್ದಾರೆ. ಸಿದ್ಧಿಕಾಂಡವೆಂಬ ನಾಲ್ಕನೆಯ ಭಾಗವು ಬಹಳ ಚಿಕ್ಕದಾಗಿದ್ದು ಅದರಲ್ಲಿ ಅವರು 'ನಮಗೆ ಕಾಣುವ ಜಗತ್ತಿಗೆ ನಿಜವಾದ ಅಸ್ತಿತ್ವವಿಲ್ಲ; ಜೀವಾತ್ಮನ ಅಜ್ಞಾನದ ಮೂಲಕ ಅದರ ಅಸ್ತಿತ್ವವಿದೆ' ಎಂದು ತೋರಿಸಿದ್ದಾರೆ.

ತಾರ್ಕಿಕ ರೀತಿಯ ವಾದವನ್ನು ಪ್ರಾರಂಭಿಸಿದ ಅದ್ವೈತ ಆಚಾರ್ಯರಲ್ಲಿ ಮಂಡನಮಿಶ್ರರು ಮೊದಲನೆಯವರೆಂದು ಹೇಳಬಹುದು. ಈ ದಿಕ್ಕಿನಲ್ಲಿ ಅವರು ಸಾಧಿಸಿದ ಯಶಸ್ಸನ್ನು ತರ್ಕಕಾಂಡದಲ್ಲಿ ಅವರು ಮಾಡಿದ 'ಭೇದದ ಪ್ರತ್ಯಕ್ಷತೆಯ ಖಂಡನೆ'ಯಿಂದ ನಾವು ತಿಳಿದುಕೊಳ್ಳಬಲ್ಲೆವು.[1] ಮುಂದಿನ ಎಲ್ಲ ಶತಮಾನಗಳ

ಬರೆದರು. ಅದೇ ಪಂಥದ ವೇದಾಂತದೇಶಿಕರು ತಮ್ಮ ತತ್ತ್ವಮುಕ್ತಾ ಕಲಾಪವೆಂಬ ಗ್ರಂಥದ ಮೇಲೆ ಸರ್ವಾರ್ಥಸಿದ್ಧಿಯೆಂಬ ವ್ಯಾಖ್ಯೆಯನ್ನು ಬರೆದಿದ್ದಾರೆ.

ಆಚಾರ್ಯ ಮಂಡನರು ಸ್ಫೋಟಸಿದ್ಧಿಯೆಂಬ ಗ್ರಂಥವನ್ನು ಬರೆದರು. ಭರತ-ಮಿಶ್ರರು ಅದೇ ಹೆಸರಿನ ಇನ್ನೊಂದು ಗ್ರಂಥವನ್ನು ಬರೆದಿದ್ದಾರೆ. ವಾಕ್ಯಪದೀಯ ಗ್ರಂಥ ಬರೆದ ಭರ್ತೃಹರಿಯಂತಹ ವೈಯಾಕರಣಿಗಳು ಪ್ರತಿಪಾದಿಸುವ ಅದ್ವೈತ-ತತ್ತ್ವದ ಸ್ಫೋಟ-ಸಿದ್ಧಾಂತವನ್ನು ಈ ಗ್ರಂಥಗಳು ಪ್ರಸ್ತಾಪಿಸುತ್ತವೆ.

೧) ನೋಡಿ—ದಾಸಗುಪ್ತ, ಭಾರತೀಯ ತತ್ತ್ವಜ್ಞಾನದ ಚರಿತ್ರೆ, ಭಾಗ ೨, ಪು. ೯೨-೯೮ (ಇಂಗ್ಲೀಷ).

ಮೌಲಿಕ ಗ್ರಂಥಗಳಲ್ಲಿ ಹಾಗು ವ್ಯಾಖ್ಯೆಗಳಲ್ಲಿ ಇಂತಹ ತಾರ್ಕಿಕ ವಾದಗಳ ಬಗೆಗಿರುವ ಆಸಕ್ತಿಯನ್ನು ಅವ್ಯಾಹತವಾಗಿ ಮುಂದುವರಿಸಲಾಯಿತು. ಅನೇಕ ಶ್ರೇಷ್ಠ ವಿದ್ವಾಂಸರು ತಮ್ಮ ಗ್ರಂಥಗಳಲ್ಲಿ ಬ್ರಹ್ಮಸಿದ್ಧಿಯನ್ನು ಉದಾಹರಿಸಿದ್ದಾರೆ.[೧]

೨. ನೈಷ್ಕರ್ಮ್ಯ-ಸಿದ್ಧಿ

ಆದ್ಯ ಶಂಕರಾಚಾರ್ಯರ ನಾಲ್ಕು ಮುಖ್ಯ ಶಿಷ್ಯರಲ್ಲಿ ಸುರೇಶ್ವರರು ಒಬ್ಬ-ರಾಗಿದ್ದು ಅವರ ನೈಷ್ಕರ್ಮ್ಯ-ಸಿದ್ಧಿಯು 'ಸಿದ್ಧಿ' ಸಾಹಿತ್ಯದಲ್ಲಿ ಎರಡನೆಯದು. 'ಕರ್ಮ' ಮತ್ತು 'ಜ್ಞಾನ' ಇವುಗಳಲ್ಲಿರುವ ವಿರೋಧವನ್ನು ತೋರಿಸಿ 'ಜ್ಞಾನ'ವು 'ಕರ್ಮ'ದ ಸ್ತರವನ್ನು ಹೇಗೆ ಮೀರಿದೆ ಮತ್ತು ಮೋಕ್ಷಕ್ಕೆ ಏಕಮೇವ ಸಾಧನವಾಗಿದೆ. ಎಂಬುದನ್ನು ಅದು ಸ್ಪಷ್ಟವಾಗಿ ತಿಳಿಸುತ್ತದೆ.

ನೈಷ್ಕರ್ಮ್ಯ-ಸಿದ್ಧಿಯು ಗದ್ಯದಲ್ಲಿ ಬರೆಯಲಾಗಿದ್ದರೂ ಅದು ಅನೇಕ ಸುಂದರ ಶ್ಲೋಕಗಳನ್ನು ಒಳಗೊಂಡಿದೆ. ಇದರಲ್ಲಿ ನಾಲ್ಕು ಅಧ್ಯಾಯಗಳಿವೆ ಮೊದಲನೆಯ ಅಧ್ಯಾಯದಲ್ಲಿ ವೈದಿಕಕರ್ಮ ಮತ್ತು ವೇದಾಂತದ ಜ್ಞಾನಸಾಧನೆ ಇವುಗಳ ಸಂಬಂಧ ವನ್ನು ಚರ್ಚಿಸಲಾಗಿದೆ. 'ಆತ್ಮನ ಏಕತೆಯನ್ನು ಕಾಣದೆ ಇರುವದೇ ಅವಿದ್ಯೆ' ಎಂದು ವ್ಯಾಖ್ಯೆಯನ್ನು ನೀಡಿದ್ದಾರೆ. ಈ ಅವಿದ್ಯೆಯೇ ಪುನರ್ಜನ್ಮಕ್ಕೆ ಕಾರಣವಾಗಿದ್ದು ಅವಿದ್ಯೆಯ ನಾಶವೇ ಮೋಕ್ಷಕ್ಕೆ ದಾರಿಯಾಗುತ್ತದೆ.

"ವೇದಗಳಲ್ಲಿ ಸಮ್ಯಗ್‌ಜ್ಞಾನದ ಪ್ರಾಪ್ತಿಯನ್ನು ಕುರಿತು ಯಾವ ವಿಧಿಯೂ ಇಲ್ಲ; ಆದ್ದರಿಂದ ವೈದಿಕ ಕರ್ಮಗಳನ್ನು ಮಾಡಿಯೇ ಮೋಕ್ಷವನ್ನು ಸಾಧಿಸಬೇಕು" ಇದು ಮೀಮಾಂಸಕರ ಮತ. ಇದಕ್ಕೆ ವಿರುದ್ಧವಾಗಿ "ಮೋಕ್ಷಕ್ಕೆ ಕರ್ಮಕಾಂಡದ

---

೧) ನ್ಯಾಯಕಂತಲಿ (ಪ್ರಶಸ್ತಪಾದರ ವೈಶೇಷಿಕ-ಸೂತ್ರ-ಭಾಷ್ಯದ ಮೇಲೆ ಶ್ರೀಧರ ಇವರು ಬರೆದ ವ್ಯಾಖ್ಯೆ) ಪು. ೨೬೮; ವಿವರಣ-ಪ್ರಮೇಯ-ಸಂಗ್ರಹ ಪು. ೨೨೪; ಚಿತ್ಸುಖಿ ೧ ೨೬, ೪.೬; ಪಂಚಪಾದಿಕಾ-ವಿವರಣ ಪು. ೩೨; ನ್ಯಾಯಕಣಿಕಾ ಪು. ೮೦.

ಮಂಡನಮಿಶ್ರ ಮತ್ತು ಸುರೇಶ್ವರ ಇವರ ವ್ಯಕ್ತಿತ್ವವನ್ನು ಕುರಿತಾದ ವಾದಕ್ಕಾಗಿ ನೋಡಿ-- ಹಿರಿಯಣ್ಣ ಅವರು ಸಂಪಾದಿಸಿದ ನೈಷ್ಕರ್ಮ್ಯ-ಸಿದ್ಧಿಗೆ ಜಿ. ಏ. ಜೇಕಬ ಅವರ ಮುನ್ನುಡಿ, ಪು. ೧೨ ಮತ್ತು ಕುಪ್ಪು-ಸ್ವಾಮಿಯವರು ಬ್ರಹ್ಮಸಿದ್ಧಿಗೆ ಬರೆದ ಪ್ರಸ್ತಾವನೆ, ಪು. ೬(ಇಂಗ್ಲೀಷ)

ಸಂಬಂಧವೇ ಇಲ್ಲ" ಎಂಬುದು ಸುರೇಶ್ವರರ ಮತ. ವೈದಿಕ ಕರ್ಮಗಳಿಂದ ಮನಃಶುದ್ಧಿಯಾಗಿ ಅವು ಮೋಕ್ಷಕ್ಕೆ ಅಪ್ರತ್ಯಕ್ಷ ಕಾರಣಗಳಾಗಬಹುದು; ಆದರೆ ಅವುಗಳಿಗೆ ಮೋಕ್ಷಪ್ರಾಪ್ತಿಯ ಪ್ರತ್ಯಕ್ಷ ಸಂಬಂಧ ಯಾವದೂ ಇಲ್ಲ.

ಎರಡನೆಯ ಅಧ್ಯಾಯದಲ್ಲಿ ಆತ್ಮಸಾಕ್ಷಾತ್ಕಾರದ ಸ್ವರೂಪವನ್ನು ವಿವರಿಸಲಾಗಿದೆ. ಆತ್ಮಸಾಕ್ಷಾತ್ಕಾರವಾದಾಗ ಅಹಂಕಾರ, ಆಸಕ್ತಿ, ವೈರ ಮುಂತಾದವುಗಳು ಮಾಯವಾಗುತ್ತವೆ. ಜ್ಞಾನಪ್ರಾಪ್ತಿಯ ಪ್ರಕ್ರಿಯೆ ನಡೆದಾಗ ಅಂತಃಕರಣದಲ್ಲಿ ಬದಲಾವಣೆಯುಂಟಾಗುತ್ತದೆ; ಆದರೆ ಅದಕ್ಕೆ ಆಧಾರವಾದ ಶುದ್ಧ-ಚೈತನ್ಯದಲ್ಲಿ ಯಾವ ವ್ಯತ್ಯಾಸವೂ ಆಗುವದಿಲ್ಲ.

ಮೂರನೆಯ ಅಧ್ಯಾಯದಲ್ಲಿ ಅವಿದ್ಯೆಯ ಸ್ವರೂಪವು ಚರ್ಚಿಸಲಾಗಿದೆ. ಅವಿದ್ಯೆಯ ಆಧಾರ ಮತ್ತು ವಿಷಯ ಆತ್ಮನು ಅಥವಾ ಬ್ರಹ್ಮ. ಆತ್ಮನ ಅಜ್ಞಾನವು ತನ್ನನ್ನೇ ಕುರಿತಾಗಿರುತ್ತದೆ; ಏಕೆಂದರೆ ಅಜ್ಞಾನಕ್ಕೆ ವಿಷಯವಾಗುವಂತಹ ಬೇರೆ ಯಾವ ವಸ್ತುವೂ ಇಲ್ಲ. ಅವಿದ್ಯೆಗೆ ಜೀವಗಳು ಆಧಾರವೆಂಬ ಮಂಡನಮಿಶ್ರರ ಮತದಿಂದ ಸುರೇಶ್ವರರ ಅಭಿಪ್ರಾಯವು ಭಿನ್ನವಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಮೊದಲಿನ ಮೂರು ಅಧ್ಯಾಯಗಳಲ್ಲಿರುವ ವಿಷಯಗಳ ಸಾರಾಂಶವಿದೆ, ಮತ್ತು ಜೀವನ್ಮುಕ್ತನ ನಡತೆಯ ಬಗೆಗೆ ವಿವರಣೆಯಿದೆ. ಅವನು ಸ್ವಾಭಾವಿಕವಾಗಿಯೇ ನೈತಿಕ ಜೀವನದ ನಿಯಮಗಳನ್ನು ಅನುಸರಿಸುತ್ತಾನೆ. 'ಕರ್ಮ'ವು ಪ್ರಾರಂಭದಲ್ಲಿ ಎಷ್ಟೇ ಉಪಯುಕ್ತ ಅಥವಾ ಸಹಾಯಕವಾಗಿದ್ದರೂ ಜ್ಞಾನ ಒಂದೇ ಮೋಕ್ಷಕ್ಕೆ ಸಾಧನ – ಇದು ಕೊನೆಯ ಸಿದ್ಧಾಂತ.

ನೈಷ್ಕರ್ಮ್ಯ-ಸಿದ್ಧಿಯಲ್ಲಿ ಕಾವ್ಯಗುಣದಿಂದ ತುಂಬಿದ ಅನೇಕ ಉದಾಹರಣೆಗಳಿವೆ.[೧]

---

೧) ಪ್ರತ್ಯಕ್‌ಪ್ರವಣತಾಂ ಬುದ್ಧೇಃ ಕರ್ಮಾಣ್ಯುತ್ಪಾದ್ಯ ಶುದ್ಧಿತಃ ।
ಕೃತಾರ್ಥಾನ್ಯಸ್ತಮಾಯಾನ್ತಿ ಪ್ರಾವೃಡನ್ತೇ ಘನಾ ಇವ । ೧.೪೯
ಯಥಾ ವಿಶುದ್ಧ ಆಕಾಶೇ ಸಹಸೈವಾಭ್ರಮಂಡಲಮ್ ।
ಭೂತ್ವಾ ವಿಲೀಯತೇ ತದ್ವತ್ ಆತ್ಮನೀಹಾಖಿಲಂ ಜಗತ್ ॥ ೨.೬೮
ಸೇಯಂ ಭ್ರಾಂತಿರ್ನಿರಾಲಂಬಾ ಸರ್ವನ್ಯಾಯವಿರೋಧಿನೀ ।
ಸಹತೇ ನ ವಿಚಾರಂ ಸಾ ತಮೋ ಯದ್ವದ್ದಿವಾಕರಮ್ ॥ ೩.೬೬
ಬುದ್ಧಾವೇವ ವಿವೇಕೋಽಯಂ ಯದನಾತ್ಮತಯಾ ಭಿದಾ ।
ಬುದ್ಧಿಮೇವಾಪಮೃದ್ನಾತಿ ಕದಲೀಂ ತತ್‌ಫಲಂ ಯಥಾ ॥ ೪.೧೪
ಬುದ್ಧಾದ್ವೈತಸತತ್ತ್ವಸ್ಯ ಯಥೇಷ್ಟಾಚರಣಂ ಯದಿ ।
ಶುನಾಂ ತತ್ತ್ವದೃಶಾಂ ಚೈವ ಕೋ ಭೇದೋಽಶುಚಿಭಕ್ಷಣೇ ॥ ೪.೬೨

ಹದಿನೈದು

೩. ಇಷ್ಟ-ಸಿದ್ಧಿ

ವಿಮುಕ್ತಾತ್ಮರ ಈ ಕೃತಿಯು ಪದ್ಯದಲ್ಲಿ ರಚಿತವಾಗಿದ್ದು ಅದಕ್ಕೆ ಅವರೇ ಬರೆದ ಗದ್ಯ ಟೀಕೆಯೂ ಇದೆ. ಜನ್ಮರಹಿತ, ಅಮೇಯ, ಅನಂತ ಹಾಗು ಆತ್ಮಾನಂದ ಸ್ವರೂಪಿಯಾದ ಚೈತನ್ಯವನ್ನು ಅವರು ಪ್ರಾರಂಭದಲ್ಲಿ ನಮಿಸುತ್ತಾರೆ. ಜಗನ್ಮಾಯೆ-ಯೆಂಬ ಚಿತ್ರಕ್ಕೆ ಆಧಾರವಾದ ಗೋಡೆ ಅದು.[೧] ಗೋಡೆಯು ಚಿತ್ರವನ್ನು ಬರೆಯಲು ಸಾಧನವಾಗುವ ಬಣ್ಣವಲ್ಲ; ಚಿತ್ರದ ಒಂದು ಅಂಗವೂ ಅಲ್ಲ. ಗಡಿಗೆಯು ಮಣ್ಣಿನ ವಿಕಾರವಾಗುವಂತೆ ಚಿತ್ರವು ಗೋಡೆಯ ವಿಕಾರವೆಂದು ಹೇಳಲು ಸಾಧ್ಯವಿಲ್ಲ; ಪಕ್ವ ಮಾವಿನಹಣ್ಣಿನಲ್ಲಿ ಕಾಣುವ ಕೆಂಬಣ್ಣದಂತೆ ಚಿತ್ರವು ಗೋಡೆಯ ವರ್ಣಭಿನ್ನತೆಯಲ್ಲ. ಚಿತ್ರ ಬರೆಯುವ ಮುಂಚೆ ಗೋಡೆ ಇತ್ತು ಮತ್ತು ಚಿತ್ರವು ಅಳಿದುಹೋದರೂ ಗೋಡೆ ಇದ್ದೇ ಇರುತ್ತದೆ; ಆದರೆ ಗೋಡೆಯಿಲ್ಲದಿದ್ದರೆ ಚಿತ್ರವಿರುವದು ಸಾಧ್ಯವಿಲ್ಲ. ಹಾಗೆಯೇ ಶುದ್ಧಚೈತನ್ಯವು ಮಾಯೆಯ ಚಿತ್ರವಾದ ಜಗದಾಭಾಸಕ್ಕೆ ಆಶ್ರಯ ವಾಗಿದೆ.

ಅವಿದ್ಯಾ-ವಿಚಾರವು ಈ ಗ್ರಂಥದ ಕೇಂದ್ರಬಿಂದುವಾಗಿದೆ. ಅವಿದ್ಯೆಯು ಆತ್ಮನಿಷ್ಠವೂ, ವಸ್ತುನಿಷ್ಠವೂ ಆಗಿದೆಯೆಂದು ವಿಮುಕ್ತಾತ್ಮರ ಅಭಿಪ್ರಾಯ. ಜಗತ್ತಿನ ಎಲ್ಲ ದೃಶ್ಯಗಳು, ಅವುಗಳ ಪರಸ್ಪರ ಸಂಬಂಧ, ಎಲ್ಲ ಸಂಬಂಧಗಳಿಗೆ ಅತೀತವಾದ ಶುದ್ಧ ಚೈತನ್ಯದ ಜೊತೆಗೆ ಅದರ ಸಂಬಂಧ—ಇವೆಲ್ಲ ಆ ಅವಿದ್ಯೆಯಲ್ಲಿಯೇ ಅಡಕ ವಾಗಿವೆ. ವೈವಿಧ್ಯಮಯವಾದ ಈ ಜಗತ್ತು ವಾಸ್ತವಿಕವಲ್ಲ; ಆದ್ದರಿಂದ ಈ ಜಗತ್ತಿನ ಅಸ್ತಿತ್ವವನ್ನು ಒಪ್ಪುವುದರಿಂದ ಅದ್ವೈತಕ್ಕೆ ಯಾವ ಬಾಧೆಯೂ ಇಲ್ಲ. ಹಾಗೆಯೇ ಅದು ಅವಾಸ್ತವಿಕವೂ ಅಲ್ಲ; ಆದ್ದರಿಂದ ಅನುಭವಕ್ಕೆ ಬರುವ ಸಂಗತಿ ಗಳನ್ನೂ ಸಾಧಿಸಬಹುದು.

ಇಷ್ಟ-ಸಿದ್ಧಿಯು ವೇದಾಂತದಲ್ಲಿ ಹಾಗು ಅನ್ಯದರ್ಶನಗಳಲ್ಲಿರುವ ಅವಿದ್ಯೆಯ ವಿವರಣೆಯನ್ನು ವಿಸ್ತಾರವಾಗಿ ಚರ್ಚಿಸುತ್ತದೆ ಮತ್ತು ನೈಯಾಯಿಕರ ಅನ್ಯಥಾಖ್ಯಾತಿ ಯನ್ನು ಸಮರ್ಥ ತರ್ಕಗಳ ಸಹಾಯದಿಂದ ಟೀಕಿಸುತ್ತದೆ. ಈ ಗ್ರಂಥದಲ್ಲಿ ಎಂಟು

---

೧) ಯಾಽನುಭೂತಿರಜಾಽಮೇಯಾಽನನ್ತಾತ್ಮಾನನ್ದವಿಗ್ರಹಾ ।
ಮಹದಾದಿಜಗನ್ಮಾಯಾಚಿತ್ರಭಿತ್ತಿಂ ನಮಾಮಿ ತಾಮ್ ॥

—ಇಷ್ಟಸಿದ್ಧಿ ೧.೧

ಅಧ್ಯಾಯಗಳಿದ್ದು ಮೊದಲನೆಯ ಅಧ್ಯಾಯವು ಬಹಳ ದೊಡ್ಡದಾಗಿದೆ; ಉಳಿದ ಭಾಗಗಳೂ ಅಸಮಾನಗಾತ್ರವುಳ್ಳದ್ದಾಗಿವೆ.

೪. ಅದ್ವೈತ–ಸಿದ್ಧಿ

ದ್ವೈತಸಿದ್ಧಾಂತದ ಪ್ರಮುಖ ವಾದಿಗಳು ಅದ್ವೈತಸಿದ್ಧಾಂತದ ಮುಖ್ಯ ತತ್ತ್ವಗಳ ವಿರುದ್ಧ ಮಾಡಿದ ಟೀಕೆಟಿಪ್ಪಣಿಗಳನ್ನು ಪ್ರತಿಭಟಿಸುವ ದೊಡ್ಡ ಕಾರ್ಯವನ್ನು ಅದ್ವೈತಸಿದ್ಧಿಯಲ್ಲಿ ಮಧುಸೂದನ ಸರಸ್ವತಿಯವರು ಹುಮ್ಮಸದಿಂದ ಕೈಕೊಂಡಿದ್ದಾರೆ. ಅವರು ಮೊದಲು ವಿರುದ್ಧ ಸಿದ್ಧಾಂತಿಗಳ ತತ್ತ್ವಗಳನ್ನು ಸರಿಯಾಗಿ ಸ್ಪಷ್ಟವಾಗಿ ತಿಳಿಸಿ ಆಮೇಲೆ ಅವುಗಳನ್ನು ಖಂಡಿಸಲು ಪ್ರಾರಂಭ ಮಾಡುತ್ತಾರೆ. ಅದ್ವೈತವನ್ನು ಪ್ರಸ್ಥಾಪಿಸಲು ಅವರು ದ್ವೈತವನ್ನು ಪ್ರತಿಭಟಿಸುತ್ತಾರೆ.

ಒಂದು ವಸ್ತುವಿನ ಖಂಡನೆ ಆಗುವ ವರೆಗೆ ಅದು ನಿಜವಿರುತ್ತದೆ; ಆದರೆ ಆತ್ಮಸಾಕ್ಷಾತ್ಕಾರವು ಪ್ರಾಪ್ತವಾದಾಗ ಈ ಜಗದಾಭಾಸವು ಮಿಥ್ಯೆ ಹಾಗು ಅಸತ್ತೆಂದು ತಿಳಿದುಬರುತ್ತದೆ. ಆದ್ದರಿಂದ ಅದು ಸತ್ಯವೆಂದು ಹೇಳುವದು ಸಾಧ್ಯವಿಲ್ಲ. ಮಧುಸೂದನ ಸರಸ್ವತಿಯವರು ಮಿಥ್ಯಾತ್ವದ ಐದು ವ್ಯಾಖ್ಯೆಗಳನ್ನು ಹೀಗೆ ನೀಡಿದ್ದಾರೆ :—

೧) ಅದು ಸದಸದ್ವಿರುದ್ಧವಾಗಿದೆ.

೨) ಅದು ತನ್ನ ಆಶ್ರಯದಲ್ಲಿಯೇ ಖಂಡಿಸಲ್ಪಡುತ್ತದೆ.

೩) ಸರಿಯಾದ ಜ್ಞಾನದಿಂದ ಅದರ ಖಂಡನೆಯಾಗುತ್ತದೆ.

೪) ಅದು ತನ್ನ ಅಭಾವವಿರುವ ಸ್ಥಾನದಲ್ಲಿ ಭಾಸಮಾನವಾಗುತ್ತದೆ.

೫) ಅದು ಸದ್ವಿಲಕ್ಷಣವಾಗಿದ್ದರೂ ಇದ್ದಂತೆ ತೋರುತ್ತದೆ.

ಕಗ್ಗತ್ತಲೆಯಲ್ಲಿ ಪ್ರಕಾಶಕಿರಣವು ಕತ್ತಲೆಯನ್ನು ನಾಶಪಡಿಸಿ ಪ್ರಕಟವಾಗುವಂತೆ ಜ್ಞಾನವು ಒಂದು ವಸ್ತುವನ್ನು ಮೊದಲು ಆವರಿಸುವ ಅಜ್ಞಾನವನ್ನು ತೆಗೆದುಹಾಕಿ ಆ ವಸ್ತುವನ್ನು ಚಿತ್ತದಲ್ಲಿ ಸ್ಥಾಪಿಸುತ್ತದೆ. ಅಜ್ಞಾನವು ಸಾಕ್ಷಿಚೈತನ್ಯದಿಂದ ವ್ಯಕ್ತವಾಗುತ್ತದೆ; ಶುದ್ಧ-ಚೈತನ್ಯದಿಂದಲ್ಲ. ಸಾಕ್ಷಿಚೈತನ್ಯವೆಂದರೆ ಅವಿದ್ಯೆಯ ಬೇರೆ ಬೇರೆ ಅವಸ್ಥೆಗಳಲ್ಲಿ ಪ್ರತಿಬಿಂಬಿತವಾದ ಶುದ್ಧಚೈತನ್ಯ.

ಅದ್ವೈತ-ಸಿದ್ಧಿಯು ಒಂದು ಕಠಿಣ ಗ್ರಂಥವಾಗಿದ್ದು ತನ್ನ ಸಿದ್ಧಾಂತವನ್ನು ಸಮರ್ಥಿಸಲು ಅದು ಪೂರ್ವಮೀಮಾಂಸೆಯಿಂದ ಅನೇಕ ಉದಾಹರಣೆಗಳನ್ನು ಕೊಡುತ್ತದೆ. ಶ್ರೇಷ್ಠ ತಾರ್ಕಿಕರು ಮತ್ತು ದ್ವೈತಿಗಳು ನಡೆಸಿದ ರಭಸದ ದಾಳಿಗೆ ಯಶಸ್ವಿಯಾಗಿ ಪ್ರತಿಕಾರ ಮಾಡುವ ಸಾಮರ್ಥ್ಯವನ್ನು ಅದು ಅದ್ವೈತ-ಸಿದ್ಧಾಂತಕ್ಕೆ ನೀಡಿತು. ಮಧುಸೂದನ ಸರಸ್ವತಿಯವರು ತಮಗಿಂತ ಮೊದಲು ರಚಿತವಾದ ಮೂರು 'ಸಿದ್ಧಿ' ಗ್ರಂಥಗಳ ನಾಮೋಲ್ಲೇಖವನ್ನು ತಮ್ಮ ಗ್ರಂಥದಲ್ಲಿ ಮಾಡಿರುತ್ತಾರೆ.[೧]

೫. ಅದ್ವೈತ ಬ್ರಹ್ಮ-ಸಿದ್ಧಿ

ಸದಾನಂದ ಕಾಶ್ಮೀರಕ ಇವರು ಬರೆದ ಅದ್ವೈತ-ಬ್ರಹ್ಮ-ಸಿದ್ಧಿಯು ಒಂದು ಮಹತ್ವದ ಗ್ರಂಥವಾಗಿದ್ದು ಅದು ಬೇರೆ ವೇದಾಂತ ಗ್ರಂಥಗಳಲ್ಲಿ ವಿಶ್ಲೇಷಣೆಯಾಗದ ಅನೇಕ ಮಹತ್ವದ ವಿಚಾರಗಳನ್ನು ಒಳಗೊಂಡಿದೆ. ಅದ್ವೈತದ ಆಚಾರ್ಯರ ಬೇರೆ ಬೇರೆ ಸಂಪ್ರದಾಯಗಳಲ್ಲಿ ಕಂಡುಬರುವ ವೇದಾಂತದ ಮುಖ್ಯ ತತ್ತ್ವಗಳ ಉತ್ತಮ ಸಾರಾಂಶವನ್ನು ಅದು ಸುಲಲಿತ ಶೈಲಿಯಲ್ಲಿ ಬೋಧಿಸುತ್ತದೆ.

---

೧) ಸಿದ್ಧೀನಾಮಿಷ್ಟ-ನೈಷ್ಕರ್ಮ್ಯ-ಬ್ರಹ್ಮಗಾನಾಮಿಯಂ ಚಿರಾತ್ ।
ಅದ್ವೈತಸಿದ್ಧಿರಧುನಾ ಚತುರ್ಥೀ ಸಮಜಾಯತ ॥
—ಅದ್ವೈತಸಿದ್ಧಿ, ಕೊನೆಯ ಶ್ಲೋಕ

'ಚಿರಾತ್' ಎಂಬ ಶಬ್ದವು ಇಷ್ಟಸಿದ್ಧಿಯ ಬರವಣಿಗೆಯ ಅನಂತರ ಬಹಳಷ್ಟು ಕಾಲ ಕಳೆದುಹೋಗಿತ್ತೆಂದು ಸೂಚಿಸುತ್ತದೆ. ಇದು ಸರಿಯಾಗಿದೆ; ಏಕೆಂದರೆ ವಿಮುಕ್ತಾತ್ಮರ ಸಮಯದಿಂದ ಐದು ಶತಮಾನಗಳು ಕಳೆದುಹೋಗಿದ್ದವು.

ಭಾರತೀಯ-ಜೀವನ ಯಂತ್ರಾಲಯ, ವಾರಾಣಸಿ (೧೮೯೨)ಮತ್ತು ಸನಾತನ ಧರ್ಮ ಪ್ರೆಸ್, ಮುರಾದಾಬಾದ (೧೯೩೫) ಇಲ್ಲಿ ಪ್ರಕಟವಾದ ಸ್ವಾರಾಜ್ಯಸಿದ್ಧಿಯ ಹೊತ್ತಿಗೆಗಳು ಸುರೇಶ್ವರರು ಈ ಗ್ರಂಥದ ಲೇಖಕರೆಂದು ಮುದ್ರಿಸಿದ್ದಾರೆ. ಇದು ನಿಜವಾಗಿದ್ದಿದ್ದರೆ ಮಧುಸೂದನ ಸರಸ್ವತಿಯವರು ಇದರ ಉಲ್ಲೇಖ ಮಾಡುತ್ತಿದ್ದರು ಮತ್ತು ತಮ್ಮ ಗ್ರಂಥ 'ಸಿದ್ಧಿ'-ಸಾಹಿತ್ಯದಲ್ಲಿ ಐದನೆಯದೆಂದು ಬರೆಯುತ್ತಿದ್ದರು. ಆದರೆ ಅವರು ಅದ್ವೈತಸಿದ್ಧಿಯು ಆ ಕ್ರಮದಲ್ಲಿ ನಾಲ್ಕನೆಯದೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

ಈ ಗ್ರಂಥವು ಪ್ರಾರಂಭದಲ್ಲಿ ವೈಶೇಷಿಕರ ಅಣುವಾದ, ನೈಯಾಯಿಕರ ಸಮವಾಯ-ತತ್ತ್ವ ಮತ್ತು ಕಣಾದ ಹಾಗು ಗೌತಮ ಇವರು ಪ್ರತಿಪಾದಿಸುವ ಅಸತ್ಕಾರ್ಯವಾದ ಇವುಗಳನ್ನು ಖಂಡಿಸುತ್ತದೆ. ಸಾಂಖ್ಯ ತತ್ತ್ವದ ಖಂಡನೆ ಮಾಡಿ 'ಬ್ರಹ್ಮವೇ ವಿಶ್ವದ ಉಪಾದಾನ-ಕಾರಣ ಮತ್ತು ನಿಮಿತ್ತ-ಕಾರಣ' ಎಂಬ ವೇದಾಂತ-ಸಿದ್ಧಾಂತವನ್ನು ಅದು ಸ್ಥಾಪಿಸುತ್ತದೆ.

ಸದಾನಂದರು ಬೌದ್ಧಪಂಥದ ಸೌತ್ರಾಂತಿಕ ಮತ್ತು ಶೂನ್ಯವಾದ ಇವುಗಳ ಖಂಡನೆಯ ಕಡೆಗೆ ಗಮನವನ್ನು ಹರಿಸಿದ್ದಾರೆ. ಜೈನ-ಸಿದ್ಧಾಂತವನ್ನೂ, ಚಾರ್ವಾಕ ಮತವನ್ನೂ ಅವರು ಖಂಡಿಸುತ್ತಾರೆ. ನೈಯಾಯಿಕರು ಒಪ್ಪುವ ಆತ್ಮನ ಜಡತ್ವವನ್ನೂ ಬಹುತ್ವವನ್ನೂ ಮತ್ತು ಮನಸ್ಸಿನ ಸ್ವರೂಪವನ್ನೂ ಅವರು ಖಂಡಿಸಿದ್ದಾರೆ. ವೈಶೇಷಿಕರು, ನೈಯಾಯಿಕರು, ಸಾಂಖ್ಯರು ಮತ್ತು ಪ್ರಾಭಾಕರ ಹಾಗು ಭಾಟ್ಟಮೀಮಾಂಸಕರು ಒಪ್ಪುವ ಭೇದದ ಮತ್ತು ದ್ವೈತದ ಖಂಡನೆಯನ್ನು ಅವರು ಮಾಡಿದ್ದಾರೆ. ಸದಾನಂದರು ಭೇದಾಭೇದಮತವನ್ನು ಒಪ್ಪುವದಿಲ್ಲ. ಅವರು ಏಕಜೀವವಾದ ಮತ್ತು ದೃಷ್ಟಿ-ಸೃಷ್ಟಿ-ವಾದವನ್ನು ಬೆಂಬಲಿಸುತ್ತಾರೆ.

೬. ಸ್ವಾರಾಜ್ಯ-ಸಿದ್ಧಿ

ಸ್ವಾರಾಜ್ಯ-ಸಿದ್ಧಿಯು ಅದ್ವೈತ ವೇದಾಂತದ ಇತ್ತೀಚಿನ ಗ್ರಂಥ. ಇದನ್ನು ಗಂಗಾಧರ ಸರಸ್ವತಿಯವರು ಪದ್ಯದಲ್ಲಿ ಬರೆದು ಅದರ ಮೇಲೆ ಗದ್ಯದಲ್ಲಿ ಕೈವಲ್ಯ-ಕಲ್ಪದ್ರುಮ ಎಂಬ ವ್ಯಾಖ್ಯೆಯನ್ನು ಬರೆದಿದ್ದಾರೆ ಇಂತಹ ಪದ್ಧತಿಯು ಒಂದಾನೊಂದು ಕಾಲದಲ್ಲಿ ಪ್ರಚಲಿತವಾಗಿತ್ತು. ಪದ್ಯದಲ್ಲಿ ಬಾರದ ಅಥವಾ ಸಂಕ್ಷಿಪ್ತವಾಗಿ ಬಂದ ಅದ್ವೈತ-ಸಿದ್ಧಾಂತದ ಅನೇಕ ಅಂಶಗಳನ್ನು ಈ ವ್ಯಾಖ್ಯೆಯು ವಿವರಿಸುತ್ತದೆ ಮತ್ತು ಈ ಗ್ರಂಥದ ವ್ಯಾಪ್ತಿಯನ್ನು ಬಹಳಷ್ಟು ಹೆಚ್ಚಿಸುತ್ತದೆ. ಉಪನಿಷತ್ತುಗಳು, ಅನೇಕ ಶತಮಾನಗಳಲ್ಲಿ ಬೆಳೆದುಬಂದ ಅದ್ವೈತ ಸಾಹಿತ್ಯ ಮತ್ತು ತಾರ್ಕಿಕ ಪದ್ಧತಿ ಇವುಗಳ ಮೇಲಿರುವ ಗ್ರಂಥಕರ್ತರ ಪ್ರಭುತ್ವದ ಬಗೆಗೆ ಈ ವ್ಯಾಖ್ಯೆಯು ಬಹಳಷ್ಟು ನಿದರ್ಶಕವಾಗಿದೆ.

ಸ್ವಾರಾಜ್ಯಸಿದ್ಧಿಯು ಪ್ರಮುಖವಾಗಿ ಖಂಡನ-ಮಂಡನದ ಗ್ರಂಥವಲ್ಲ. ವೇದಾಂತದ ಭಿನ್ನ ಸಂಪ್ರದಾಯಗಳಾದ ದ್ವೈತ, ವಿಶಿಷ್ಟಾದ್ವೈತ, ಶುದ್ಧಾದ್ವೈತ ಅಥವಾ ದ್ವೈತಾದ್ವೈತ ಇವುಗಳ ಖಂಡನೆ ಮಾಡುವದರಲ್ಲಿ ಗಂಗಾಧರ ಸರಸ್ವತಿಯವರಿಗೆ ಆಸಕ್ತಿ ಇಲ್ಲ. ಹಾಗೆಯೇ ಮೂಲಾವಿದ್ಯೆ ಮತ್ತು ತೂಲಾವಿದ್ಯೆ ಇಂತಹ

ಸೂಕ್ಷ್ಮ ಭೇದಗಳನ್ನು ತೋರಿಸುವ ಇಚ್ಛೆಯೂ ಇಲ್ಲ ವೇದಾಂತವು ಆಧ್ಯಾತ್ಮಿಕ ಸಾಧನೆಗಾಗಿದೆ, ತಾರ್ಕಿಕ ಯುದ್ಧಕ್ಕಾಗಿ ಅಲ್ಲ ಎಂಬುದನ್ನು ಅವರು ಬಲ್ಲರು. ಅಧ್ಯಾತ್ಮ-ಸಾಧಕರಿಗೆ ಅನುಕೂಲವಾಗುವಂತೆ ವೇದಾಂತ-ತತ್ತ್ವವನ್ನು ಸುಲಭ ಶೈಲಿಯಲ್ಲಿ ತಿಳಿಸುವದು—ಇದು ಅವರ ಮುಖ್ಯವಾದ ಉದ್ದೇಶ. ಆದ್ದರಿಂದ ಈ ಗ್ರಂಥವು ವೇದಾಂತದ ತತ್ತ್ವ ಮತ್ತು ವ್ಯಾವಹಾರಿಕ ಉಪದೇಶ ಈ ಎರಡೂ ಭಾಗ ಗಳ ಕಡೆಗೆ ಸಮಾನವಾದ ಗಮನವನ್ನು ಇತ್ತಿದೆ.

ಕೈವಲ್ಯ-ಕಲ್ಪದ್ರುಮ ವ್ಯಾಖ್ಯೆಯ ಮೇಲೆ ಬ್ರಹ್ಮಸೂತ್ರ-ಶಾಂಕರಭಾಷ್ಯದ ಪ್ರಭಾವ ಬಹಳಷ್ಟು ಆಗಿದೆಯೆಂಬುದು ಕಂಡುಬರುತ್ತದೆ. ಭಾಷ್ಯದ ಉದ್ಧರಣೆಗಳು ಅನೇಕ ಕಡೆಯಲ್ಲಿವೆ ಮತ್ತು ಸಮಾನವಾದ ಪದಗಳೂ ತರ್ಕಗಳೂ ಈ ವ್ಯಾಖ್ಯೆಯಲ್ಲಿ ಗೋಚರವಾಗುತ್ತವೆ.

(೩)

ಗಂಗಾಧರ ಸರಸ್ವತೀ : ಅವರ ಜೀವನ, ಕಾಲ ಮತ್ತು ಕೃತಿಗಳು

ಗಂಗಾಧರ ಸರಸ್ವತೀ ಇವರು ರಾಮಚಂದ್ರ ಸರಸ್ವತಿಯವರ ಶಿಷ್ಯರು ಮತ್ತು ಸರ್ವಜ್ಞ ಸರಸ್ವತಿಯವರ ಪ್ರಶಿಷ್ಯರು. ಅವರು ಸ್ವಾರಾಜ್ಯಸಿದ್ಧಿ ಗ್ರಂಥವನ್ನು ವೃಷಸಂವತ್ಸರ ಶಕ ೧೭೪೮ (ಅಂದರೆ ಕ್ರಿ. ಶ ೧೮೨೬)ರಲ್ಲಿ ಮಾಘ ಮಾಸದ ಶುದ್ಧ ಷಷ್ಠಿಯ ದಿವಸ (ಬೃಹಸ್ಪತಿಯಿಂದ ಅಧಿಷ್ಠಿತವಾದ) ಪುಷ್ಯ ನಕ್ಷತ್ರದಲ್ಲಿ ಬರೆದು ಮುಗಿಸಿದರು ಎಂದು ಹಲವು ಹಸ್ತಲಿಖಿತಗಳ ಕೊನೆಯಲ್ಲಿರುವ ಬರಹಗಳಿಂದ ತಿಳಿದುಬರುತ್ತದೆ.[೧] ಗಂಗಾಧರ ಸರಸ್ವತಿಯವರ ಇನ್ನೊಂದು ಗ್ರಂಥವಾದ ವೇದಾಂತ ಸಿದ್ಧಾಂತ-ಸೂಕ್ತಿಮಂಜರೀ ಕ್ರಿ. ಶ. ೧೮೩೬ರಲ್ಲಿ ಬರೆಯಲಾಯಿತು ಎಂಬುದು ಒಂದು ಹಸ್ತಲಿಖಿತದಿಂದ ಗೊತ್ತಾಗುತ್ತದೆ.[೨] ಅವರು ಯಜುರ್ವೇದದ ತೈತ್ತಿರೀಯ ಶಾಖಿಯವರೆಂದು ಅವರ ೨.೧೯ ಈ ಶ್ಲೋಕದ ವ್ಯಾಖ್ಯೆಯಿಂದ ಪ್ರಕಟವಾಗುತ್ತದೆ.— "ಎಲ್ಲ ಉಪನಿಷತ್ತುಗಳಲ್ಲಿರುವ ಸೃಷ್ಟಿಯ ವರ್ಣನೆಯು ಅದ್ವಯವಾದ ಬ್ರಹ್ಮ-

---

೧) ವಸ್ವಬ್ಧಿಮುನ್ಯವನಿಮಾನಶಕೇ ವೃಷಾಖ್ಯ-
ವರ್ಷಸ್ಯ ಮಾಘಸಿತ-ವಾಕ್ಪತಿಯುಕ್ತ-ಷಷ್ಠ್ಯಾಮ್ ।
ಗಂಗಾಧರೇಂದ್ರಪತಿನಾ ಶಿವಯೋಃ ಪದಾಬ್ಜೇ
ಭಕ್ತ್ಯಾರ್ಪಿತಾ ಸುಕೃತಿರಸ್ತು ಸತಾಂ ಶಿವಾಯ ॥

—ಭಾಂ. ಪ್ರಾ. ಸಂ. ಕೆ. ಹಸ್ತಪ್ರತಿ ೩೧೨

೨) ಭಾಂ. ಪ್ರಾ. ಸಂ. ಕೇ. ಹಸ್ತಪ್ರತಿ ೯೬೬ :—

ಇತಿ ಶ್ರೀಮತ್ ಪರಮಹಂಸ-ಪರಿವ್ರಾಜಕಾಚಾರ್ಯ-ಶ್ರೀಮದ್ರಾಮ-ಚಂದ್ರಸರಸ್ವತೀ-ಪೂಜ್ಯಪಾದಶಿಷ್ಯೇಣ ಗಂಗಾಧರಸರಸ್ವತ್ಯಾಖ್ಯಭಿಕ್ಷುಣಾ ವಿರಚಿತಾ ವೇದಾಂತ ಸಿದ್ಧಾಂತ-ಸೂಕ್ತಿಮಂಜರೀ ಸಂಪೂರ್ಣಾ ।

—ವೈಶಾಖಮಾಸೇ ಶುಕ್ಲಪಕ್ಷೇ ೧೧, ಸಂವತ್ ೧೮೯೨.

ದಲ್ಲಿಯೇ ಪರ್ಯವಸಾನವಾಗುತ್ತದೆ ಎಂಬುದನ್ನು ತೋರಿಸುವದಕ್ಕಾಗಿ ಅವರು ತಮ್ಮ ಶಾಖೆಯ ಉಪನಿಷತ್ತಿನಿಂದ ಪ್ರಾರಂಭಿಸುತ್ತಾರೆ.[೧]

ಗಂಗಾಧರ ಸರಸ್ವತಿಯವರು ಬರೆದ ಗ್ರಂಥಗಳು ಕೆಳಗಿನಂತಿವೆ :—[೨]

೧) ವೇದಾಂತ–ಸಿದ್ಧಾಂತ–ಸೂಕ್ತಿಮಂಜರೀ[೩] ಮತ್ತು ಆದರ ವ್ಯಾಖ್ಯೆ 'ಪ್ರಕಾಶ'

೨) ಸಿದ್ಧಾಂತ–ಚಂದ್ರಿಕೋದ್ಗಾರ (ರಾಮಾನಂದ ಸರಸ್ವತಿಯವರ ವೇದಾಂತ-ಸಿದ್ಧಾಂತ-ಚಂದ್ರಿಕಾ ಎಂಬ ಗ್ರಂಥದ ವ್ಯಾಖ್ಯೆ)

೩) ಸಿದ್ಧಾಂತ-ಬಿಂದು-ಶೀಕರ (ಅಪ್ಪಯ್ಯ ದೀಕ್ಷಿತರ ಸಿದ್ಧಾಂತಲೇಶದ ವ್ಯಾಖ್ಯೆ)

೪) ಸ್ವಾರಾಜ್ಯಸಿದ್ಧಿ ಮತ್ತು ಅದರ ವ್ಯಾಖ್ಯೆ ಕೈವಲ್ಯ–ಕಲ್ಪದ್ರುಮ

೫) ಪ್ರಣವ-ಕಲ್ಪ-ಪ್ರಕಾಶ.[೪]

ಗಂಗಾಧರ ಸರಸ್ವತಿಯವರು ಶ್ರೇಷ್ಠ ಪಂಡಿತರಾಗಿದ್ದು ತಮಗಿಂತ ಮೊದಲಿನ ಎಲ್ಲ ಗ್ರಂಥಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿ ಅವುಗಳಲ್ಲಿ ಪ್ರಾವಿಣ್ಯವನ್ನು ಪಡೆದಿದ್ದರು.

---

೧) ವೇದಾನ್ತಗತ–ಸೃಷ್ಟಿವಾಕ್ಯಾನಾಮದ್ವಿತೀಯೇ ಬ್ರಹ್ಮಣಿ ತಾತ್ಪರ್ಯೇಣ ಸಮನ್ವಯಂ ದಿದರ್ಶಯಿಷುಃ ಆದೌ ಸ್ವಶಾಖೀಯೋಪನಿಷದಮ್ ಅನುಕ್ರಾಮತಿ ಬ್ರಹ್ಮೇತಿ ।

೨) ಅವರ ಶಿಷ್ಯರಾದ ಆನಂದಬೋಧರು ಸಹ ಯೋಗವಾಸಿಷ್ಠದ ಮೇಲೆ 'ತಾತ್ಪರ್ಯಪ್ರಕಾಶ' ಎಂಬ ವ್ಯಾಖ್ಯೆಯನ್ನು ಬರೆದಿದ್ದಾರೆ. ನೋಡಿ— ದಾಸಗುಪ್ತ, ಭಾರತೀಯ ತತ್ತ್ವಜ್ಞಾನದ ಚರಿತ್ರೆ, ಭಾಗ ೨, ಪು. ೨೩೧ (ಇಂಗ್ಲೀಷ)

೩) ಈ ಗ್ರಂಥದಲ್ಲಿ ಲೇಖಕರು ಅಪ್ಪಯ್ಯ ದೀಕ್ಷಿತರ ಸಿದ್ಧಾಂತ ಲೇಶದಲ್ಲಿ ಇರುವ ಸಿದ್ಧಾಂತಗಳನ್ನು ಶ್ಲೋಕರೂಪದಲ್ಲಿ ಸಂಗ್ರಹಿಸಿದ್ದಾರೆ. :—
ಶ್ರೀಮದ್‍ಗುರುಪದಾಂಭೋಜದ್ವಂದ್ವಮಾನಮ್ಯ ಭಕ್ತಿತಃ ।
ಸಿದ್ಧಾಂತಲೇಶ–ಸಿದ್ಧಾಂತಾನ್ ಕಾರಿಕಾಭಿರ್ನಿದರ್ಶಯೇ ।। ಶ್ಲೋಕ ೧

೪) ನೋಡಿ—AUFRECHT, Catalogus Catalogorum, p. 758

ಅವರು ಉಲ್ಲೇಖಿಸಿದ ಅನೇಕ ಪ್ರಾಚೀನ ಗ್ರಂಥಗಳಿಂದ ಅವರ ಪಾಂಡಿತ್ಯವು ಗೋಚರವಾಗುತ್ತದೆ. ಅವರ ವೇದಾಂತ-ಸಿದ್ಧಾಂತ-ಸೂಕ್ತಿಮಂಜರೀ ಎಂಬ ಗ್ರಂಥದಲ್ಲಿ ಮಹತ್ವದ ವಿಷಯಗಳ ಬಗೆಗೆ ವಿವಿಧ ಪಂಡಿತರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದ್ದು ಅದರಲ್ಲಿ ಅನೇಕ ಗ್ರಂಥಗಳ ಹೆಸರುಗಳು ಕಂಡುಬರುತ್ತವೆ. ತಮ್ಮ ಸ್ವಾರಾಜ್ಯಸಿದ್ಧಿಯ ಮೇಲೆ ಅವರು ಬರೆದ ಕೈವಲ್ಯ-ಕಲ್ಪದ್ರುಮದಲ್ಲಿ ಅವರು ಅನೇಕ ಪಂಡಿತರನ್ನು, ಅವರ ಕೃತಿಗಳನ್ನು ಮತ್ತು ದರ್ಶನಗಳನ್ನು ಕೆಳಗಿನಂತೆ ಹೆಸರಿಸಿದ್ದಾರೆ :—

ಅಕ್ಷಪಾದ—೧.೭, ೩೯; ೨.೪೪
ಅದ್ವೈತ-ಸಿದ್ಧಿ—೨.೪೪, ೪೫
ಆರ್ಹತ—೧.೧೩, ೧೪
ಕಣಾದ—೧.೭, ೧೪, ೩೯; ೨.೪೪
ಕಲ್ಪತರು—೨.೪೪, ೪೫
ಕುಮಾರಿಲಭಟ್ಟ—೧.೭, ೮; ೧೨; ೨.೮, ೧೭, ೪೩–೪೫
ಗೌಡಪಾದ—೧.೧೧, ೨೧
ಗೌತಮ—೧.೧೪
ಚಾರ್ವಾಕ—೧.೧೨
ಜೈಮಿನಿ—೧.೧೦
ತತ್ತ್ವದೀಪನ—೨.೪೪
ದ್ರಮಿಡಾಚಾರ್ಯ—೨.೨೧
ನವ್ಯ ನೈಯಾಯಿಕ—೨.೭, ೪೪
ನೃಸಿಂಹಾಶ್ರಮ—೨.೪೫
ನೈಯಾಯಿಕ—೧.೧೩, ೪೧, ೪೮; ೩.೧೫
ನ್ಯಾಯಟೀಕಾಕೃತ್—೨.೨೪
ಪಂಚರಾತ್ರ—೧.೧೩, ೩೭
ಪತಂಜಲಿ—೧.೭, ೧೨, ೧೪
ಪಾಶುಪತ—೧.೧೩
ಪ್ರಭಾಕರ—೧.೭, ೮, ೧೨, ೧೩; ೨.೧೦
ಬಾದರಾಯಣ—೧.೧೧, ೧೭, ೩೯; ೨.೧೦
ಬ್ರಹ್ಮಸೂತ್ರ—೨.೩೦–೩೨, ೪೦, ೬೦
ಭರ್ತೃಪ್ರಪಂಚ—೧.೮

ಮೋಕ್ಷದ ಸಾಧನಗಳು (೧.೬-೮), ವೈಶೇಷಿಕದ ಖಂಡನೆ (೧.೨೧), ಮಾಯೆಯ ಸ್ವರೂಪ (೧.೪೮), ದ್ವಿತ್ವ, ಪೃಥಕ್ತ್ವ ಮುಂತಾದವುಗಳ ಸ್ವರೂಪ (೨.೯); ಅಖ್ಯಾತಿ, ಅನ್ಯಥಾಖ್ಯಾತಿ, ಆತ್ಮಖ್ಯಾತಿ ಮತ್ತು ಅಸತ್‌ಖ್ಯಾತಿ ಇವುಗಳ ಖಂಡನೆ (೨.೨೪), 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' ಮುಂತಾದ ಶ್ರುತಿವಾಕ್ಯಗಳಲ್ಲಿರುವ ಸ್ವರೂಪ-

---

೧) ಶ್ಲೋಕ ೧.೮ರ ಮೇಲಿರುವ ವ್ಯಾಖ್ಯೆಯಲ್ಲಿ ಲೇಖಕರು ತೋಟಕಾಚಾರ್ಯರ ಪದ್ಯಗಳನ್ನು ಕೆಳಗಿನಂತೆ ಉದಾಹರಿಸಿದ್ದಾರೆ :—

ಉದಕಾವಯವಾನಭಿಭೂಯ ಪಯೋ ರಜತಾವಯವಾಂಶ್ಚ ತಥಾ ಕನಕಮ್ ।
ವಿಪರೀತಮತಿಂ ಜನಯತ್ಯುದಕೇ ರಜತೇ ಚ ತಥಾಯಸಿ ಹೇಮಮತಿಮ್ ॥
ರಸವೀರ್ಯ-ವಿಪಾಕ-ವಿನಾಶಮನು ಪ್ರಗಮಿಷ್ಯತಿ ಕಾಂಚನತಾಽಪ್ಯಯಸಃ ।
ಕೃತಕಂ ಹಿ ನ ನಿತ್ಯಮಿತಿ ಪ್ರಕಟಂ ಸಮವೇತಮವಶ್ಯಮುಪೈತಿ ಪುನಃ ॥

—ಶ್ರುತಿಸಾರ–ಸಮುದ್ಧರಣ ೯೯-೧೦೦

ಲಕ್ಷಣದ ಬಗೆಗೆ ಲೇಖಕರು ನೀಡಿದ ವಿವರಣೆ (೨.೨೮) ಮತ್ತು ಶಾಬ್ದಬೋಧದ ವಿಶ್ಲೇಷಣೆ (೨.೪೩–೪೫) ಇವುಗಳನ್ನು ಕುರಿತು ಅವರು ವಿಸ್ತಾರವಾಗಿ ವ್ಯಾಖ್ಯೆಯನ್ನು ಬರೆದದ್ದು ಅದು ಅವರ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ. ರಾಜಯೋಗ ಮತ್ತು ಹಠಯೋಗ ಇವುಗಳ ಬಗೆಗೆ ಅವರಿಗಿರುವ ಜ್ಞಾನ ಅವರು ಬರೆದ ಶ್ಲೋಕ ೩.೧೦ ಮತ್ತು ೧೧ ರ ವ್ಯಾಖ್ಯೆಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಅವರು ಯೋಗ–ವಾಸಿಷ್ಠ, ಪರಾಶರ–ಸ್ಮೃತಿ ಮತ್ತು ಸ್ಕಂದಪುರಾಣ ಇವುಗಳಿಂದ ಆಯ್ದ ಶ್ಲೋಕ–ಗಳನ್ನು ಈ ಸಂದರ್ಭದಲ್ಲಿ ಉದಾಹರಿಸಿದ್ದಾರೆ.

ಗಂಗಾಧರ ಸರಸ್ವತಿಯವರು ಒಮ್ಮೊಮ್ಮೆ ವ್ಯಾಖ್ಯೆಯಲ್ಲಿ ಪಾಠಭೇದವನ್ನೂ ಸೂಚಿಸಿದ್ದಾರೆ. ಶ್ಲೋಕ ೩.೧೯ರ ಮೇಲೆ ವ್ಯಾಖ್ಯೆ ಬರೆಯುವಾಗ ಅವರು ಹೇಳು–ತ್ತಾರೆ :— 'ಯತಿಸ್ತ್ವೇಷ' ಇದರ ಬದಲು 'ಯತಸ್ತ್ವೇಷ' ಎಂಬ ಪಾಠಾಂತರ–ವಿರಬಹುದು. ಯತಿಗೆ ಜ್ಞಾನದ ವಿಶೇಷವಾದ ಅಧಿಕಾರವಿರುತ್ತದೆ. 'ಯತಃ' ಎಂಬುದು ಕಾರಣವನ್ನು ತೋರಿಸುತ್ತದೆ.[1] ಗ್ರಂಥಕರ್ತರು ಹಲವು ಶಬ್ದಗಳ ಬೇರೆ ಬೇರೆ ಅರ್ಥಗಳನ್ನೂ ಕೊಟ್ಟಿದ್ದಾರೆ. ಉದಿತ (೧.೮) ಈ ಶಬ್ದದ ಅರ್ಥವು 'ಹೇಳಿದ' ಮತ್ತು 'ಶ್ರೇಷ್ಠವಾದ' ಹೀಗಿದೆಯೆಂದು ತಿಳಿಸಿದ್ದಾರೆ.[2] ಉಪಯೋಗ ಮತ್ತು ಮೂಲಘಟನಾ ಈ ಶಬ್ದಗಳನ್ನು ಎರಡು ಭಿನ್ನ ರೀತಿಗಳಲ್ಲಿ ವಿವರಿಸಿದ್ದಾರೆ.[3]

---

೧) ಆತ್ಮಭೂತೋ ಯತಿಸ್ತ್ವೇಷ ತೇಷಾಮಪಿ । ಯತಿಗ್ರಹಣಂ ಯತೀನಾಮೇವ ವಿಶೇಷತೋ ಜ್ಞಾನಾಧಿಕಾರಾತ್ । ಯತ ಇತಿ ವಾ ಪಾಠೋ ಹೇತ್ವರ್ಥಃ ।

೨) ೧.೮ :— ಉದಿತಸ್ಯ ಉಕ್ತಸ್ಯ, ನಿರ್ದುಃಖಾತ್ಮ–ಸ್ವರೂಪಾವಸ್ಥಿತ–ಲಕ್ಷಣಸ್ಯ ನಿತ್ಯನಿರತಿಶಯ–ಸುಖಾಭಿವ್ಯಕ್ತಿಲಕ್ಷಣಸ್ಯ ವಾ ಪದಸ್ಯ ಮೋಕ್ಷಸ್ಯ ಪ್ರಾಪ್ತೌ.... ।

೩) ೨.೩೯ :— ಸಾಕ್ಷಾತ್ ಪರಂಪರಯಾ ವಾ ಪುರುಷಾರ್ಥಪರ್ಯವ–ಸಾನಮ್ ಉಪಯೋಗಃ। ಮೂಲಘಟನಾ ಉಪಕ್ರಮಾನುಕೂಲ್ಯಮ್, ಆದಿಪದಾತ್ ತಾತ್ಪರ್ಯಲಿಂಗಾನುಕೂಲ್ಯಸಂಗ್ರಹಃ. ತೇಷಾಮ್ ಅಯೋಗತಃ, ಅಭಾವಾತ್ ಇತ್ಯರ್ಥಃ। ಅಥವಾ ಉಪಯೋಗಃ ಆಕಾಂಕ್ಷಾ, ಮೂಲಂ ಲಕ್ಷಣಾಬೀಜಂ ತಾತ್ಪರ್ಯಂ, ಘಟನಾ ಲಕ್ಷಣಾ–ನಿರ್ವಾಹಕಃ ಸಂಭನ್ಧವಿಶೇಷಃ, ಆದಿಪದಾತ್ ಲಕ್ಷಣಾಫಲಂ, ತೇಷಾ–ಮಯೋಗತಃ ಅಸಂಭವಾತ್ ಇತ್ಯರ್ಥಃ ।

ಇಪತ್ತೈದು

ಗಂಗಾಧರ ಸರಸ್ವತಿಯವರು ನೈಯಾಯಿಕರ ಪರಿಭಾಷೆಯನ್ನು ಆತ್ಮಸಾತ್ ಮಾಡಿಕೊಂಡಿದ್ದರು ಎಂಬುದು ಅವರು ಕೊಟ್ಟ ಮಿಥ್ಯಾ ಎಂಬ ಪದದ ವ್ಯಾಖ್ಯೆ,[೧] ಭೇದದ ವಿಶ್ಲೇಷಣೆ[೨] ಮತ್ತು ಅಖಂಡ ವೃತ್ತಿಯ ವಿವರಣೆ[೩] ಇವುಗಳಲ್ಲಿ ಕಂಡುಬರುತ್ತದೆ. ಪಾಣಿನೀಯ ವ್ಯಾಕರಣದ ಮೇಲಿರುವ ಅವರ ಪ್ರಭುತ್ವವು ಅವರು ಕೊಡುವ 'ತಾನ್' ಮತ್ತು 'ಪಿಪ್ಪೃಶ್ಯಃ' (೧.೧೪),[೪] 'ಆಸ್ಮಾಕಮ್' (೧.೧೬)[೫] ಹಾಗು 'ಬಂಭ್ರಮೀತಿ' (೧.೫೨)[೬] ಈ ರೂಪಗಳ ವಿವರಣೆಯಲ್ಲಿ ಮತ್ತು 'ಮೋಕ್ಷಂ

---

೧) ೨.೨ : ಮಾಯಾಽಪಿ ಮಿಥ್ಯಾ ಸ್ವಾಧಿಕರಣ-ವೃತ್ತಿ-ವ್ಯಾಪ್ಯ-ವೃತ್ತ್ಯಭಾವ-ಪ್ರತಿಯೋಗಿನೀ ಇತ್ಯರ್ಥಃ ।

೨) ೨.೬ : ಕಿಂ ಚ ಧರ್ಮಿತಾವಚ್ಛೇದಕವಿಶಿಷ್ಟ-ಧರ್ಮಿಜ್ಞಾನಸ್ಯ ಪ್ರತಿಯೋಗಿತಾವಚ್ಛೇದಕವಿಶಿಷ್ಟ-ಪ್ರತಿಯೋಗಿಜ್ಞಾನಸ್ಯ ಚಾಭಾವೇ ಭೇದಬುದ್ಧ್ಯದರ್ಶನಾತ್ ಭೇದಜ್ಞಾನಸ್ಯ ತಥಾವಿಧಧರ್ಮಿ-ಪ್ರತಿಯೋಗಿ-ವಿಷಯಕತ್ವ-ನಿಯಮಾಚ್ಚ ತಸ್ಮಿನ್ ಧರ್ಮಿಪ್ರತಿಯೋಗಿಜ್ಞಾನಂ ಕಾರಣಮಿತಿ ನಿರ್ವಾದಮ್ ।

೩) ೨.೬೧ : ಸ್ವಾಧ್ಯಾಯೋ ಅಧ್ಯೇತವ್ಯ ಇತಿ ವಿಧೇಃ ಸ್ವಪರವಿಧಿಪ್ರವರ್ತಕತ್ವವತ್, ಭೇದಸ್ಯ ಸ್ವಪರಭೇದಕೃತತ್ವವತ್, ಅವಿದ್ಯಾಯಾಃ ಸ್ವಪರನಿರ್ವಾಹವತ್, ಚೈತನ್ಯಸ್ಯ ಸ್ವಪರಪ್ರಕಾಶತ್ವವತ್. ನೇಹ ನಾನಾಸ್ತೀತಿ ವಾಕ್ಯಸ್ಯ ಸ್ವಪರಸಾಧಾರಣ-ದ್ವೈತಬಾಧಕತ್ವಾಭ್ಯುಪಗಮೇ ದೋಷಾಭಾವಾತ್ । ಚಿತ್ಸಂವಲಿತರೂಪೇಣ ಬಾಧಕತಾ, ಜಡಮಾತ್ರಾಂಶೇನ ಬಾಧ್ಯತಾ ಇತಿ ಭೇದಸಂಭವಾಚ್ಚ ।

೪) (ಅ) ಸಾ ಚ (ಪ್ರಕೃತಿಃ) ತೇ ಚ (ಪರಮಾಣವಃ) ತಾನ್ ಪುಮಾಂಸ್ತ್ರಿಯಾ ಇತ್ಯೇಕಶೇಷಃ । (ಪಾ. ೧.೨.೬೭)

(ಆ) ಪಿಪ್ಪೃಶ್ಯ:— ಋದುಪಧಾಚ್ಚಾಕ್ಲೃಪಿಚೃತೇರಿತಿ ಕ್ಯಪ್ । (ಪಾ. ೩.೧.೧೧೦)

೫) ತಸ್ಯೇದಮ್ ಇತ್ಯಣಿ ತಸ್ಮಿನ್ನಣಿ ಚ ಯುಷ್ಮಾಕಾಸ್ಮಾಕೌ ಇತ್ಯಾಸ್ಮಾಕಾದೇಶಃ । (ಪ್ರಾ. ೪.೩.೨)

೬) ಭ್ರಮೇಃ ಯಙಲುಕಿ ನುಗತೋಽನುನಾಸಿಕಾನ್ತಸ್ಯ ಇತ್ಯಭ್ಯಾಸಸ್ಯ ನುಕ್ । (ಪ್ರಾ. ೭.೪.೮೫)

ಸ್ಪೃಹಯತಿ' (೧ ೧೭)[1] 'ಕಸ್ಯ ಹೇತೋಃ' (೧.೨೯)[2] ಮುಂತಾದ ಶಬ್ದಪ್ರಯೋಗಗಳ ಸಾಧುತ್ವವನ್ನು ಕುರಿತು ನೀಡಿದ ಸ್ಪಷ್ಟೀಕರಣದಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

ಸ್ವಾರಾಜ್ಯಸಿದ್ಧಿ : ಶೀರ್ಷಿಕೆ

'ಸ್ವರಾಟ್' ಶಬ್ದವು ಛಾಂದೋಗ್ಯ ಉಪನಿಷತ್ತಿನ ಕೊನೆಯಲ್ಲಿ ನಾರದ ಮತ್ತು ಸನತ್ಕುಮಾರ ಇವರ ಸಂವಾದದಲ್ಲಿ ಕಾಣುತ್ತದೆ.[3] ಇದರ ಮೇಲೆ ಭಾಷ್ಯ ಬರೆಯುವಾಗ ಆದ್ಯ ಶಂಕರಾಚಾರ್ಯರು ಹೀಗೆ ಹೇಳುತ್ತಾರೆ—"ಇಂತಹ ವಿದ್ವಾಂಸನು ಜೀವಂತನಿರುವಾಗಲೇ ಸ್ವಾರಾಜ್ಯದಲ್ಲಿ ಅಭಿಷಿಕ್ತನಾಗಿ ದೇಹದ ಪತನವಾದಮೇಲೆ ಕೂಡ ಅವನು 'ಸ್ವರಾಟ್' ಆಗಿಯೇ ಉಳಿಯುತ್ತಾನೆ."[4] ಶಂಕರಾಚಾರ್ಯರು ತೈತ್ತಿರೀಯ ಉಪನಿಷತ್ತಿನ (೨.೧) ಮೇಲಿರುವ ಭಾಷ್ಯದಲ್ಲಿ ಹೀಗೆ ತಿಳಿಸುತ್ತಾರೆ—"ಮೊದಲು ಕರ್ಮಗಳಿಗೆ ಅವಿರುದ್ಧವಾದ ಉಪಾಸನೆಗಳನ್ನು ಹೇಳಿದ್ದಾರೆ. ಆಮೇಲೆ ವ್ಯಾಹೃತಿಗಳ ಮೂಲಕ ಆಂತರಿಕ ಮತ್ತು ಉಪಾಧಿಸಹಿತವಾದ ಆತ್ಮದರ್ಶನವನ್ನು ಹೇಳಿದ್ದಾರೆ. ಇದರ ಫಲವೇ ಸ್ವಾರಾಜ್ಯ."[5] ಆದರಂತೆಯೇ ಕೇನೋಪನಿಷದ್-

---

೧) ಈಪ್ಸಿತಮಾತ್ರಸ್ಯೈವ ಸ್ಪೃಹೇರೀಪ್ಸಿತ ಇತಿ ಸಂಪ್ರದಾನತ್ವಾತ್ ಈಪ್ಸಿತತಮತ್ವ-ವಿವಕ್ಷಾಯಾಂ ಕರ್ಮ ಏವ ಇತಿ ಮೋಕ್ಷಮಿತಿ ದ್ವಿತೀಯಾ-ಪ್ರಯೋಗಃ । (ಪಾ. ೧.೪.೩೬)

೨) ಕಸ್ಮಾತ್ ಕಾರಣಾತ್, ಷಷ್ಠೀ ಹೇತುಪ್ರಯೋಗೇ ಇತಿ ಹೇತೌ ಷಷ್ಠೀ । (ಪಾ. ೨.೩.೨೬)

೩) ಆತ್ಮರತಿಃ ಆತ್ಮಕ್ರೀಡಃ ಆತ್ಮಮಿಥುನಃ ಆತ್ಮಾನನ್ದಃ ಸಃ ಸ್ವರಾಡ್ ಭವತಿ । ಛಾ. ೭.೨೫.೨
ಹೋಲಿಸಿ — ಸ್ವಾರಾಜ್ಯಮ್ ಅತಿರಾತ್ರೇಣ । ವೈ. ೬.೩೬

೪) ಸ ಏವಂಲಕ್ಷಣಃ ವಿದ್ವಾನ್ ಜೀವನ್ ಏವ ಸ್ವಾರಾಜ್ಯೇಽಭಿಷಿಕ್ತಃ ಪತಿತೇಽಪಿ ದೇಹೇ ಸ್ವರಾಡೇವ ಭವತಿ ।

೫) ಸಂಹಿತಾದಿ-ವಿಷಯಾಣಿ ಕರ್ಮಭಿಃ ಅವಿರುದ್ಧಾನಿ ಉಪಾಸನಾನಿ ಉಕ್ತಾನಿ । ಅನನ್ತರಂ ಚ ಅನ್ತಃಸೋಪಾಧಿಕಾತ್ಮದರ್ಶನಮ್ ಉಕ್ತಂ ವ್ಯಾಹೃತಿದ್ವಾರೇಣ ಸ್ವಾರಾಜ್ಯಫಲಮ್ ।

ವಾಕ್ಯಭಾಷ್ಯದ ಪ್ರಾರಂಭದಲ್ಲಿ ಅವರು ತಿಳಿಸುವದೇನೆಂದರೆ— "ಸ್ವಾರಾಜ್ಯದಲ್ಲಿ ಅಭಿಷಿಕ್ತನಾದ ಮತ್ತು ಬ್ರಹ್ಮತ್ವವನ್ನು ಪಡೆದ ಮನುಷ್ಯನು ಯಾರನ್ನೂ ನಮಸ್ಕರಿಸಲು ಇಚ್ಛಿಸುವದಿಲ್ಲ. ಆದ್ದರಿಂದ "ನಾನು ಬ್ರಹ್ಮನಿದ್ದೇನೆ" ಎಂಬ ಸಾಕ್ಷಾತ್ಕಾರವನ್ನು ಪಡೆದ ಮನುಷ್ಯನಿಂದ ಯಾವ ಕರ್ಮ ಮಾಡಿಸುವದೂ ಸಾಧ್ಯವಿಲ್ಲ."[೧]

'ಸ್ವಾರಾಜ್ಯ' ಶಬ್ದವು ಮನುಸ್ಮೃತಿಯಲ್ಲಿಯೂ ಕಂಡುಬರುತ್ತದೆ. ಮನು ಹೀಗೆ ಹೇಳುತ್ತಾರೆ—"ಯಾವನು ಎಲ್ಲ ಭೂತಗಳಲ್ಲಿ ತನ್ನನ್ನು ಮತ್ತು ತನ್ನಲ್ಲಿ ಎಲ್ಲ ಭೂತಗಳನ್ನು ಕಾಣುತ್ತಾನೋ, ಅವನು ಆತ್ಮಯಜ್ಞ ಮಾಡುವವನಾಗಿ ಸ್ವಾರಾಜ್ಯವನ್ನು ಪಡೆಯುತ್ತಾನೆ.[೨] ಸುರೇಶ್ವರಾಚಾರ್ಯರು ತಮ್ಮ ನೈಷ್ಕರ್ಮ್ಯಸಿದ್ಧಿಯಲ್ಲಿ 'ಸ್ವಾರಾಜ್ಯ' ಶಬ್ದವನ್ನು ಉಪಯೋಗಿಸಿದ್ದಾರೆ. "ಶ್ರುತಿವಾಕ್ಯವು ಅವಿದ್ಯೆಯ ಪಟಲವನ್ನು ಧ್ವಂಸಗೊಳಿಸಿ ಮುಮುಕ್ಷುವನ್ನು ಸ್ವಾರಾಜ್ಯದಲ್ಲಿ ಅಭಿಷಿಕ್ತನನ್ನಾಗಿ ಮಾಡುತ್ತದೆ" ಎಂದು ಅವರು ಹೇಳಿದ್ದಾರೆ.[೩] ರಾಮಾನಂದ ಸರಸ್ವತಿಯವರು ತಮ್ಮ ವೇದಾಂತ-ಸಿದ್ಧಾಂತ-ಚಂದ್ರಿಕಾ ಎಂಬ ಗ್ರಂಥದಲ್ಲಿ ಹೀಗೆ ತಿಳಿಸುತ್ತಾರೆ—"ಗುರುಗಳ ಕೃಪಾಕಟಾಕ್ಷದಿಂದ ನನಗೆ ಈಗ ಸ್ವಾರಾಜ್ಯವು ಪ್ರಾಪ್ತವಾಗಿದೆ. ರಥ, ಕುದುರೆ, ಸಂಪತ್ತು, ಸೈನ್ಯ ಮತ್ತು ಕೋಟೆ ಇವು ಇರದಿದ್ದರೂ ಅದು ಅಪೂರ್ವವಾಗಿದೆ."[೪]

---

೧) ನ ಹಿ ಸ್ವಾರಾಜ್ಯೇಽಭಿಷಿಕ್ತೋ ಬ್ರಹ್ಮತ್ವಂ ಗಮಿತಃ ಕಂಚನ ನಮಿತುಮಿಚ್ಛತಿ; ಅತೋ ಬ್ರಹ್ಮಾಸ್ಮೀತಿ ಸಂಬುದ್ಧೌ ನ ಕರ್ಮ ಕಾರಯಿತುಂ ಶಕ್ಯತೇ ।

೨) ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಸಂಪಶ್ಯನ್ನಾತ್ಮಯಾಜೀ ವೈ ಸ್ವಾರಾಜ್ಯಮಧಿಗಚ್ಛತಿ ॥
—ಮನುಸ್ಮೃತಿ ೧೨.೯೧

೩) ಅನ್ವಯವ್ಯತಿರೇಕಪುರಃಸರಂ ವಾಕ್ಯಮೇವ ಸಾಮಾನಾಧಿಕರಣ್ಯಾದಿನಾ ಅವಿದ್ಯಾಪಟಲ-ಪ್ರಧ್ವಂಸದ್ವಾರೇಣ ಮುಮುಕ್ಷುಂ ಸ್ವಾರಾಜ್ಯೇಽಭಿಷೇಚಯತಿ ನ ತು ಅನ್ವಯವ್ಯತಿರೇಕಮಾತ್ರಸಾಧ್ಯೋಽಯಮರ್ಥಃ ।
—ನೈಷ್ಕರ್ಮ್ಯಸಿದ್ಧಿ ೩, ಶ್ಲೋಕ ೩೨ ಮತ್ತು ೩೩ರ ಮಧ್ಯದಲ್ಲಿ

೪) ನ ರಥೋ ನ ಹಯೋ ನಾರ್ಥೋ ನ ಚ ಶಕ್ತಿಗುಣಾ ನ ದುರ್ಗವಾರ್ತಾಽಪಿ ।
ಸ್ವಾರಾಜ್ಯಮಿದಮಪೂರ್ವಂ ಸಂಪ್ರತಿ ನೀತೋಽಸ್ಮಿ ದೇಶಿಕೇಂದ್ರದೃಶಾ ॥
—ಶ್ಲೋಕ ೩೯ (ಹಸ್ತಪ್ರತಿ ಭಾಂ. ಪ್ರಾ. ಸಂ. ಕೇಂದ್ರದಲ್ಲಿದೆ.)

'ಸ್ವಾರಾಜ್ಯ' ಶಬ್ದವು ಪ್ರಸ್ತುತ ಗ್ರಂಥದಲ್ಲಿ ಅನೇಕ ಕಡೆಗೆ ಬಂದಿದ್ದು ಲೇಖಕರು ಅದನ್ನು ವ್ಯಾಖ್ಯೆಯಲ್ಲಿ ವಿವಿಧ ರೀತಿಯಿಂದ ವಿವರಿಸಿದ್ದಾರೆ. ಶ್ಲೋಕ ೧.೫೮ರ ವ್ಯಾಖ್ಯೆಯಲ್ಲಿ ಅವರು 'ಸ್ವಾತ್ಮ-ರಾಜ್ಯ' ಶಬ್ದವನ್ನು ಹೀಗೆ ವಿವರಿಸುತ್ತಾರೆ :— 'ಸ್ವ' ಅಂದರೆ ಅವಯವರಹಿತ ಮತ್ತು ಸಚ್ಚಿದಾನಂದಸ್ವರೂಪಿಯಾದ ಅಂತರಾತ್ಮ. ಸುಖಮಯವಾದ ಅದರ ಸಾಮ್ರಾಜ್ಯದಲ್ಲಿ ಅದನ್ನು ಪ್ರಸ್ಥಾಪಿಸುವದೇ ಉದ್ದೇಶ.[೧] ಶ್ಲೋಕ ೨.೫೮ರ ಮೇಲೆ ವ್ಯಾಖ್ಯೆ ಬರೆಯುವಾಗ ಅವರು ಹೀಗೆ ತಿಳಿಸುತ್ತಾರೆ— ಯಾವನು ತನ್ನಿಂದಲೇ ಪ್ರಕಾಶಿಸುತ್ತಾನೋ, ಅಂದರೆ ಸ್ವಯಂಪ್ರಕಾಶಿಯಾಗಿದ್ದಾನೋ ಅವನೇ 'ಸ್ವರಾಟ್'. ಆದ್ದರಿಂದಲೇ 'ಸ್ವಾರಾಜ್ಯ' ಅಂದರೆ ತನ್ನಿಂದಲೇ ಪ್ರಕಾಶ-ಮಾನವಾಗಿರುವ ಸ್ಥಿತಿ; ಆ ಸೌಖ್ಯವೇ ಪರಮಪುರುಷಾರ್ಥ.[೨] ಶ್ಲೋಕ ೨.೬೪ರ ವ್ಯಾಖ್ಯೆಯಲ್ಲಿ ಅವರು ಹೀಗೆ ಬರೆದಿದ್ದಾರೆ :—ಸ್ವ ಅಂದರೆ ಸ್ವರ್ಗ; ಅದರ ರಾಜ-ನಾಗಿರುವ ಸ್ಥಿತಿಯೇ ಸ್ವಾರಾಜ್ಯ.[೩] ಶ್ಲೋಕ ೩.೪೩ ಇದರ ವ್ಯಾಖ್ಯೆಯಲ್ಲಿ ಅವರು 'ಯಾವದು ಸ್ವಯಂಪ್ರಕಾಶಿಯಾಗಿದೆಯೋ ಆ ಸುಖವೇ ಸ್ವಾರಾಜ್ಯ' ಎಂದು ಹೇಳಿ-ದ್ದಾರೆ.[೪]

ಈ ಗ್ರಂಥದ ಇನ್ನೊಂದು ಹೆಸರು 'ಸಾಮ್ರಾಜ್ಯ-ಸಿದ್ಧಿ' ಅಥವಾ 'ಆತ್ಮ-ಸಾಮ್ರಾಜ -ಸಿದ್ಧಿ ಎಂದು ಕೊಡಲಾಗಿದೆ.

ಈ ಗ್ರಂಥದ ಸ್ವರೂಪ ಮತ್ತು ಸಾರಾಂಶ

ಸ್ವಾರಾಜ್ಯಸಿದ್ಧಿಯು ಅದ್ವೈತ ವೇದಾಂತದ ಪ್ರಕರಣ-ಗ್ರಂಥವಾಗಿದೆ. ಪ್ರಕ-ರಣ-ಗ್ರಂಥ ಅಂದರೆ ತನ್ನ ವಿಷಯದ ಒಂದು ಭಾಗವನ್ನು ಕುರಿತು ಮತ್ತು ವಿಶಿಷ್ಟ-

---

೧) ಸ್ವಃ ನಿರವಚ್ಛಿನ್ನ-ಸಚ್ಚಿದಾನನ್ದ-ಸ್ವರೂಪಮಾತ್ರಲಕ್ಷಣ-ಯಾಥಾತ್ಮ್ಯೇನ ಅವಶಿಷ್ಟೋ ಯ ಆತ್ಮಾ ಪ್ರತ್ಯಗಾತ್ಮಾ, ತದ್ರೂಪೇ ರಾಜ್ಯೇ ಸರ್ವಾಧಿ-ಪತ್ಯೇ, ಸುಖಾನಾಂ ತತ್ರ ಅನ್ತರ್ಭಾವಾತ್, ರಾಜಭಾವೇ ಅಭಿಷೇಕ್ತುಂ ಪ್ರತಿಷ್ಠಾಪಯಿತುಮ್ ।

೨) ಸ್ವಯಮೇವ ರಾಜತೇ ಇತಿ ಸ್ವರಾಟ್ ಸ್ವಪ್ರಕಾಶಃ ತದ್‌ಭಾವಃ ಸ್ವಾರಾಜ್ಯಂ, ತದೇವ ಸೌಖ್ಯಂ ಪರಮಪುರುಷಾರ್ಥಃ ।

೩) ಸ್ವಃ ಸ್ವರ್ಗಃ, ತಸ್ಯ ರಾಜಾ, ತದ್‌ಭಾವಃ ಸ್ವಾರಾಜ್ಯಮ್ ।

೪) ಸ್ವಯಮೇವ ರಾಜತೇ ದೀಪ್ಯತೇ ಯತ್‌ಸೌಖ್ಯಮ್ ಆನನ್ದಃ ತತ್-ಸ್ವರೂಪೇಣ.... ।

ವಾದ ಅಂಶಕ್ಕೆ ಅಥವಾ ದೃಷ್ಟಿಕೋಣಕ್ಕೆ ಮಹತ್ತ್ವ ಕೊಟ್ಟು ಬರೆದ ಚಿಕ್ಕ ಹೊತ್ತಿಗೆ.[೧] ಸ್ವಾರಾಜ್ಯಸಿದ್ಧಿಯಲ್ಲಿ ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ೫೪ ಶ್ಲೋಕಗಳಿದ್ದು ಅದರ ಹೆಸರು 'ಅಧ್ಯಾರೋಪ ಪ್ರಕರಣ.' 'ಅಪವಾದ ಪ್ರಕರಣ' ಎಂಬ ಎರಡನೆಯ ಭಾಗದಲ್ಲಿ ೬೨ ಶ್ಲೋಕಗಳಿವೆ. ಮೂರನೆಯ ಭಾಗದಲ್ಲಿ ೪೭ ಶ್ಲೋಕಗಳಿದ್ದು ಅದರ ಹೆಸರು 'ಕೈವಲ್ಯ' ಅಥವಾ 'ಜೀವನ್ಮುಕ್ತ ಪ್ರಕರಣ'.

ಮೊದಲನೆಯ ಪ್ರಕರಣವು ಪರಮಾನಂದಮೂರ್ತಿಯಾದ ಶಿವನ ಸ್ತುತಿಯಿಂದ ಪ್ರಾರಂಭವಾಗುತ್ತದೆ (ಶ್ಲೋಕ ೧). ಆಮೇಲೆ ಗ್ರಂಥಕರ್ತರು ತಮ್ಮ ಸದ್ಗುರುಗಳನ್ನು ನಮಿಸುತ್ತಾರೆ (ಶ್ಲೋಕ ೨-೩). ಈ ಗ್ರಂಥವು ಮುಮುಕ್ಷುಗಳಿಗಾಗಿದೆ ಎಂದು ಅವರು ತಿಳಿಸುತ್ತಾರೆ (೪). ಬಂಧನವು ಅಧ್ಯಾಸಮೂಲಕವಾಗಿದೆ; ಆದ್ದರಿಂದ ಅದರ ನಾಶ ಜ್ಞಾನದಿಂದಲೇ ಸಾಧ್ಯ. ಮೀಮಾಂಸಕರು ತಿಳಿದಂತೆ ಕರ್ಮದಿಂದಲ್ಲ (೫-೧೦). 'ಜ್ಞಾನ' ಅಂದರೆ ಬ್ರಹ್ಮ ಮತ್ತು ಆತ್ಮ ಇವುಗಳ ಐಕ್ಯದ ಸಾಕ್ಷಾತ್ಕಾರ (೧೧). ಆತ್ಮಸ್ವರೂಪದ ಬಗೆಗಿರುವ ಭಿನ್ನ ಭಿನ್ನ ಮತಗಳನ್ನು ಹೇಳಿ (೧೨-೧೩) ಸಾಂಖ್ಯ, ವೈಶೇಷಿಕ, ಬೌದ್ಧ ಮುಂತಾದ ದರ್ಶನಗಳಲ್ಲಿ ಜಗತ್‌ಕಾರಣದ ಬಗೆಗೆ ಹೇಳಿದ ಮತಗಳನ್ನು ನಿರಾಕರಿಸಿದ್ದಾರೆ (೧೪-೨೮). ಚಾರ್ವಾಕಮತವನ್ನೂ ಖಂಡಿಸಿದ್ದಾರೆ (೨೯-೩೧). ಶರೀರ, ಇಂದ್ರಿಯಗಳು, ಪ್ರಾಣ, ಮನಸ್ಸು ಅಥವಾ ಬುದ್ಧಿ (ವಿಜ್ಞಾನ) ಇವು ಆತ್ಮವಲ್ಲ ಎಂಬುದನ್ನು ತೋರಿಸಿದ್ದಾರೆ (೩೨-೩೬). ಆತ್ಮಸ್ವರೂಪದ ಬಗೆಗೆ ಪಾಂಚರಾತ್ರ ಹಾಗು ಭಾಟ್ಟ ಮತಗಳು, ಹಾಗೆಯೇ ಕಣಾದ ಮತ್ತು ಗೌತಮರ ಮತಗಳು ಕಟುವಾಗಿ ಖಂಡಿಸಲ್ಪಟ್ಟಿವೆ (೩೭–೪೧). ಆತ್ಮನ ನಿಜವಾದ ಸ್ವರೂಪದ ವರ್ಣನೆ ಮಾಡಿ (೪೨-೪೬) ಅಧ್ಯಾಸ, ಅವಿದ್ಯೆ ಮತ್ತು ಮಾಯೆ ಇವುಗಳನ್ನು ಕುರಿತು ವಿವರಣೆಯನ್ನು ನೀಡಿದ್ದಾರೆ (೪೭–೫೧). ಮನುಷ್ಯನನ್ನು ಜನ್ಮಮರಣದ ದುಷ್ಟಚಕ್ರದಿಂದ ಬಿಡಿಸಲು ಉಪನಿಷತ್ತು ಮುಂತಾದ ಆಧ್ಯಾತ್ಮಿಕ ಗ್ರಂಥಗಳು ಪ್ರವೃತ್ತವಾಗಿವೆ (೫೨–೫೪).

ಹೀಗೆ ಮೊದಲನೆಯ ಪ್ರಕರಣವು ಶ್ರುತಿ ಮತ್ತು ತರ್ಕ ಇವುಗಳ ಸಹಾಯದಿಂದ ಪ್ರತಿಪಕ್ಷಗಳನ್ನು ನಿರಾಕರಿಸುತ್ತದೆ. ಇದರಲ್ಲಿ ಬಂದಿರುವ ಮುಖ್ಯ ಸಿದ್ಧಾಂತಗಳು ಹೀಗಿವೆ :—

---

೧) ಶಾಸ್ತ್ರೈಕದೇಶ ಸಂಬದ್ಧಂ ಶಾಸ್ತ್ರಕಾರ್ಯಾನ್ತರೇ ಸ್ಥಿತಮ್ ।
ಆಹುಃ ಪ್ರಕರಣಂ ನಾಮ ಗ್ರಂಥಭೇದಮವಿಸ್ತರಮ್ ॥

೧) ಸರ್ವಜ್ಞ, ಸರ್ವಶಕ್ತಿ ಮತ್ತು ಸರ್ವವ್ಯಾಪಿಯಾದ ಹಾಗು ಮಾಯಾ-ಶಕ್ತಿಯಿಂದ ಕೂಡಿದ ಬ್ರಹ್ಮವು ಜಗತ್‌ಕಾರಣವಾಗಿದೆ.

೨) ಬ್ರಹ್ಮವು ಸಚ್ಚಿದಾನಂದಸ್ವರೂಪಿ ಮತ್ತು ಅದ್ವಯವಾಗಿದೆ.

೩) ಅದು ಸ್ವಯಂಪ್ರಕಾಶವಾಗಿದೆ.

೪) ಎಲ್ಲ ಶ್ರುತಿಗಳ ತಾತ್ಪರ್ಯವು ಈ ಬ್ರಹ್ಮಕ್ಕೇ ಸಂಬಂಧಪಟ್ಟಿದೆ.

೫) 'ಆ ಬ್ರಹ್ಮವೇ ನಮ್ಮ ಆತ್ಮ' ಎಂಬುದನ್ನು ತಿಳಿದುಕೊಂಡರೆ ಮನುಷ್ಯನು ಮೋಕ್ಷವನ್ನು ಪಡೆಯುತ್ತಾನೆ.

'ಜಗತ್ತಿನ ಕಾರಣ ಬ್ರಹ್ಮ'—ಇದು ಬ್ರಹ್ಮದ ತಟಸ್ಥ ಲಕ್ಷಣವೆಂದು ತಿಳಿಸಿ ಎರಡನೆಯ ಪ್ರಕರಣವು ಪ್ರಾರಂಭವಾಗುತ್ತದೆ. ಮಾಯೆಯಿಂದ ನಿರ್ಮಿತವಾದ ವ್ಯಾವಹಾರಿಕ ವಸ್ತುಗಳಿಗೆ ಅರ್ಥಕ್ರಿಯಾಕಾರಿತ್ವ ಇದೆ; ಆದರೆ ಅಂತಿಮ ಸತ್ಯತ್ವವಿಲ್ಲ (೧–೨). 'ಭೇದ' ಕಲ್ಪನೆಯನ್ನು ಪರೀಕ್ಷಣೆಗೆ ತೆಗೆದುಕೊಂಡು ಬ್ರಹ್ಮ ಒಂದೇ ಮತ್ತು ಅದ್ವಿತೀಯವಾಗಿರುವುದರಿಂದ ಭೇದಕ್ಕೆ ನಿಜವಾಗಿ ಆಸ್ಪದವೇ ಇಲ್ಲ ಎಂಬು–ದನ್ನು ತೋರಿಸಿದ್ದಾರೆ ಭೇದವು ಯಾವ ವಸ್ತುವಿನದೂ ಮೂಲಭೂತ ಸ್ವಭಾವ–ವಲ್ಲ. ಅದು ಕೇವಲ ಸಾಪೇಕ್ಷವಾಗಿದ್ದು ತುಲನೆ ಮಾಡುವಾಗ ತೋರುತ್ತದೆ. ಹೀಗೆ ಭೇದವು ಗುಣಗಳ ಭಿನ್ನತೆಯಮೇಲೆ ಆಧಾರಿತವಾಗಿದ್ದರಿಂದ ಇಲ್ಲಿ ಚಕ್ರಕಾ–ಪತ್ತಿಯಿದೆ. ಪ್ರತ್ಯಕ್ಷ, ಅನುಮಾನ, ಉಪಮಾನ ಮತ್ತು ಶಬ್ದ ಇವು ಭೇದಕ್ಕೆ ಪ್ರಮಾಣಗಳಾಗುವದಿಲ್ಲ. ಅದರಂತೆಯೇ 'ದ್ವಿತ್ವ' ಮತ್ತು 'ಪೃಥಕ್ತ್ವ' ಮುಂತಾದ ಕಲ್ಪನೆಗಳು ತರ್ಕಬದ್ಧವಲ್ಲ (೩–೯). ಕಾರಣ ಮತ್ತು ಕಾರ್ಯ ಇವು ಅನನ್ಯವಾಗಿವೆ [೧೦-೧೧]. ಎಲ್ಲ ವಸ್ತುಗಳ ಅಸ್ತಿತ್ವ ಬ್ರಹ್ಮದ 'ಸತ್' ಸ್ವಭಾವವನ್ನು ಆಧರಿಸಿದೆ; ಆದರ 'ಚಿತ್' ಮತ್ತು 'ಆನಂದ' ಸ್ವಭಾವ ಮಾತ್ರ ಮಾಯೆಯಿಂದ ಆವೃತವಾಗಿರು–ತ್ತದೆ [೧೨-೧೪]. ಜಗತ್ತಿನ ಉತ್ಪತ್ತಿಯನ್ನು ವರ್ಣಿಸುವ ಉಪನಿಷತ್ತುಗಳ ತಾತ್ಪರ್ಯವನ್ನು ಹೀಗೆ ವಿವರಿಸಿದ್ದಾರೆ— ನಾವು ಸಿಲುಕಿ ಬಿದ್ದಿರುವ ಮತ್ತು ನಮಗೆ ಗೊತ್ತಿರುವ ಜಗತ್ತಿನಿಂದ (ಕಾರ್ಯದಿಂದ) ಶ್ರುತಿಯು ನಮಗೆ ಗೊತ್ತಿರದ ಮತ್ತು ಸೂಕ್ಷ್ಮವಾದ ಬ್ರಹ್ಮದ ಕಡೆಗೆ [ಕಾರಣದ ಕಡೆಗೆ] ನಮ್ಮನ್ನು ಕರೆದುಕೊಂಡು ಹೋಗುತ್ತದೆ. ಅದು ಸ್ವಾಭಾವಿಕವೂ ತರ್ಕಬದ್ಧವೂ ಆಗಿದೆ. ಆದ್ದರಿಂದ ವಿವಿಧ ಉಪನಿಷತ್ತುಗಳಲ್ಲಿ ಕಂಡುಬರುವ ಸೃಷ್ಟಿಯ ವರ್ಣನೆಯಿಂದ ಜಗತ್ತಿನ ಸತ್ಯತೆ ಸಿದ್ಧವಾಗುವದಿಲ್ಲ; ಆ ವರ್ಣನೆಯು ಬ್ರಹ್ಮ ಮತ್ತು ಜಗತ್ತು ಇವುಗಳ ಅನನ್ಯತೆಯನ್ನು ತೋರಿ–ಸುತ್ತದೆ [೧೫-೨೭]. 'ಸಚ್ಚಿದಾನಂದ' ಇದು ಬ್ರಹ್ಮದ ಸ್ವರೂಪಲಕ್ಷಣವಾಗಿದ್ದು [೨೮–೩೧] ಈ ಲಕ್ಷಣವೇ ಆತ್ಮನಲ್ಲಿಯೂ ಹೇಗಿದೆ ಎಂಬುದನ್ನು ವಿವರಿಸಿದ್ದಾರೆ [೩೨–೩೫]. ಉಪನಿಷತ್ತುಗಳಲ್ಲಿರುವ "ತತ್ ತ್ವಮಸಿ" ಮುಂತಾದ ವಾಕ್ಯಗಳು

ಬ್ರಹ್ಮ ಮತ್ತು ಆತ್ಮ ಇವುಗಳ ಐಕ್ಯವನ್ನು ಹೇಗೆ ತೋರಿಸುತ್ತವೆ ಎಂಬುದನ್ನು ಈ ರೀತಿಯಿಂದ ಸರಿಯಾಗಿ ತಿಳಿದುಕೊಳ್ಳಬಹುದು. 'ತತ್' ಮತ್ತು 'ತ್ವಮ್' ಈ ಪದಗಳಲ್ಲಿರುವ ಸಾಮಾನಾಧಿಕರಣ್ಯವು ಇದನ್ನೇ ಪ್ರಕಟಿಸುತ್ತದೆ. ಈ ಐಕ್ಯವನ್ನು ಭಾಗಲಕ್ಷಣೆಯ ಸಹಾಯದಿಂದ ಸರಿಯಾಗಿ ತಿಳಿದುಕೊಳ್ಳಬಹುದು [೩೬–೪೩]. "ತತ್ ತ್ವಮಸಿ" ಮುಂತಾದ ವಾಕ್ಯಗಳು ಅಖಂಡಾರ್ಥವನ್ನು ಬೋಧಿಸುತ್ತವೆ [೪೪–೪೫]. ಬಳಿಕ "ಪ್ರಜ್ಞಾನಂ ಬ್ರಹ್ಮ", "ಅಹಂ ಬ್ರಹ್ಮಾಸ್ಮಿ" ಮತ್ತು "ಅಯ-ಮಾತ್ಮಾ ಬ್ರಹ್ಮ" ಈ ಮಹಾವಾಕ್ಯಗಳನ್ನು ವಿವರಿಸಿದ್ದಾರೆ(೪೬–೪೮). ಉಪನಿಷತ್ತಿನ ಋಷಿಗಳ ಅತ್ಯದ್ಭುತ ವಾಣಿಯಾದ ಹಾಗು ಮತ್ತೆ ಮತ್ತೆ ಉಚ್ಚರಿಸಲಾದ "ತತ್ ತ್ವಮಸಿ" ವಾಕ್ಯವನ್ನು ಇಲ್ಲಿ ಹತ್ತು ಶ್ಲೋಕಗಳಲ್ಲಿ ವಿವೇಚಿಸಿದ್ದಾರೆ (೪೯–೫೮). "ಅಯಮಾತ್ಮಾ ಬ್ರಹ್ಮ" ಅಥವಾ "ಅಹಂ ಬ್ರಹ್ಮಾಸ್ಮಿ" ಇಂತಹ ವಾಕ್ಯಗಳ ನಿದಿ-ಧ್ಯಾಸದಿಂದ ಅಖಂಡವೃತ್ತಿಯು ನಿರ್ಮಾಣವಾಗಿ ಅದು ಕೊನೆಯಲ್ಲಿ ಆತ್ಮನೊಳಗೆ ವಿಲೀನವಾಗುತ್ತದೆ (೫೯–೬೧). ಇದು ಭವರೋಗಕ್ಕೆ ದಿವ್ಯೌಷಧವಾಗಿದ್ದು ಸ್ವಾರಾಜ್ಯದ ಪ್ರಾಪ್ತಿಯನ್ನು ಮಾಡಿಕೊಡುತ್ತದೆ. ಕರ್ಮಬೀಜವು ಇದರಲ್ಲಿ ಸುಟ್ಟು ಹೋಗಿ ಮತ್ತೆ ಹುಟ್ಟುವದಿಲ್ಲ; ಮತ್ತು ಇದರಿಂದ ಎಲ್ಲ ಸಂಶಯಗಳೂ ಬಂಧನಗಳೂ ನಾಶವಾಗುತ್ತವೆ (೬೨).

ಹೀಗೆ ಈ ಎರಡನೆಯ ಪ್ರಕರಣವು ಮಾನವಜೀವನದಲ್ಲಿ ಅತ್ಯಂತ ಶ್ರೇಷ್ಠ-ವಾದ ಸಂಗತಿಯನ್ನು ತಿಳಿಯಪಡಿಸುವ ಸತ್ಯದ ಮೇಲ್ಮಟ್ಟವನ್ನು ಬೋಧಿಸುತ್ತದೆ. ಮನುಷ್ಯನು ಈ ಜೀವನದಲ್ಲಿ ಯಾವ ಉತ್ತಮವಾದ ಆನಂದವನ್ನು ಪಡೆಯ ಬಹುದು ಎಂಬುದಕ್ಕೆ ಅದು ನಿದರ್ಶಕವಾಗಿದೆ.

ಶ್ರುತಿಯು ಆತ್ಮನ ಜ್ಞಾನವನ್ನು ಅಪರೋಕ್ಷವಾಗಿ ಹೇಗೆ ಮಾಡಿಕೊಡುತ್ತದೆ ಎಂಬುದರ ವಿವರಣೆಯಿಂದ ಮೂರನೆಯ ಪ್ರಕರಣವು ಪ್ರಾರಂಭವಾಗುತ್ತದೆ. ಹೊರಗಿರುವ ವಸ್ತುವಿನ ಜ್ಞಾನ ಮಾಡಿಕೊಳ್ಳಲು ಇಂದ್ರಿಯ ಹಾಗು ಮನ-ಸ್ಸಿನ ಆವಶ್ಯಕತೆಯಿರುತ್ತದೆ; ಆದರೆ ತಾನಾಗಿಯೇ ನಮ್ಮೊಳಗೆ ಪ್ರಕಾಶಿಸುತ್ತಿರುವ ಆತ್ಮನ ಜ್ಞಾನ ಮಾಡಿಕೊಳ್ಳುವದಕ್ಕೆ ಅವುಗಳ ಆವಶ್ಯಕತೆಯಿರುವದಿಲ್ಲ. ಆತ್ಮನು ಎಲ್ಲ ಇಂದ್ರಿಯಗಳಿಗೆ ಶಕ್ತಿಸ್ರೋತನಾಗಿದ್ದಾನೆ; ಆದರೆ ಅವನು ಗೋಚರವಾಗುವ-ದಿಲ್ಲ (೧–೯). ಈ ಆತ್ಮನ ಸಾಕ್ಷಾತ್ಕಾರಕ್ಕಾಗಿ ಮನುಷ್ಯನು ಇಂದ್ರಿಯನಿಗ್ರಹ ಮಾಡಬೇಕು; ತನ್ನ ಮನಸ್ಸನ್ನು ಶುದ್ಧ ಹಾಗು ಸ್ಥಿರ ಮಾಡಬೇಕು ಮತ್ತು ಏಕಾಂತ-ವಾದ ಸ್ಥಾನದಲ್ಲಿ ಆತ್ಮಚಿಂತನೆ ನಡೆಸಬೇಕು. ನಿಃಸಂಗ ಹಾಗು ಸಹಿಷ್ಣುವಾಗಿದ್ದು

ಶುಚಿಯೂ, ಹಿತವೂ, ಮಿತವೂ ಆದ ಆಹಾರವನ್ನು ಸೇವಿಸಬೇಕು, ಮತ್ತು ಯೋಗಾಭ್ಯಾಸ ಮಾಡಬೇಕು. ಸುಖಾಸನದಲ್ಲಿ ಸ್ಥಿರವಾಗಿ ಕುಳಿತುಕೊಂಡು ಪ್ರಾಣಾಯಾಮದ ಸಹಾಯದಿಂದ ಮನಸ್ಸನ್ನು ಶಾಂತಗೊಳಿಸಿ ಅದನ್ನು ಸ್ಥೂಲ ಅಥವಾ ಸೂಕ್ಷ್ಮ ವಸ್ತುವಿನಲ್ಲಿ ಸ್ಥಿರಪಡಿಸಬೇಕು. ಇದರಿಂದ ಮನಸ್ಸು ಲಯಗೊಳ್ಳುತ್ತದೆ ಮತ್ತು ಮನುಷ್ಯನು ಮೋಹದ ಬಂಧನದಿಂದ ಮುಕ್ತನಾಗುತ್ತಾನೆ (೧೦-೧೧). ಆತ್ಮಸಾಕ್ಷಾತ್ಕಾರವನ್ನು ಪಡೆದ ಅನಂತರ ಮನುಷ್ಯನು ಸಮಾಜದಲ್ಲಿ ಕಾರ್ಯನಿರತನಾಗಿರಬಹುದು ಅಥವಾ ಏಕಾಂತದಲ್ಲಿ ಧ್ಯಾನನಿರತನಾಗಿರಬಹುದು—ಅದರಿಂದ ಅವನಿಗೆ ಯಾವ ಬಂಧನವೂ ನಿರ್ಮಾಣವಾಗುವದಿಲ್ಲ. ಆತ್ಮಜ್ಞಾನದ ಲಾಭಕ್ಕಿಂತ ಹೆಚ್ಚಿನ ಲಾಭ ಮತ್ತೊಂದಿಲ್ಲ (೧೨-೧೫).

ಗಂಗಾಧರ ಸರಸ್ವತಿಯವರು ಜೀವನ್ಮುಕ್ತನ ಸುಂದರ ವರ್ಣನೆಯನ್ನು ಹೀಗೆ ಮಾಡಿದ್ದಾರೆ :— ಜ್ಞಾನಾಗ್ನಿಯು ಅವನ ಸಂಚಿತ ಕರ್ಮವನ್ನು ಸುಟ್ಟುಬಿಡುತ್ತದೆ. ಇಂದಿನ ಹಾಗು ಮುಂದಿನ ಕರ್ಮಗಳು ಜೀವನ್ಮುಕ್ತನನ್ನು ಸ್ಪರ್ಶಿಸುವದಿಲ್ಲ; ಅವನ ಪ್ರಾರಬ್ಧಕರ್ಮ ಮಾತ್ರ ಅವನ ದೇಹಾಂತದವರೆಗೆ ಇರುತ್ತದೆ. ಅವನಿಗೆ ತನ್ನ ದೇಹದ ಬಗೆಗೆ ಆಸಕ್ತಿಯಿರುವದಿಲ್ಲ. ದೇವದಾನವರೂ ಆ ಜ್ಞಾನಿಗೆ ಹಾನಿಮಾಡಲು ಸಮರ್ಥರಾಗುವದಿಲ್ಲ. ಅವನು ಸ್ವಾಭಾವಿಕವಾಗಿ ನೈತಿಕ ಜೀವನವನ್ನು ನಡೆಸುತ್ತಾನೆ; ಮನಸ್ಸನ್ನು ಸಮತೋಲದಲ್ಲಿಡುತ್ತಾನೆ ಮತ್ತು ಆತ್ಮಸಾಕ್ಷಾತ್ಕಾರದಿಂದ ಆನಂದಭರಿತನಾಗಿ ಪೃಥ್ವಿಯಮೇಲೆ ಪ್ರತಿಬಂಧರಹಿತವಾಗಿ ಸಂಚರಿಸುತ್ತಾನೆ. ಆತ್ಮಸಾಕ್ಷಾತ್ಕಾರಿಯಾದ ಮನುಷ್ಯನು ಗೃಹಸ್ಥನಾಗಿರಬಹುದು, ಅಥವಾ ಸಂನ್ಯಾಸಿಯಾಗಿರಬಹುದು. ಜಗತ್ತಿನ ಕಲ್ಯಾಣಕ್ಕಾಗಿ ಅವನು ಇಷ್ಟವಿದ್ದಂತೆ ಆಡ್ಡಾಡಬಹುದು. ದೇವತೆಗಳೂ ಅವನನ್ನು ನಮಿಸುತ್ತಾರೆ. ಜೀವನ್ಮುಕ್ತನು ಮೋಕ್ಷದ ವರವನ್ನು ನೀಡಿದ ಸದ್ಗುರುವಿನ ಗುಣಗಾನ ಮಾಡುತ್ತಾನೆ. ಜಗತ್ತು ಸತ್ಯವಾಗಿರದೆ ಮಿಥ್ಯೆಯಾಗಿದೆಯೆಂದು ತೋರಿಸುವ ಆಧ್ಯಾತ್ಮಿಕ ಅನುಭವದಿಂದ ಅವನು ಅತ್ಯಂತ ಆನಂದ ಭರಿತನಾಗುತ್ತಾನೆ (೧೬-೩೧). ಆತ್ಮನು ಒಬ್ಬನೇ ಆಗಿದ್ದರೂ (ಷಡ್ರಿಪು ಮುಂತಾದ) ಎಲ್ಲ ವೈರಿಗಳನ್ನು ಪರಾಭವಗೊಳಿಸಿ ತ್ರೈಲೋಕ್ಯವನ್ನೂ ನುಂಗಿಬಿಡುತ್ತಾನೆ (೩೨-೩೩). ಗ್ರಂಥಕರ್ತರು ಆತ್ಮಸಾಕ್ಷಾತ್ಕಾರಿಯಾದ ಮನುಷ್ಯನ ವರ್ಣನೆಯನ್ನು ಶ್ಲಿಷ್ಟ ಶಬ್ದಗಳಿಂದ ಮತ್ತು ವಿರೋಧಾಭಾಸದಿಂದ ಕೂಡಿದ ಪದಗಳಿಂದ ಕಾವ್ಯಮಯ ರೀತಿಯಲ್ಲಿ ಮಾಡಿದ್ದಾರೆ (೩೪-೩೬). ಜಗತ್ತಿನ ಉತ್ಪತ್ತಿ. ಸ್ಥಿತಿ ಮತ್ತು ಲಯ ಇವುಗಳ ಜೊತೆಗೆ ಸಂಬಂಧವಿರದಿದ್ದರೂ ಆತ್ಮನು ಬ್ರಹ್ಮಾ, ವಿಷ್ಣು ಮತ್ತು ಮಹೇಶ್ವರನಾಗಿದ್ದಾನೆ. ಮೋಹವೆಂಬ ಆನೆಗಳ ನಾಶ ಮಾಡುವ ಸಿಂಹವೇ ಆತ್ಮನು (೩೭-೪೦). ಆತ್ಮಸಾಕ್ಷಾತ್ಕಾರಿಯಾದವನು ತನ್ನ ಸದುಪದೇಶದಿಂದ ಸಮಾಜವನ್ನು

ಪಾವನಗೊಳಿಸುತ್ತಾನೆ. ಅವನೂ ಅವನ ಕುಲವೂ ಧನ್ಯವೇ ಧನ್ಯ! ಸಫಲ ಜೀವನವನ್ನು ನಡೆಸಿ ಪ್ರಾರಬ್ಧ ಕರ್ಮವು ಮುಗಿದ ಮೇಲೆ ಅವನು ಆನಂದಸಾಗರ ನಾಗಿರುತ್ತಾನೆ (೪೧-೪೩). ಸಂವಿನ್ಮಯ ಪುರುಷನು ಚಂದ್ರನನ್ನು ಹೇಗೆ ಮೀರಿ-ದ್ದಾನೆಂಬುದನ್ನು ಗ್ರಂಥಕರ್ತರು ಚೆನ್ನಾಗಿ ವರ್ಣಿಸಿದ್ದಾರೆ, ಮತ್ತು ಸಮುದ್ರ, ಅಗ್ನಿ, ಖಡ್ಗ, ಸೂರ್ಯ ಮತ್ತು ಚೂಡಾಮಣಿ ಇವುಗಳ ಜೊತೆಗೆ ಆ ಪುರುಷನನ್ನು ಹೋಲಿಸಿದ್ದಾರೆ. ಶಾಂತಿ ಮುಂತಾದ ಸದ್ಗುಣಗಳುಳ್ಳವರಿಗೆ, ವೇದಾಂತವೆಂಬ ಅಮೃತವನ್ನು ಬಯಸುವವರಿಗೆ ಮತ್ತು ಕೈವಲ್ಯವೆಂಬ ಕಲ್ಪವೃಕ್ಷವನ್ನು ಆಶ್ರಯಿಸು-ವವರಿಗೆ (ಸ್ವಾರಾಜ್ಯಸಿದ್ಧಿಯು ವ್ಯಾಖ್ಯೆಯ ಹೆಸರು ಕೈವಲ್ಯ-ಕಲ್ಪದ್ರುಮ) ಈ ಗ್ರಂಥವು ಆನಂದಕಾರಿಯಾಗಲೆಂದು ಗ್ರಂಥಕರ್ತರು ಬಯಸುತ್ತಾರೆ. ಕೊನೆಯಲ್ಲಿ ಗಂಗಾಧರ ಸರಸ್ವತಿಯವರು ತಮ್ಮ ಶಬ್ದಕುಸುಮಾಂಜಲಿಯನ್ನು ಶಿವಪಾರ್ವತಿಯವರ ಚರಣಕಮಲದಲ್ಲಿ ಅರ್ಪಿಸುತ್ತಾರೆ.

ಈ ಮೂರನೆಯ ಪ್ರಕರಣವು ಸಾಕ್ಷಾತ್ಕಾರದ ಸ್ವರೂಪ ಮತ್ತು ಸಾಧನಗಳು, ಜೀವನ್ಮುಕ್ತನ ಸ್ಥಿತಿ ಮತ್ತು ಮುಕ್ತಿಯ ಶ್ರೇಷ್ಠತೆ ಇವುಗಳನ್ನು ವರ್ಣಿಸುತ್ತದೆ. ಆದ್ದರಿಂದ 'ಕೈವಲ್ಯ' ಎಂಬ ಹೆಸರು ಇದಕ್ಕೆ ಸುಯೋಗ್ಯವಾಗಿದೆ. ಶ್ಲೋಕ ೧೬ ರಿಂದ ೪೫ ರ ವರೆಗಿರುವ ಆತ್ಮಜ್ಞಾನಿಯ ವರ್ಣನೆಯು ಪರಿಪೂರ್ಣ ಹಾಗು ಉತ್ಕೃಷ್ಟವಾಗಿರುವದರಿಂದ ಈ ಭಾಗಕ್ಕೆ 'ಜೀವನ್ಮುಕ್ತ-ಗೀತೆ' ಎಂದು ಕರೆಯ-ಬಹುದು.

ಹೀಗೆ ಸ್ವಾರಾಜ್ಯಸಿದ್ಧಿಯು ಉಪನಿಷತ್ತುಗಳ ಚಿಕ್ಕ ಸಾರಾಂಶ ಮತ್ತು ಬ್ರಹ್ಮ-ಸೂತ್ರ ಹಾಗು ಶಾಂಕರಭಾಷ್ಯದ ಸಂಕ್ಷಿಪ್ತ ಪದ್ಯಮಯ ವಿವರಣೆಯಾಗಿದೆ.

ಶೈಲಿ

ಗಂಗಾಧರ ಸರಸ್ವತಿಯವರು ಪ್ರಭಾವಿ, ಸುಲಲಿತ, ಸೂಕ್ಷ್ಮ ಹಾಗು ಮನೋ-ಹರ ಶೈಲಿಯಲ್ಲಿ ಬರೆದಿದ್ದಾರೆ. ಅವರ ಅಭಿವ್ಯಕ್ತಿಯು ಇತರ ಅನೇಕ ವಿದ್ವಾಂಸರ ಅಭಿವ್ಯಕ್ತಿಗಿಂತ ಹೆಚ್ಚು ಸರಲ ಮತ್ತು ಕಡಿಮೆ ಕಠಿನವಾಗಿದೆ. ಸಂಸ್ಕೃತ ಶಬ್ದಸಂಪತ್ತಿನ ಮೇಲೆ ಅವರ ಪ್ರಭುತ್ವವಿದ್ದು ಅವರು ತಾತ್ತ್ವಿಕ ವಾದಗಳನ್ನು ಪುನರುಕ್ತಿಯಿಲ್ಲದೆ ಚೆನ್ನಾಗಿ ಮಂಡಿಸುತ್ತಾರೆ.

ತತ್ತ್ವಜ್ಞಾನದ ವೈಶಾರದ್ಯದ ಜೊತೆಗೆ ಅವರಲ್ಲಿ ಕಾವ್ಯರಚನಾಕೌಶಲ್ಯವೂ ಕಂಡುಬರುತ್ತದೆ. ಅವರು ಅನೇಕ ಅಲಂಕಾರಗಳನ್ನು ಉಪಯೋಗಿಸಿದ್ದಾರೆ. ಶ್ಲೋಕ ೧.೭ರಲ್ಲಿ ದೃಷ್ಟಾಂತವಿದೆ. ಶ್ಲೇಷವು ೩.೩೨ ೩೫, ೩೬-೩೯ ಮುಂತಾದ ಶ್ಲೋಕ

ಗಳಲ್ಲಿ ಕಂಡುಬರುತ್ತದೆ. ಪರಂಪರಿತ ರೂಪಕವು ೩.೪೮. ೪೫ರಲ್ಲಿ ಮತ್ತು ವ್ಯತಿ-ರೇಕವು ೩ ೪೪ರಲ್ಲಿ ಕಾಣುತ್ತದೆ. ೩.೪೧ ರಲ್ಲಿ ಉಪಮೆಯು ಶ್ಲಿಷ್ಟವಾಗಿದೆ.

ಸ್ವಾರಾಜ್ಯಸಿದ್ಧಿಯು ಲಲಿತ ಪದ್ಯಗಳಲ್ಲಿ ಬರೆಯಲಾಗಿದ್ದು ಸ್ರಗ್ಧರಾ ಮತ್ತು ಹರನರ್ತನ ಮುಂತಾದ ದೀರ್ಘ ಛಂದಸ್ಸುಗಳನ್ನು ಉಪಯೋಗಿಸಲಾಗಿದೆ. ವಾದ ವಿವಾದಾತ್ಮಕ ಹಾಗು ರುಕ್ಷವಾದ ತತ್ತ್ವಜ್ಞಾನವನ್ನು ಹೇಳಬೇಕಾಗಿದ್ದರೂ ಇದರಲ್ಲಿ ಕಾವ್ಯಗುಣ ತುಂಬಿದೆ.

ಈ ಗ್ರಂಥದಲ್ಲಿ ಕೆಳಗಿನ ಛಂದಸ್ಸುಗಳನ್ನು ಉಪಯೋಗಿಸಿದ್ದಾರೆ :—

ಅನುಷ್ಟುಪ್—೩.೪೭

ಇಂದ್ರವಜ್ರಾ—೨.೫೯

ಉಪೇಂದ್ರವಜ್ರಾ— ೩.೩೮–೩೯

ಔಪಚ್ಛಂದಸಿಕ—೩.೧೩

ಗೀತಿ—೩ ೩೬

ಪುಷ್ಪಿತಾಗ್ರಾ—೩.೩೦

ಪ್ರಹರ್ಷಿಣೀ—೧.೪೮–೪೯

ಭುಜಂಗಪ್ರಯಾತ—೨.೪೩–೪೫

ಮಂಜುಭಾಷಿಣೀ—೨.೩೯–೪೨; ೩.೧–೬, ೮–೧೧

ಮಂದಾಕ್ರಾಂತಾ—೧.೧–೨; ೩.೪೦

ಮಾಲಿನೀ— ೩.೧೨

ರಥೋದ್ಧತಾ—೨.೧೬

ವಸಂತತಿಲಕಾ—೨ ೪೬–೫೮; ೩.೪೧–೪೪,೪೬

ಶಾರ್ದೂಲವಿಕ್ರೀಡಿತ - ೧.೩, ೧೨–೧೩; ೨.೩೮; ೩.೨೩–೨೫, ೪೫

ಶಾಲಿನೀ—೧.೫

ಶಿಖರಿಣೀ - ೧.೪; ೩.೨೬–೨೯, ೩೧–೩೫, ೩೭

ಸ್ರಗ್ಧರಾ—೧.೬–೧೧ ೧೪–೩೯, ೫೦–೫೪;
೨.೧-೧೫. ೨೯-೩೭, ೬೦-೬೨; ೩.೭

ಮೂವತ್ತೈದು

ಸ್ರಗ್ವಿಣೀ—೩.೧೪-೨೨
ಹರನರ್ತನ—೨.೧೭-೨೮.

ವಿಜ್ಞಾನಂ ಸ್ಥಾಯಿ ಯತ್ತತ್ಸಮಮಿಹ ಮನಸಾ ಕಿಂಚ ನಾನಾತ್ಮತಾ ಸ್ಯಾತ್
ತಸ್ಮಾನೇಕಾತ್ಮಕತ್ವಾತ್ತದಭಿಮತಿವಶಾದಾತ್ಮಬಂಧ-ಶ್ರುತೇಶ್ಚ ।
ಸಾರಥ್ಯಂ ತಸ್ಯ ಕ್ಲೃಪ್ತಂ ಯದಪಿ ತನುರಥೇ ಸ್ವಾತ್ಮನೋ ಭೋಗಮುಕ್ತ್ಯೋಃ
ತಸ್ಮಾದನ್ಯೋಽಸ್ಯ ಸಾಕ್ಷೀ ತದುಪಹಿತತನುಶ್ಚಿನ್ಮಯೋಽಸ್ತ್ಯಂತರಾತ್ಮಾ ॥೩೬॥

ಸ್ಥಿರವಾದ ವಿಜ್ಞಾನರೂಪ ಬುದ್ಧಿಯು ಆತ್ಮನೆಂದಲ್ಲಿ (ಹಿಂದೆ) ಮನಸ್ಸು ಆತ್ಮ ವೆಂದಾಗ ಹೇಳಿದ ದೋಷವು ಇಲ್ಲಿಯೂ ಸಮವಾಗಿ ಅನ್ವಯಿಸುವದು. ಬುದ್ಧಿಗಳು ವಿವಿಧವಾದ್ದರಿಂದ ಆತ್ಮರು ಬಹುಸಂಖ್ಯೆಯವರಾಗಬಹುದು. ಆತ್ಮನಿಗೆ ಬುದ್ಧಿಯ ಅಭಿಮಾನ (ತಾದಾತ್ಮ್ಯಾಧ್ಯಾಸ)ದಿಂದ ಬಂಧವಾಗುವದೆಂದು ಶ್ರುತಿಯಿದೆ. ಆತ್ಮನ ಭೋಗ ಮತ್ತು ಮೋಕ್ಷಗಳಿಗೆ ಕಾರಣವಾಗಿದ್ದರಿಂದ ಶರೀರವೆಂಬ ರಥದಲ್ಲಿ ಬುದ್ಧಿಯು ಸಾರಥಿಯೆಂದು ಕಲ್ಪನೆ ಮಾಡಲಾಗಿದೆ. ಆದ್ದರಿಂದ ಬುದ್ಧಿಗೆ ಸಾಕ್ಷಿರೂಪನಾಗಿ, ಅದರಿಂದ ಆವೃತನಾಗಿ, ಚೈತನ್ಯಸ್ವರೂಪನಾದ ಅಂತರಾತ್ಮನು ಬೇರೆಯಾಗಿದ್ದಾನೆ.

ಅಣ್ವಾತ್ಮಾ ಚಿತ್ಸ್ವರೂಪೋ ಯದಿ ಸಕಲತನೌ ಶೈತ್ಯಬೋಧೋ ನ ತೇ ಸ್ಯಾತ್
ನಾವೈಧರ್ಮ್ಯೇಽಸ್ಯ ಬೋಧಃ ಸಕಲತನುಗತಗ್ರಾಹಕೋಽನ್ಯೋ ಗುಣಶ್ಚ ।
ವೈಧರ್ಮ್ಯೇಽಣೋರ್ಗುಣಶ್ಚಿತ್ ಕಥಮಖಿಲತನುಂ ವ್ಯಾಪ್ನುಯಾದಾಣವಂ ವಾ
ಸಿದ್ಧಂ ಕೇನಾತ್ಮನಸ್ತೇ ಶ್ರುತಿಭಿರಿತಿ ನ ಯತ್ತಾಸ್ತದಾನನ್ತ್ಯನಿಷ್ಠಾಃ ॥೩೭॥

(ಪಾಂಚರಾತ್ರಮತೀಯರು ಹೇಳುವಂತೆ) ಆತ್ಮನನ್ನು ಚೈತನ್ಯಸ್ವರೂಪನೂ ಅಣುಪರಿಮಾಣವುಳ್ಳವನೂ ಎಂದು ನಾವು ಒಪ್ಪಿದರೆ ಸಮಗ್ರದೇಹದಲ್ಲಿ ಶೈತ್ಯದ (ಅಥವಾ ಉಷ್ಣತೆಯ) ಅರಿವು ಆಗಲಾರದು. (ಮತ್ತು ಆತ್ಮನೂ ಚೇತನ, ಜ್ಞಾನವೂ ಚೇತನ ಹೀಗೆ) ಸಾಮ್ಯವಿರುವದಾದಲ್ಲಿ ದೇಹದಲ್ಲಿ ಇರುವ ಜ್ಞಾತೃ ಮತ್ತು ಜ್ಞಾನ ಬೇರೆಯಾಗಲಾರವು. ಇನ್ನು (ಗುಣ-ಗುಣಿಗಳಿಗೆ) ವೈಧರ್ಮ್ಯ ಒಪ್ಪಿದಲ್ಲಿ ಆತ್ಮನು ಅಣುವಾಗಿರುವದರಿಂದ ಅವನ ಗುಣವಾದ ಚಿತ್ತು (ಜ್ಞಾನವು) ದೇಹದಲ್ಲೆಲ್ಲ ಹೇಗೆ ಪಸರಿಸಬೇಕು ? ಮತ್ತು ಆತ್ಮನ ಅಣುಭಾವವು ನಿನಗೆ ಯಾವ ಪ್ರಮಾಣದಿಂದ ಸಿದ್ಧಿಸುವದು ? ಶ್ರುತಿಗಳಿಂದೆಂದರೆ ಸರಿಯಲ್ಲ – ಏಕೆಂದರೆ ಅವು ಆತ್ಮನ ಅನಂತತ್ವ ವನ್ನೂ ಸಾರುತ್ತವೆ. ("ಅನಂತಮ್ ಬ್ರಹ್ಮ" ಮುಂತಾದವುಗಳು.)

---

1. घ. मुक्त्याः

नैकः स्याच्चिज्जडात्मा कथमथ विषयः स स्वयं स्वस्य कौ तौ
अंशौ योगस्तथात्मा किमिति च जडता केन वा चेतनस्य ।
कर्तृत्वं तस्य कीदृक् करणसमुदयं सैष धत्ते कथं वा
तत्त्वं जीवस्य देवप्रियपशुभिरिदं कर्मठैर्दुर्निरूपम् ॥३८॥

One Ātman can not be both *jaḍa* (sentient) and *cetana* (non–sentient). How can it be an objeet to itself ? Which are the two parts and how do they become related to each other ? What is Ātman ? How and why does *cetana* become *jaḍa* ? What is the nature of its *kartṛtva* (doership) ? How does it assume the group of senses ? Those who are engaged in sacrifices and are thus dear victims of the gods, can hardly explain the nature of Jīva.

जीवानां वैभवं चेत्तनुकृतिकरणादृष्टसाधारणत्वात्
न स्याद् भोगव्यवस्था व्यतिकरमयते येन सर्वैर्मनोऽपि ।
नानात्म्यं चाप्रमाणं[1] गदसि यदि तनूपाधिभिस्त्वं व्यवस्थां
सिद्धेऽसिद्धेऽपि भेदे यत इह विफलाः कल्पनीया विशेषाः ॥३९॥

If jīvas are all-pervading, then one will not be able to explain enjoyment (suffering etc.), as the jīvas would be equally related to all bodies, actions, senses and their *adṛṣṭa*. The mind also would be associated with all (Jīvas). If you try to explain it with the help of the adjuncts in the form of the (different) bodies, the diversity of Ātmans will be disproved. It is futile to imagine *viśeṣas* (special qualities for distinguishing), whether the difference in Ātmans be proved or disproved.

ನೈಕಃ ಸ್ಯಾಚ್ಚಿಜ್ಜಡಾತ್ಮಾ ಕಥಮಥ ವಿಷಯಃ ಸ ಸ್ವಯಂ ಸ್ವಸ್ಯ ಕೌ ತೌ
ಅಂಶೌ ಯೋಗಸ್ತಥಾತ್ಮಾ ಕಿಮಿತಿ ಚ ಜಡತಾ ಕೇನ ವಾ ಚೇತನಸ್ಯ ।
ಕರ್ತೃತ್ವಂ ತಸ್ಯ ಕೀದೃಕ್ ಕರಣಸಮುದಯಂ ಸೈಷ ಧತ್ತೇ ಕಥಂ ವಾ
ತತ್ತ್ವಂ ಜೀವಸ್ಯ ದೇವಪ್ರಿಯಪಶುಭಿರಿದಂ ಕರ್ಮಠೈರ್ದುರ್ನಿರೂಪಂ ॥೩೮॥

(ಮೀಮಾಂಸಕರಾದ ಕುಮಾರಿಲಭಟ್ಟರ ಮತದಲ್ಲಿ ಹೇಳುವ ರೀತಿಯಲ್ಲಿ) ಒಬ್ಬನೇ ಆದ ಆತ್ಮನು ಜಡನೂ ಚೇತನನೂ ಎರಡೂ ಆಗಿರುವದು ಸಾಧ್ಯವಿಲ್ಲ. ಹಾಗಾದಲ್ಲಿ ತನಗೆ ತಾನೇ ಹೇಗೆ ವಿಷಯನಾಗುವನು ? ಆ (ಚೈತನ್ಯ ಮತ್ತು ಜಡ ಎಂಬ) ಎರಡೂ ಅಂಶಗಳ ಸಂಬಂಧ ಹಾಗೂ ಸ್ವರೂಪವೇನು ? ಹೀಗಿರುವಾಗ ಆತ್ಮನೆಂದರೇನು ? ಮತ್ತು ಚೇತನನಿಗೆ ಜಡತ್ವವು ಯಾವುದರಿಂದ ? ಅವನಿಗೆ ಕರ್ತೃತ್ವವು ಎಂಥದು ? ಅವನು ಇಂದ್ರಿಯ-ಸಂದೋಹವನ್ನು ಹೇಗೆ ಹೊಂದುವನು ? ಆದ್ದರಿಂದ ದೇವರುಗಳಿಗೆ ಪ್ರಿಯಪಶುಗಳಾದ ಮೀಮಾಂಸಕರಿಗೆ ಜೀವತತ್ತ್ವದ ನಿರೂಪಣೆ ದುಸ್ಸಾಧ್ಯವಾದುದು.

ಜೀವಾನಾಂ ವೈಭವಂ ಚೇತ್ತನುಕೃತಿಕರಣಾದೃಷ್ಟಸಾಧಾರಣತ್ವಾತ್
ನ ಸ್ಯಾದ್ ಭೋಗವ್ಯವಸ್ಥಾ ವ್ಯತಿಕರಮಯತೇ ಯೇನ ಸರ್ವೈರ್ಮನೋಽಪಿ ।
ನಾನಾತ್ಮ್ಯಂ ಚಾಪ್ರಮಾಣಂ ಗದಸಿ ಯದಿ ತನೂಪಾಧಿಭಿಸ್ತ್ವಂ ವ್ಯವಸ್ಥಾಂ
ಸಿದ್ಧೇಽಸಿದ್ಧೇಽಪಿ ಭೇದೇ ಯತ ಇವ ವಿಫಲಾಃ ಕಲ್ಪಸಿಯಾ ವಿಶೇಷಾಃ ॥೩೯॥

(ಕಣಾದ ಮತ್ತು ಗೌತಮರ ಮತದಲ್ಲಿ) ಜೀವರು ಸರ್ವವ್ಯಾಪಕರಾದಲ್ಲಿ ದೇಹ, ಕೃತಿ, ಇಂದ್ರಿಯ, ಪಾಪಪುಣ್ಯ ಮತ್ತು ಮನಸ್ಸು ಎಲ್ಲ(ಜೀವ)ರಿಗೂ ಹೊಂದಿಕೊಳ್ಳುವದರಿಂದ ಭೋಗದ ಸರಿಯಾದ ವ್ಯವಸ್ಥೆಯೇ ಇಲ್ಲವಾದೀತು. (ಎಲ್ಲರ ಸುಖದುಃಖಗಳೂ ಪರಸ್ಪರ ಸಂಕರವಾಗಬೇಕಾದೀತು.) ಈ (ಆತ್ಮಭೇದ)ವ್ಯವಸ್ಥೆಯು ಶರೀರಾದಿ ಉಪಾಧಿಗಳ ಮೂಲಕವಾದಲ್ಲಿ ನಾನಾತ್ಮ್ಯವಾದವು ಅಪ್ರಾಮಾಣಿಕವಾಗುವದು. ಆತ್ಮಭೇದವು ಸಿದ್ಧವೇ ಆಗಲಿ ಅಥವಾ ಅಸಿದ್ಧವೇ ಆಗಲಿ ಕಲ್ಪಿಸುವ ವಿಶೇಷಗಳು ನಿಷ್ಫಲವಾದವುಗಳು. (ಔಪಾಧಿಕ ಬೇಧವು ಅಸತ್ಯವಾಗಿದೆ. ಒಂದೊಂದು ಆತ್ಮನಲ್ಲಿರುವ ವಿಶೇಷಗಳು ಆತ್ಮವಿಭೇದಕವಾಗಿವೆ ಎಂದಲ್ಲಿ; ಕಣಾದರು ಆಕಾಶ. ಕಾಲ. ದಿಕ್ಕು [ಆತ್ಮಾ] ಈ ನಿತ್ಯ ಪದಾರ್ಥಗಳಲ್ಲಿಯೂ ವಿಶೇಷವನ್ನು ಒಪ್ಪುವದರಿಂದ ಆಕಾಶಾದಿಗಳಲ್ಲಿಯೂ ಈ ವಿಶೇಷದ ಮೂಲಕ ಭೇದಗಳೇಕೆ ಒದಲಾರವು ?)

---

1. ख. घ. वाभ्रमाणं

किं चात्मन्यनवयवे न संप्रयोगः
संभाव्यो निरवयवस्य मानसस्य ।
न द्रव्यं निरवयवं न शाश्वतं वा
तद्धर्मो न च धिषणा यतो जडा स्यात् ॥४०॥

Moreover, the association of the mind, which has no parts, is not possible with the Ātman which also has no parts. Matter can neither be partless nor eternal. Consciousness can not be a quality of matter; because in that case consciousness also would be non-sentient.

अज्ञानं स्वमथ सुखं सुषुप्तबुद्धं
बुद्धस्त्वं स्मरसि कथं स्वतो जडात्मा ।
विज्ञानान्ययमयमित्यनेकसंख्या–
न्यद्राक्षं चिरमिति केन वेत्स्यसाक्षी ॥४१॥

How do you, being *jaḍa* Ātman, understand the absence of knowledge in and the happiness arising due to sleep, after waking ? If you are not a witness (being *jaḍa*), how do you know (remember) that you have observed for a long time the many *vijñānas* in the form of this (object), this (object) ? (Hence the Ātman must be accepted to be eternal consciousness).

इच्छादेरुदयविनाशसंततीनाम्
अक्षाणामसुमनसां धियश्च तस्मात्
द्रष्टान्योऽस्त्यविपरिलुप्तदृक्सतत्त्वो
निःसङ्गो विहरति यः पुरत्रयेऽपि ॥४२॥

ಕಿಂ ಚಾತ್ಮನ್ಯನವಯುವೇ ನ ಸಂಪ್ರಯೋಗಃ
ಸಂಭಾವ್ಯೋ ನಿರವಯುವಸ್ಯ ಮಾನಸಸ್ಯ ।
ನ ದ್ರವ್ಯಂ ನಿರವಯುವಂ ನ ಶಾಶ್ವತಂ ವಾ
ತದ್ಧರ್ಮೋ ನ ಚ ಧಿಷಣಾ ಯತೋ ಜಡಾ ಸ್ಯಾತ್ ॥೪೮॥

ಇದಲ್ಲದೆ (ನೈಯಾಯಿಕ ಮತದಲ್ಲಿ ಒಪ್ಪುವ, ಜ್ಞಾನಕ್ಕೆ ಕಾರಣವಾದ ಆತ್ಮ ಮನಃಸಂಯೋಗವು ಸರಿಯಲ್ಲ ಏಕೆಂದರೆ) ಅವಯುವರಹಿತನಾದ ಆತ್ಮನಿಗೆ ನಿರವಯುವವಾದ ಮನಸ್ಸಿನ ಸಂಯೋಗವು ಸಂಭವಿಸಲಾರದು. ಅವಯುವ-ರಹಿತವಾದ ದ್ರವ್ಯವು ಇರಲು ಸಾಧ್ಯವಿಲ್ಲ. ಮತ್ತು (ಅವಯುವದಿಂದ ಕೂಡಿದ್ದು) ಇದ್ದರೂ ಅದು ನಿತ್ಯವಾಗಿರುವದಿಲ್ಲ. ಅದರಂತೆ (ದ್ರವ್ಯವಾಗಿ ಜಡನಾದ) ಆತ್ಮನ ಗುಣವು (ಚೈತನ್ಯವಾದ) ಜ್ಞಾನವಾಗಲಾರದು. ಯಾಕೆಂದರೆ (ವಿರುದ್ಧಸ್ವಭಾವದ ಧರ್ಮಧರ್ಮಿಗಳು ಇರಲಾರವು.) ಜ್ಞಾನವೂ ಜಡವಾಗಬೇಕಾದೀತು. (ಆದ್ದರಿಂದ ಆತ್ಮನು ಜ್ಞಾನವುಳ್ಳ ಜಡವಸ್ತುವೆಂಬ ಮತವು ಸರಿಯಲ್ಲ.)

ಅಜ್ಞಾನಂ ಸ್ವಮಥ ಸುಖಂ ಸುಷುಪ್ತ-ಬುದ್ಧಂ
ಬುದ್ಧಸ್ತ್ವಂ ಸ್ಮರಸಿ ಕಥಂ ಸ್ವತೋ ಜಡಾತ್ಮಾ ।
ವಿಜ್ಞಾನಾನ್ಯಯಮಯಮಿತ್ಯನೇಕ-ಸಂಖ್ಯಾ-
ನ್ಯದ್ರಾಕ್ಷಂ ಚಿರಮಿತಿ ಕೇನ ವೇತ್ಸ್ಯಸಾಕ್ಷೀ ॥೪೯॥

(ಜಡಾತ್ಮನನ್ನು ಒಪ್ಪುವ ನೈಯಾಯಿಕನೇ), ಜಡಾತ್ಮನಾದ ನೀನು ಗಾಢನಿದ್ರೆಯಿಂದ ಎಚ್ಚತ್ತಮೇಲೆ ಜ್ಞಾನಾಭಾವವನ್ನು. ಸುಖವನ್ನು ಮತ್ತು ಸುಷುಪ್ತಿಯಲ್ಲಿ (ಇದ್ದೆನು ಎಂದು) ತಿಳಿಯುವ ಆತ್ಮನನ್ನು (ಸುಖವಾಗಿ ಮಲಗಿದ್ದೆನು, ಏನನ್ನೂ ತಿಳಿಯಲಿಲ್ಲ ಎಂದು) ಹೇಗೆ ಸ್ಮರಿಸುವೆ ? ಇದು (ಘಟ), ಇದು (ಘಟ) ಇದನ್ನು ಬಹಳ ಕಾಲದ ವರೆಗೆ ನೋಡಿದೆನು ಎಂದು ಬಹುಸಂಖ್ಯೆಯ (ಧಾರಾವಾಹಿಕ) ಜ್ಞಾನಗಳನ್ನು (ಜಡವಾದ್ದರಿಂದ) ಸಾಕ್ಷಿಯಲ್ಲದ ನೀನು ಯಾವುದರಿಂದ ಅರಿಯುವೆ? (ಧಾರಾವಾಹಿಕ ಬುದ್ಧಿಯಲ್ಲಿಯ ವಿಜ್ಞಾನ-ಸಮೂಹಗಳು ಏಕಕಾಲದಲ್ಲಿ ಬಾರದಿರುವದರಿಂದ ಸಾಕ್ಷಿಯಾದ ಚೈತನ್ಯಾತ್ಮನನ್ನು ಒಪ್ಪಬೇಕು.)

ಇಚ್ಛಾದೇರುದಯ-ವಿನಾಶಸಂತತೀನಾ-
ಮಕ್ಷಾಣಾಮಸುಮನಸಾಂ ಧಿಯಶ್ಚ ತಸ್ಮಾತ್ ।
ದ್ರಷ್ಟಾನ್ಯೋಸ್ತ್ಯವಿಪರಿಲುಪ್ತದೃಕ್ಸತತ್ತ್ವೋ
ನಿಃಸಂಗೋ ವಿಹರತಿ ಯಃ ಪುರತ್ರಯೇಪಿ ॥೫೦॥

The witness of the continuous rise and fall of desires etc. and the witness of senses, breath, mind and intellect must be different from them. He is Ātman, the eternal seer, who moves with detachment through all the three states (of waking, dream and deep sleep.)

संशान्ते रविशशिवह्निवाक्प्रकाशे
निर्वाणे करणगणे निरस्तसङ्गः ।
स्वज्योतिः प्रकटितवासनामयार्थः
चिद्धातुः श्रुतिभिरुदीरितोऽन्तरात्मा ॥४३॥

When the light of the sun, moon, fire as well as speech sets, and when all the senses become quiet, the self-luminous detached Ātman, who is constituted of consciousness, manifests the objects (in a dream) according to the mental impressions (*vāsanā–s*). Such is the nature of the inner Ātman described by the scriptures.

बाह्यार्थान् करणगणेन तं च बुद्ध्या
बुद्धिं यः प्रथयति संततं स्वभासा ।
आत्मासावनधिगतः पराग्भिरेभिः
विज्ञेयस्तनुभवनान्तरप्रदीपः ॥४४॥

(In the waking condition) Ātman always illumines the external objects with the group of senses, the senses with the intellect and the intellect with his own light. The senses are extrovert and so they can not perceive the Ātman, who is to be known as the light in the abode of the body.

(ಜ್ಞಾನ)ಇಚ್ಛಾದಿಗಳು, ಇಂದ್ರಿಯ, ಪ್ರಾಣ, ಮನಸ್ಸು, ಮತ್ತು ಬುದ್ಧಿ ಇವುಗಳ ಉದಯಾಸ್ತಗಳು ತೋರಿ ಬರುವದರಿಂದ (ಇವೆಲ್ಲಕ್ಕೂ) ಸಾಕ್ಷಿಯಾದ, ಅವಿಚ್ಛಿನ್ನ ಜ್ಞಾನಶಕ್ತಿಯ ಸ್ವರೂಪನಾದ, ನಿರ್ಲೇಪನಾದ ಹಾಗು (ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿ ಈ)ಮೂರು ಅವಸ್ಥೆಗಳಲ್ಲಿ (ಸಾಕ್ಷಿಯಾಗಿ) ವಿಹರಿಸುವ ಆತ್ಮನು ಬೇರೆಯಾಗಿರುವನು.

ಸಂಶಾಂತೇ ರವಿಶಶಿವಹ್ನಿ-ವಾಕ್‌ಪ್ರಕಾಶೇ
ನಿರ್ವಾಣೇ ಕರಣಗಣೇ ನಿರಸ್ತಸಂಗಃ ।
ಸ್ವಜ್ಯೋತಿಃ ಪ್ರಕಟಿತವಾಸನಾಮಯಾರ್ಥಃ
ಚಿದ್ಧಾತುಃ ಶ್ರುತಿಭಿರುದೀರಿತೋಂತರಾತ್ಮಾ ॥೪೩॥

(ಸಾಮಾನ್ಯವಾಗಿ ಸೂರ್ಯ, ಚಂದ್ರ ಮತ್ತು ಅಗ್ನಿಗಳ ಪ್ರಕಾಶದಿಂದ ಪದಾರ್ಥ ದೃಷ್ಟೃತ್ವವು, ಶಬ್ದದಿಂದ ಶ್ರೋತೃತ್ವವು ಬರುವುದುಂಟು; ಆದರೆ) ಸೂರ್ಯ, ಚಂದ್ರ, ಅಗ್ನಿ ಮತ್ತು ವಾಗ್ರೂಪ ಪ್ರಕಾಶವು ಲುಪ್ತವಾಗಿರಲು ಮತ್ತು ಇಂದ್ರಿಯಗಳು ಶಾಂತವಾಗಿರಲು ಅಸಂಗನೂ, ಸ್ವಯಂಪ್ರಕಾಶನೂ, ಚೈತನ್ಯಘನನೂ ಆದ ಅಂತರಾತ್ಮನು (ಕನಸಿನಲ್ಲಿ) ಸಂಸ್ಕಾರರೂಪ ಪದಾರ್ಥಗಳನ್ನು ನಿರ್ಮಿಸುವನೆಂದು ಶ್ರುತಿಗಳಲ್ಲಿ ಹೇಳಲಾಗಿದೆ.

ಬಾಹ್ಯಾರ್ಥಾನ್ ಕರಣಗಣೇನ ತಂ ಚ ಬುದ್ಧ್ಯಾ
ಬುದ್ಧಿಂ ಯಃ ಪ್ರಥಯತಿ ಸಂತತಂ ಸ್ವಭಾಸಾ ।
ಆತ್ಮಾಸಾವನಧಿಗತಃ ಪರಾಗ್ಭಿರೇಭಿಃ
ವಿಜ್ಞೇಯಸ್ತನುಭವನಾಂತರ-ಪ್ರದೀಪಃ ॥೪೪॥

ಆತ್ಮನು ಹೊರಗಿನ ಪದಾರ್ಥಗಳನ್ನು ಇಂದ್ರಿಯಗಣದಿಂದ, ಅದನ್ನು ಬುದ್ಧಿಯಿಂದ ಮತ್ತು ಬುದ್ಧಿಯನ್ನು ತನ್ನ ಪ್ರಕಾಶದಿಂದ ಯಾವಾಗಲೂ ಮಿಂಚಿಸುವನು. ಹೊರಗಿನ ವಸ್ತುಗಳನ್ನು ಗ್ರಹಿಸುವ ಇಂದ್ರಿಯಗಳಿಂದ ತಿಳಿಯಲ್ಪಡದಿರುವ ಆತ್ಮನು ದೇಹಗೇಹದಲ್ಲಿ ದೀಪಸ್ವರೂಪನೆಂದು ತಿಳಿಯಬೇಕು.

प्रेयान्यः सदनधनात्मजप्रियादेः
यत्प्रेम्णा प्रियमिति मन्यते पराचः ।
पाराथ्यांवधिरवधीरितैतरार्थ्यो
विज्ञेयः स खलु सुखाब्धिरन्तरात्मा ॥४५॥

Ātman is indeed an ocean of bliss. Hence he is more dear to a person than his house, wealth, son and beloved. It is due to the love for this Ātman that a person considers the external objects as dear to him. All objects are ultimately for the sake of Ātman, but Ātman is not for the sake of any object. The inner Ātman should be realized as such.

शुद्धोऽसावहमिदमित्युपाधिधर्मान्
अध्यासादभिमनुते परस्परेण।
वृद्धयादीनिव सलिल-प्रभेदधर्मान्
ब्रध्नेऽम्बुप्रतिफलिते मृषैव मोहात् ॥४६॥

Just as (the image of) the Sun reflected in water is wrongly supposed to increase (or decrease) etc. according to the quality of the different waters, so does the pure Ātman falsely identify himself with the qualities of the limiting adjuncts (like body) due to mutual superimposition, and feels 'I am this'.

अज्ञोऽस्मीत्यनुभवनादनाद्यबोधः
चिन्निष्ठश्चितिविषयस्तमो यथेन्दुम् ।
प्रच्छाद्य स्फुरति चितं चितैव भूयो
विक्षिप्य भ्रमयति हन्त दुर्निरूपः ॥४७॥

ಪ್ರೇಯಾನ್ಯಃ ಸದನಧನಾತ್ಮಜಪ್ರಿಯಾದೇಃ
ಯತ್ಪ್ರೇಮ್ಣಾ ಪ್ರಿಯಮಿತಿ ಮನ್ಯತೇ ಪರಾಚಃ ।
ಪಾರಾರ್ಥ್ಯಾವಧಿರವಧೇರಿತ್ರೈತರಾರ್ಥ್ಯೋರ್
ವಿಜ್ಞೇಯಃ ಸ ಖಲು ಸುಖಾಬ್ಧಿರಂತರಾತ್ಮಾ ॥೪೫॥

ಮನೆ, ದುಡ್ಡು, ಹೆಂಡತಿ, ಮಕ್ಕಳು ಇವರೆಲ್ಲರಿಗಿಂತಲೂ ಯಾವ ಆತ್ಮನು ಪ್ರಿಯತರನಾಗಿದ್ದಾನೋ ಮತ್ತು ಹೊರಗಿನ ವಸ್ತುಗಳನ್ನು ಯಾವನ ಒಲವಿನಿಂದಲೇ ಪ್ರಿಯವೆಂದು ಮನುಷ್ಯನು ಬಗೆಯುವನೋ. ಅಂತಹ ಆತ್ಮನು ಬೇರೆ ವಸ್ತುಗಳ ಪ್ರಯೋಜನಕ್ಕೆ ಪರಮಾವಧಿಯಾದ್ದರಿಂದಲೂ, ಇತರ ಪ್ರಯೋಜನ-ಸಾಧನವಾಗದ್ದರಿಂದಲೂ, ನಿಶ್ಚಿತವಾಗಿ ಆನಂದಸಾಗರನೇ ಎಂದು ತಿಳಿಯಬೇಕು.

ಶುದ್ಧೋಽಸಾವಹಮಿದಮಿತ್ಯುಪಾಧಿಧರ್ಮಾನ್
ಅಧ್ಯಾಸಾದಭಿಮನುತೇ ಪರಸ್ಪರೇಣ ।
ವೃದ್ಧ್ಯಾದೀನಿವ ಸಲಿಲ-ಪ್ರಭೇದಧರ್ಮಾನ್
ಬ್ರಧ್ನೇಂಬು-ಪ್ರತಿಫಲಿತೇ ಮೃಷೈವ ಮೋಹಾತ್ ॥೪೬॥

ನೀರಿನಲ್ಲಿಯ ನ್ಯೂನಾಧಿಕ್ಯ (ಹ್ರಸ್ವದೀರ್ಘ ಮುಂತಾದ ಅವಾಂತರ) ಧರ್ಮಗಳನ್ನು ನೀರಿನಲ್ಲಿ ಪ್ರತಿಬಿಂಬಿತನಾದ ಸೂರ್ಯನಲ್ಲಿ ಅಜ್ಞಾನದಿಂದ ಕಲ್ಪಿಸುವಂತೆ ನಿರ್ಮಲನಾದ ಆತ್ಮನು ಅಜ್ಞಾನದಿಂದ 'ನಾನು' (ಆತ್ಮ) 'ಇದು' (ದೇಹ) ಎಂಬ ಉಪಾಧಿ-ಧರ್ಮಗಳನ್ನು ಪರಸ್ಪರವಾಗಿ ಆರೋಪಿಸಿ ಅಭಿಮಾನಪಡುತ್ತಾನೆ.

ಅಜ್ಞೋಽಸ್ಮೀತ್ಯನುಭವನಾದನಾದ್ಯಬೋಧಃ
ಚಿನ್ನಿಷ್ಠಶ್ಚಿತಿವಿಷಯಸ್ತಮೋ ಯಥೇಂದುಮ್ ।
ಪ್ರಚ್ಛಾದ್ಯ ಸ್ಫುರತಿ ಚಿತಂ ಚಿತೈವ ಭೂಯೋ
ವಿಕ್ಷಿಪ್ಯ ಭ್ರಮಯತಿ ಹಂತ ದುರ್ನಿರೂಪಃ ॥೪೭॥

A man feels 'I am ignorant'. This beginningless ignorance (*avidyā*) is based on *cit* and makes it its object. Just as Rāhu conceals the moon and thereby becomes manifest, so does (*avidyā*) conceal *cit* and through it manifests itself. It projects (the world) and deludes (the *cetana*). Alas, it is very difficult to explain !

चिद्भाने चितिरिव या भिदेव भेदे
निर्वाहे निजपरयोः स्वतः समर्था ।
संभाव्येतरघटनापटीयसी सा
संमोहं जनयति विभ्रमेण माया ॥४८॥

Just as consciousness is able to illuminate itself as well as other objects, and difference is able to differentiate itself and others — so is *māyā* able to establish itself and produce the superimposition by itself. It is expert in achieving even impossible tasks. So it creates infatuation (for the Jīvas) by deluding them.

अध्यासोऽनधिगतवस्तुनि ह्यतस्मि-
स्तद्बुद्धिः स्फुटमनुभूयते प्रतीचि ।
अज्ञोऽहं गलितबलो नरो दरिद्रो
जीवेयुर्मम तनयाः कथं बतेति ॥४९॥

Superimposition (*adhyāsa*) means considering a thing, which is not (properly) understood, to be what it is not. It is evidently experienced in the case of Ātman (in statements like) "I am an ignorant, weak and poor man. Alas, how would my sons live ?"

(ಈ ಅಧ್ಯಾಸಕ್ಕೆ ಕಾರಣವಾದ) ಅನಾದಿಯಾದ ಅವಿದ್ಯೆಯು (ಮೂಲಾವಿದ್ಯೆಯು) ಚೈತನ್ಯವನ್ನೇ ವಿಷಯ ಮತ್ತು ಆಶ್ರಯ ಮಾಡಿಕೊಂಡು 'ನಾನು ಅಜ್ಞನಾಗಿದ್ದೇನೆ' ಎಂಬ ಅನುಭವದಿಂದ ಸಿದ್ಧವಾಗುತ್ತದೆ. ಅದು ಚಂದ್ರನನ್ನು ಮುಚ್ಚುವ ಮತ್ತು ಅವನಿಂದಲೇ ತೋರುವ (ಗೋಚರವಾಗುವ) ರಾಹುವಿನಂತೆ ಚೈತನ್ಯವನ್ನೇ ಆಚ್ಛಾದಿಸಿ ಅದರಿಂದಲೇ ಪ್ರಕಾಶಿತವಾಗಿ (ಪ್ರಪಂಚವನ್ನು) ನಿರ್ಮಿಸಿ (ಚೈತನ್ಯವನ್ನು) ಭ್ರಾಂತಿಗೊಳಿಸುತ್ತದೆ. (ಇಷ್ಟಾದರೂ) ದುರ್ದೈವದಿಂದ ನಿರೂಪಿಸಲಶಕ್ಯವಾಗಿದೆ!

ಚಿದ್ಭಾನೇ ಚಿತಿರಿವ ಯಾ ಭಿದೇವ ಭೇದೇ
ನಿರ್ವಾಹೇ ನಿಜಪರಯೋಃ ಸ್ವತಃ ಸಮರ್ಥಾ ।
ಸಂಭಾವ್ಯೇತರಘಟನಾಪಟೀಯಸೀ ಸಾ
ಸಂಮೋಹಂ ಜನಯತಿ ವಿಭ್ರಮೇಣ ಮಾಯಾ ॥೪೮॥

ಚೈತನ್ಯವು ತಾನೇ(ಅಂದರೆ ಇನ್ನೊಂದು ಭಾಸಕಾಪೇಕ್ಷೆ ಇಲ್ಲದೆ)ತನ್ನನ್ನೂ ಮತ್ತು ಇತರ ವಸ್ತುಗಳನ್ನೂ (ದೀಪದಂತೆ) ಪ್ರಕಾಶಗೊಳಿಸುವ ಹಾಗೆ ಒಂದು ಭೇದವು ತಾನಾಗಿಯೇ (ಭೇದಕಾಂತರವಿಲ್ಲದೆ) ತನ್ನ ಮತ್ತು ಇತರ ಭೇದದ ವ್ಯವಹಾರ ಮಾಡಿಸಲು ಸಮರ್ಥವಾದುದು. ಇದರಂತೆಯೇ (ತನ್ನನ್ನು ಹಾಗು ತನ್ನ ಕಾರ್ಯವನ್ನು ನಿರ್ವಹಿಸುವದರಲ್ಲಿ) ಕಲ್ಪನಾತೀತ ಘಟನೆಯನ್ನು ಮಾಡಲು ಸಮರ್ಥವಾದ ಮಾಯೆಯು ತನ್ನ (ಆವರಣ ಮತ್ತು ವಿಕ್ಷೇಪ) ಶಕ್ತಿಯ ವಿಲಾಸದಿಂದ (ಜೀವತ್ವಾದಿ) ಮಹಾಭ್ರಾಂತಿಯನ್ನು ಹುಟ್ಟಿಸುತ್ತದೆ.

ಅಧ್ಯಾಸೋಽನಧಿಗತವಸ್ತುನಿ ಹ್ಯತಸ್ಮಿಂ-
ಸ್ತದ್ಬುದ್ಧಿಃ ಸ್ಫುಟಮನುಭೂಯತೇ ಪ್ರತೀಚಿ ।
ಅಜ್ಞೋಽಹಂ ಗಲಿತಬಲೋ ನರೋ ದರಿದ್ರೋ
ಜೀವೇಯುರ್ಮಮ ತನಯಾಃ ಕಥಂ ಬತೇತಿ ॥೪೯॥

ಸ್ವರೂಪ ತಿಳಿಯದ ವಸ್ತುವಿನಲ್ಲಿ ಅದಲ್ಲದ್ದರ ಅರಿವೇ ಅಧ್ಯಾಸವು. ಇದು ಅಂತರಾತ್ಮನಲ್ಲಿ ಸ್ಫುಟವಾಗಿ ಅನುಭವವಾಗುತ್ತದೆ. ಹೇಗೆಂದರೆ "ನಾನು ಅಜ್ಞನು, ಬಲಹೀನನು, ಪುರುಷನು, ದರಿದ್ರನು" (ಇತ್ಯಾದಿ ಅಹಂತಾಮೂಲಕ); "ಹಾ! ನನ್ನ ಮಕ್ಕಳು ಹೇಗೆ ತಾನೆ ಜೀವಿಸುವರು? " (ಇದು ಮಮತಾಮೂಲಕ. ಇದರಂತೆ ಅವಾಂತರ ಅಧ್ಯಾಸಗಳು ಅನೇಕವಾಗಿವೆ.)

शुद्धो हृष्टः स्थिरोऽहं बुध इति च तनावात्मधर्मान्युवाऽहम्
स्थूलो गौरोऽभिरूपः पटुरिति च निजे देहधर्मान् मिमीते ।
अन्योन्याध्यस्तसत्यानृत-वलित[1]-वपुर्लोहपिण्डप्रविष्टो
वह्निः कूटाभिघातानिव विविध-भवानर्थजातं[2] प्रपन्नः ॥५०॥

"I am pure, happy, firm and wise" – thus the qualities of Âtman are superimposed upon the body. "I am young, stout, fair, noble and skilled"– thus the qualities of the body are superimposed upon the Âtman. Just as the fire that has entered an iron-ball suffers the striking (on the anvil), so you who are a mixture of truth and falsehood superimposed upon each other, come across the various ills in life.

दृष्टः प्रत्यक्-पराचोर्विषयिविषययोर्भास्तमोवद्विरोधे-
ऽप्यध्यासोऽहं ममेति स्फुटमिति सुधियां नास्त्यसंभावनाऽत्र ।
स्वप्नादौ गत्यभावाद्गगनमलिनिमाध्यासदृष्टेर्बुधानां
पश्वादीनां च साम्याद्व्यवहृतिरखिलाध्यासमूलेति सिद्धम् ॥५१॥

The subject and the object, which are inward and outward respectively, are opposed to each other like light and darkness. Even then superimposition is clearly seen as in the case of 'I' and 'mine'. The wise have no doubt about this. As in the case of a dream etc. in which there is no movement (though it appears), superimposition of blueness on the sky is seen and as there is similarity in (the behaviour of) wise men and animals, it is proved that all worldly transactions are based on superimposition.

ಶುದ್ಧೋ ಹೃಷ್ಟಃ ಸ್ಥಿರೋಽಹಂ ಬುಧ ಇತಿ ಚ ತನಾವಾತ್ಮಧರ್ಮಾನ್ ಯುವಾಹಂ
ಸ್ಥೂಲೋ ಗೌರೋಽಭಿರೂಪಃ ಪಟುರಿತಿ ಚ ನಿಜೇ ದೇಹಧರ್ಮಾನ್ ವಿಮೀತೇ ।
ಅನ್ಯೋನ್ಯಾಧ್ಯಸ್ತ-ಸತ್ಯಾನೃತ-ವಲಿತವಪುರ್ಲೋಹ-ಪಿಂಡ-ಪ್ರವಿಷ್ಟೋ
ವಹ್ನಿಃ ಕೂಟಾಭಿಘಾತಾನಿವ ವಿವಿಧಭವಾನರ್ಥಜಾತಂ ಪ್ರಪನ್ನಃ　　　　॥೫೮॥

ನಾನು ಪಾವನನು, ಹೃಷ್ಟನು, ಅಚಲನು, ಅರಿತವನು ಎಂದು ಆತ್ಮಧರ್ಮಗಳನ್ನು ದೇಹದಲ್ಲಿ ತಿಳಿಯುತ್ತಾನೆ. (ಅಹಂಕಾರದಲ್ಲಿ ಆತ್ಮನ ತಾದಾತ್ಮ್ಯಾಧ್ಯಾಸದಿಂದ ಶುದ್ಧತ್ವ ಮುಂತಾದ ಆತ್ಮಧರ್ಮಗಳ ಅಧ್ಯಾಸ.) ನಾನು ತರುಣನು, ಸ್ಥೂಲನು, ಬಿಳಿಯ ವರ್ಣದವನು, ಸುಂದರನು, ಚತುರನು ಎಂದು ದೇಹಧರ್ಮಗಳನ್ನು ತನ್ನಲ್ಲಿ (ಸಂಸರ್ಗಾಧ್ಯಾಸದಿಂದ) ತಿಳಿಯುತ್ತಾನೆ. ಹೀಗೆ ಪರಸ್ಪರವಾಗಿ ಸತ್ಯ ಮತ್ತು ಅನೃತಗಳ ಅಧ್ಯಾಸದಿಂದ ಕೂಡಿದ ಜೀವನು ಕಾಸಿದ ಕಬ್ಬಿಣದಲ್ಲುರಿಯುವ ಅಗ್ನಿಯು ಸುತ್ತಿಗೆಯ ಹೊಡೆತಗಳನ್ನು ಹೊಂದುವಂತೆ ಅನೇಕ ಜನ್ಮಗಳಲ್ಲಿ ಕ್ಲೇಶರಾಶಿಯನ್ನು ಹೊಂದುತ್ತಾನೆ.

ದೃಷ್ಟಃ ಪ್ರತ್ಯಕ್ಪರಾಚೋರ್ವಿಷಯಿ-ವಿಷಯಯೋರ್ಭಾಸ್ತಮೋವದ್ವಿರೋಧೇ-
ಽಪ್ಯಧ್ಯಾಸೋಽಹಂ ಮಮೇತಿ ಸ್ಫುಟಮಿತಿ ಸುಧಿಯಾಂ ನಾಸ್ತ್ಯಸಂಭಾವನಾತ್ರ ।
ಸ್ವಪ್ನಾದೌ ಗತ್ಯಭಾವಾದ್ಗಗನಮಲಿನಿಮಾಧ್ಯಾಸ-ದೃಷ್ಟೇರ್ಬುಧಾನಾಂ
ಪಶ್ವಾದೀನಾಂ ಚ ಸಾಮ್ಯಾದ್ವ್ಯವಹೃತಿರಖಿಲಾಧ್ಯಾಸಮೂಲೇತಿ ಸಿದ್ಧಂ　　॥೫೯॥

ಒಳಗಿರುವ ಆತ್ಮನು ಹಾಗು ಹೊರಗಿರತಕ್ಕ ಪದಾರ್ಥಗಳು ಹೀಗೆ ವಿಷಯೀ (ಆತ್ಮ) ಮತ್ತು ವಿಷಯ (ವಸ್ತು) ಎನಿಸುವವು. ಈ ಎರಡರ ನಡುವೆ ಕತ್ತಲೆ ಬೆಳಕುಗಳಷ್ಟು ವಿರೋಧ ಕಂಡುಬಂದರೂ ಕೂಡ 'ನಾನು' 'ನನ್ನದು' ಎಂಬ (ತಾದಾತ್ಮ್ಯ ಮತ್ತು ಸಂಸರ್ಗ) ಅಧ್ಯಾಸ ಸ್ಪಷ್ಟವಾಗಿ ತೋರುತ್ತದೆ. ಪಂಡಿತರಿಗೆ ಈ ವಿಷಯದಲ್ಲಿ ಯಾವ ಸಂದೇಹವೂ ಇರುವದಿಲ್ಲ. ಹೇಗೆಂದರೆ ಸ್ವಪ್ನ ಮುಂತಾದವುಗಳಲ್ಲಿ ಸಂಚಾರಾದಿ ಕ್ರಿಯೆಗಳಿಲ್ಲದಿದ್ದರೂ, (ನಿರಾಕಾರವಾದ) ಆಕಾಶದಲ್ಲಿ ನೀಲಿಬಣ್ಣದ ಭ್ರಮವು ಕಂಡುಬರುವದರಿಂದಲೂ, ಅರಿತವರಿಗೂ ಪಶುಗಳಿಗೂ (ವ್ಯವಹಾರ ಸಮಯದಲ್ಲಿ) ಸಾಮ್ಯವಿರುವದರಿಂದಲೂ ಎಲ್ಲ ವ್ಯವಹಾರಗಳು ಅಧ್ಯಾಸಮೂಲಕವಾದವುಗಳೇ ಎಂದು ಸಿದ್ಧವಾಗುವದು. (ಆದ್ದರಿಂದ ರೂಪವುಳ್ಳ ವಸ್ತುವಿನಲ್ಲಿ ಮತ್ತು ತನಗೆ ಸದೃಶವಾದ ವಸ್ತುವಿನಲ್ಲಿಯೇ ಅಧ್ಯಾಸವಾಗುವದೆಂಬ ಸಾಮಾನ್ಯ ನಿಯಮದಿಂದ ರೂಪರಹಿತ ಹಾಗು ಅಸದೃಶವಾದ ಆತ್ಮ-ಅನಾತ್ಮರಲ್ಲಿ ಅಧ್ಯಾಸವಾಗಲಾರದೆಂಬ ಆಕ್ಷೇಪವು ಸರಿಹೋಗುವದಿಲ್ಲ. ಅರ್ಥಾತ್ ಆತ್ಮ-ಅನಾತ್ಮರ ಅಧ್ಯಾಸವು ಸಿದ್ಧವಾಗುವದು.)

---

1. क. ग. बलित.
2. घ. नवानर्थ.

धर्माद् देवत्वमेति व्रजति पुनरधः पातकैः स्थावरादीन्
देहान् प्राप्य प्रणश्यन् क्वचिदपि लभते मानुषत्वं च ताभ्याम् ।
कर्मज्ञानोभयेन व्रजति विधिपदं मुच्यते कोऽपि तस्मिन्
रागी प्रत्येति भूयो जनिमिति विषमं बम्भ्रमीतीह लोकः ॥५२॥

On account of religious merit, a man attains godhood. Due to sins he goes to hell or becomes an inanimate object and thus perishes. It is hardly some time that one gets human life on account of them. Due to *karma* and *upāsana* one attains the abode of god Brahmā and one (who is detached) there attains release. One who has attachment gets again a birth. Thus the beings move variously in this life.

दुःखं स्वर्गात् प्रपाते बहुविध-नरके गर्भवासेऽतिदुःखं[1]
निःस्वातन्त्र्याशनायाग्रहगदरुदितैः शैशवे दुःखमेव ।
तारुण्येऽमर्षलोभव्यसन-परिभवोद्वेगदारिद्र्यदुःखं
वार्द्धक्ये शोकमोहेन्द्रियविलयगदैर्दुःखमन्तेऽतिदुःखम् ॥५३॥

When a human being suffers a downfall from the heaven, it is painful; in the various hells and in the womb there is great pain. Due to dependence, hunger, possession by spirits, diseases and weeping there is only pain in childhood. In youth there is suffering due to anger, greed, calamity, insult, disgust and poverty. In old age the grief is due to sorrow, infatuation, debility of senses and due to diseases. In death there is great pain.

ಧರ್ಮಾದ್ ದೇವತ್ವಮೇತಿ ವ್ರಜತಿ ಪುನರಧಃ ಪಾತಕೈಃ ಸ್ಥಾವರಾದೀನ್
ದೇಹಾನ್ ಪ್ರಾಪ್ಯ ಪ್ರಣಶ್ಯನ್ ಕ್ವಚಿದಪಿ ಲಭತೇ ಮಾನುಷತ್ವಂ ಚ ತಾಭ್ಯಾಂ ।
ಕರ್ಮಜ್ಞಾನೋಭಯೇನ ವ್ರಜತಿ ವಿಧಿಪದಂ ಮುಚ್ಯತೇ ಕೋಽಪಿ ತಸ್ಮಿನ್
ರಾಗೀ ಪ್ರತ್ಯೇತಿ ಭೂಯೋ ಜನಿಮಿತಿ ವಿಷಮಂ ಬಂಭ್ರಮೀತೀಹ ಲೋಕಃ ॥೫೨॥

(ಮಾನವನು) ಪುಣ್ಯದಿಂದ ದೇವತ್ವವನ್ನೂ ಪಾಪಗಳಿಂದ ಮತ್ತೆ ಕೆಳಗಿನ ಲೋಕಗಳನ್ನೂ ಹೊಂದುತ್ತಾನೆ. (ವೃಕ್ಷ, ಪರ್ವತ, ಮುಂತಾದ) ಸ್ಥಾವರಾದಿ ದೇಹಗಳನ್ನು (ಪಾಪದ ಮೂಲಕವೇ) ಹೊಂದಿ (ದುಃಖವನ್ನು ಅನುಭವಿಸಿ) ನಾಶಹೊಂದುವನು. ಕೆಲವು ಸಲ (ಸಮವಾದ) ಪುಣ್ಯಪಾಪಗಳಿಂದ ಮನುಷ್ಯಜನ್ಮವನ್ನು ಹೊಂದುತ್ತಾನೆ. ಅಲ್ಲಿಯೂ ಕರ್ಮ ಮತ್ತು ಉಪಾಸನೆಗಳನ್ನು ಮಾಡಿ (ವಿರಕ್ತಿಯಿಂದ) ಬ್ರಹ್ಮಪದವನ್ನು ಮುಟ್ಟುತ್ತಾನೆ. (ಹಾಗು ಜನನ ಮರಣಗಳ ಪ್ರವಾಹದಿಂದ) ವಿರಳವಾಗಿ ಯಾವನೋ ಒಬ್ಬ (ಸಾಧಕ)ನು ಮುಕ್ತನಾಗುತ್ತಾನೆ. ಸಂಸಾರದಲ್ಲಿಯೇ ವಾಸನೆಯುಳ್ಳ ಮತ್ತೊಬ್ಬನು ಪುನರ್ಜನ್ಮವನ್ನು ಹೊಂದುತ್ತಾನೆ. ಹೀಗೆ ಈ ಜಗತ್ತಿನಲ್ಲಿ ಪ್ರಾಣಿಗಳು ವಿವಿಧ ಪ್ರಕಾರಗಳಿಂದ ಸಂಸಾರಚಕ್ರದಲ್ಲಿ ತೊಳಲಾಡುತ್ತಿರುತ್ತವೆ.

ದುಃಖಂ ಸ್ವರ್ಗಾತ್ ಪ್ರಪಾತೇ ಬಹುವಿಧ-ನರಕೇ ಗರ್ಭವಾಸೇಽತಿದುಃಖಂ
ನಿಃಸ್ವಾತಂತ್ರ್ಯಾಶನಾಯಾ-ಗ್ರಹಗದರುದಿತೈಃ ಶೈಶವೇ ದುಃಖಮೇವ ।
ತಾರುಣ್ಯೇಽ ಮರ್ಷ-ಲೋಭ-ವ್ಯಸನ-ಪರಿಭವೋದ್ವೇಗ-ದಾರಿದ್ರ್ಯದುಃಖಂ
ವಾರ್ಧಕ್ಯೇ ಶೋಕಮೋಹೇಂದ್ರಿಯವಿಲಯಗದೈರ್ದುಃಖಮಂತೇಽತಿದುಃಖಂ ॥೫೩॥

(ಪುಣ್ಯವನ್ನು ಅನುಭವಿಸಿದ ನಂತರ) ಸ್ವರ್ಗದಿಂದ ಕೆಳಗಿಳಿದಮೇಲೆ ಹಾಗು ಅನೇಕ ತರಹದ ನರಕಗಳಲ್ಲಿ ಬಿದ್ದಾಗ ದುಃಖವಾಗುವದು. ಆಮೇಲೆ ಗರ್ಭವಾಸ ಮಾಡಿದಾಗ ಅತಿ ಹೆಚ್ಚಿನ ದುಃಖವಿದ್ದು ಬಾಲ್ಯದಲ್ಲಿ ಪರತಂತ್ರತೆ, ಹಸಿವು, ದುಷ್ಟಗ್ರಹಗಳು, ರೋಗ ರೋದನಗಳಿಂದ ದುಃಖವೇ ತುಂಬಿರುವದು. ತಾರುಣ್ಯದಲ್ಲಿ ಕೋಪ, ಆಸೆ, ವ್ಯಸನ, ಅವಮಾನ, ವ್ಯಗ್ರತೆ, ದಾರಿದ್ರ್ಯಗಳ ದುಃಖವಿರುವದು. ಮುಪ್ಪಿನಲ್ಲಿ (ಇಷ್ಟಜನ ವಿಯೋಗದಿಂದ) ಶೋಕವೂ ಅವಿವೇಕವೂ ಇಂದ್ರಿಯ-ವೈಕಲ್ಯವೂ ರೋಗಗಳೂ ದುಃಖಕಾರಣಗಳಾಗುವವು. ಮರಣದಲ್ಲಿಯಂತೂ ಅತೀ ದುಃಖವಾಗುವದು. (ಹೀಗೆ ಮೊದಲಿನಿಂದ ಕೊನೆಯವರೆಗೂ ಸಂಸಾರದಲ್ಲಿ ದುಃಖವೇ ದುಃಖ !)

---

1. क. दुःखे

इत्थं यः कर्मबद्धो भ्रमति परवशः प्राणभृज्जन्मसंघैः
दुःखस्यान्तं न वेत्ति स्मरति न च जनिव्रातमज्ञानयोगात् ।
तं सर्वानर्थमूलप्रशमनविधिना स्वात्मराज्येऽभिषेक्तुं
तात्पर्येण प्रवृत्ताः श्रुतिशिखरगिरः सूत्रभाष्यादयश्च ॥५४॥

Thus a person bound by *karma* moves helplessly through many lives. He never attains the end of misery, nor does he remember his past lives due to ignorance. The Upaniṣads, the Brahma-sūtras and the commentaries thereon etc. are meant to remove by their purport the root-cause of all evils and to coronate him as the ruler of the kingdom of Ātman.

इति श्रीपरमहंसपरिव्राजकाचार्य-श्रीमद्रामचन्द्रसरस्वती-पूज्यपाद-शिष्येण गङ्गाधरसरस्वत्याख्यभिक्षुणा विरचितायां स्वाराज्यसिद्धौ 'अध्यारोप-प्रकरणं' संपूर्णम् ॥

Here ends
the First Chapter
called 'Adhyāropa-prakaraṇa'
in **Svārājya-siddhi,** composed by
the monk Gaṅgādhara-Sarasvatī, **the pupil of**
the great revered ascetic Śri Rāmacandra-Sarasvatī.

ಇತ್ಥಂ ಯಃ ಕರ್ಮಬದ್ಧೋ ಭ್ರಮತಿ ಪರವಶಃ ಪ್ರಾಣಭೃಜ್ಜನ್ಮಸಂಘೈಃ
ದುಃಖಸ್ಯಾಂತಂ ನ ವೇತ್ತಿ ಸ್ಮರತಿ ನ ಚ ಜನಿವ್ರಾತಮಜ್ಞಾನ-ಯೋಗಾತ್ ।
ತಂ ಸರ್ವಾನರ್ಥಮೂಲಪ್ರಶಮನವಿಧಿನಾ ಸ್ವಾತ್ಮರಾಜ್ಯೇಽಭಿಷೇಕ್ತುಂ
ತಾತ್ಪರ್ಯೇಣ ಪ್ರವೃತ್ತಾಃ ಶ್ರುತಿಶಿಖರಗಿರಃ ಸೂತ್ರಭಾಷ್ಯಾದಯಶ್ಚ ॥೫೪॥

ಈ ರೀತಿಯಾಗಿ ಜೀವನು ಕರ್ಮಬಂಧನದಿಂದ ಪರಾಧೀನನಾಗಿ ಅನೇಕ ಜನ್ಮಗಳನ್ನು ಹೊಂದುತ್ತಾನೆ. ಅವನು ದುಃಖದ ಕೊನೆಯನ್ನು ತಿಳಿಯುವುದಿಲ್ಲ ಮತ್ತು ಅಜ್ಞಾನದಿಂದ ಹಿಂದಿನ ಜನ್ಮಗಳನ್ನು ಕೂಡ ಸ್ಮರಿಸುವದಿಲ್ಲ. ಎಲ್ಲ ಅನರ್ಥಗಳಿಗೆ ಮೂಲಕಾರಣವಾದ ಅವಿದ್ಯೆಯನ್ನು ಪರಿಹರಿಸುವ ಮೂಲಕ ಅಂತಹ (ಮನುಷ್ಯ) ಪ್ರಾಣಿಯನ್ನು ಆತ್ಮರಾಜ್ಯದಲ್ಲಿ ಸ್ಥಿರೀಕರಿಸುವದಕ್ಕೋಸ್ಕರವೇ ತಾತ್ಪರ್ಯದಿಂದ ವೇದಾಂತವಾಕ್ಯಗಳೂ, ಬ್ರಹ್ಮಸೂತ್ರ, ಶಾಂಕರ-ಭಾಷ್ಯಾದಿಗಳೂ ಪ್ರವೃತ್ತವಾಗಿವೆ.

ಇತಿ ಶ್ರೀಪರಮಹಂಸ-ಪರಿವ್ರಾಜಕಾಚಾರ್ಯ-ಶ್ರೀಮದ್-ರಾಮಚಂದ್ರಸರಸ್ವತೀ-ಪೂಜ್ಯಪಾದಶಿಷ್ಯೇಣ ಗಂಗಾಧರದಸರಸ್ವತ್ಯಾಖ್ಯಭಿಕ್ಷುಣಾ ವಿರಚಿತಾಯಾಂ ಸ್ವಾರಾಜ್ಯಸಿದ್ಧೌ ಅಧ್ಯಾರೋಪಪ್ರಕರಣಂ ಸಂಪೂರ್ಣಂ ॥

ಹೀಗೆ
ಶ್ರೀ ಪರಮಹಂಸ ಪರಿವ್ರಾಜಕಾಚಾರ್ಯ
ಶ್ರೀಮದ್ ರಾಮಚಂದ್ರಸರಸ್ವತೀ ಪೂಜ್ಯಪಾದರ ಶಿಷ್ಯನಾದ
ಗಂಗಾಧರಸರಸ್ವತೀಯೆಂಬ ಪರಿವ್ರಾಜಕನಿಂದ ರಚಿತವಾದ ಸ್ವಾರಾಜ್ಯಸಿದ್ಧಿಯಲ್ಲಿ
ಅಧ್ಯಾರೋಪವೆಂಬ ಪ್ರಕರಣವು ಮುಗಿದುದು.

२. अपवाद-प्रकरणम्

हेतुत्वं लक्षणं यद्गदितमिदमुपादानकर्तृत्वरूपं
ताटस्थ्यादास्पदं स्वं गमयति परमं ब्रह्म शाखेव चन्द्रम् ।
एवं लक्ष्यं च सच्चित्सुखवपुरखिलद्वैतहीनं सुसूक्ष्मम्
सत्यज्ञानादिमन्त्रोदितमखिलमनोवागतीतं गुहास्थम् ॥१॥

The characteristic (of Brahman) which was stated (in I. 15 above) that Brahman is the material cause and agent of creation, serves as the means to reach its own abode, namely the highest Brahman, by *taṭastha lakṣaṇa* just as the branch of a tree helps to determine the location of the moon. In an exactly similar manner one has to know the Brahman which is constituted of *sat*, *cit* and *sukha*, free from all duality, extremely subtle, referred to by the Upaniṣadic passages like "*satyaṁ jñānam*". which is totally beyond mind as well as speech and which resides in the cave (heart).

೨. ಅಪವಾದ ಪ್ರಕರಣ

ಹೇತುತ್ವಂ ಲಕ್ಷಣಂ ಯದ್ಗದಿತಮಿದಮುಪಾದಾನಕರ್ತೃತ್ವರೂಪಂ
ತಾಟಸ್ಥ್ಯಾದಾಸ್ಪದಂ ಸ್ವಂ ಗಮಯತಿ ಪರಮಂ ಬ್ರಹ್ಮ ಶಾಖೇವ ಚಂದ್ರಂ ।
ಏವಂ ಲಕ್ಷ್ಯಂ ಚ ಸಚ್ಚಿತ್ಸುಖವಪುರಖಿಲದ್ವೈತಹೀನಂ ಸುಸೂಕ್ಷ್ಮಂ
ಸತ್ಯ-ಜ್ಞಾನಾದಿ-ಮಂತ್ರೋದಿತಮಖಿಲಮನೋವಾಗತೀತಂ ಗುಹಾಸ್ಥಂ ॥೧॥

ಹಿಂದಿನ ಪ್ರಕರಣದಲ್ಲಿ (೧.೧೫) ಹೇಳಿದ 'ಉಪಾದಾನ ಕರ್ತೃತ್ವ' ಎಂಬುದು (ಬ್ರಹ್ಮದ) ಲಕ್ಷಣ. ಈ ಲಕ್ಷಣವು ನೇರವಾದ ಬ್ರಹ್ಮಸಂಬಂಧವಿಲ್ಲದಿದ್ದರೂ ತಟಸ್ಥವಾಗಿಯೇ (ಅಂದರೆ ಲಕ್ಷ್ಯವಾದ ಪರಬ್ರಹ್ಮದ ಸ್ವರೂಪದಲ್ಲಿ ಸೇರದೆಯೇ) ಮರದ ಕೊಂಬೆಯು ಚಂದ್ರನನ್ನು ಗುರುತಿಸಿ ಕೊಡುವಂತೆ ಬ್ರಹ್ಮನನ್ನು ತಿಳಿಸಿಕೊಡುವದು. (ಇದೇ ಪರಬ್ರಹ್ಮದ ತಟಸ್ಥಲಕ್ಷಣವು ಕಲ್ಪಿತಸಂಬಂಧವುಳ್ಳದ್ದು.) ಇದರಂತೆಯೇ ಪರಬ್ರಹ್ಮವೇ ಲಕ್ಷ್ಯ. ಅದು ಸಚ್ಚಿದಾನಂದ ಸ್ವರೂಪ, ಯಾವ ದ್ವೈತ ಸಂಬಂಧವೂ ಇಲ್ಲದ್ದು (ಅದ್ವಿತೀಯ), ಅತ್ಯಂತ ಸೂಕ್ಷ್ಮ (ಇದಕ್ಕಿಂತ ಸೂಕ್ಷ್ಮ ಬೇರೊಂದಿಲ್ಲ), "ಸತ್ಯಂ ಜ್ಞಾನಮನಂತಂ ಬ್ರಹ್ಮ" ಇತ್ಯಾದಿ ಉಪನಿಷತ್ ಮಂತ್ರಗಳಿಂದ ಸಾರಿ ಹೇಳಲ್ಪಟ್ಟು, ಮನಸ್ಸಿನ ಮೇರೆಯನ್ನು ಮೀರಿದುದು, ಮಾತಿಗೆ ನಿಲುಕದಿದ್ದುದು ಮತ್ತು (ಅನ್ನಮಯಾದಿ ಪಂಚಕೋಶಗಳಿಂದ ಆವೃತವಾದ) ಹೃದಯ ಗುಹೆಯಲ್ಲಿ ಇರುವದು (ಇದೇ ಆ ಪರಬ್ರಹ್ಮದ ಸ್ವರೂಪ).

कूटस्थं ब्रह्म विश्वं जनयति न विना मायया सा च मिथ्या
तस्मिन् शब्दप्रसिद्धेः परसमधिगमात् तन्निवृत्तिश्रुतेश्च ।
सैवाविद्या मृषार्था अपि समधिगताः कार्यदक्षाः प्रपञ्चः
तस्मान् मायूरपिच्छच्छविरिव गहनो ब्रह्मसंविद्विवर्तः ॥२॥

The immutable Brahman creates the world, but not without the help of Māyā and that Māyā is unreal. This is well-known through scriptures, and the *śruti* lays down that due to the realization of the highest, Māyā withdraws (itself). The same is *avidyā*. The objects, though unreal, are known to be potent in bringing about effects. Therefore the exact nature of the worldly existence, which is verily an illusory appearance of the consciousness (*saṁvid*) of the Brahman, is difficult to be grasped like the colourful sheen of a peacock's plumes.

यस्माद्विश्वं सदुत्थं सदुपभृतमथो लीयते तत्र तस्मात्
सन्मात्रं नान्यदस्मान्मृद इव घटिकोदञ्चनादिर्विकारः ।
सद्भेदे स्यादसत्त्वं सदथ यदि तदा नास्ति भेदः कथंचित्
भेदाभेदौ विरुद्धौ न हि भवति भिदाऽभिन्नवस्तुप्रतिष्ठा ॥३॥

As the world is created from the Existence (*sat*), is nourished by it and ultimately merges in it; it is *sat* only and not different from it; just as the modifications like pitcher and jar are not different from the clay. If the world is different from *sat*, it would be non-existent (*asat*). If it is *sat*, then there is no difference at all. Difference and non-difference are mutually contradictory. Therefore there can not be any difference relating to an entity which is *abhinna* (not different from any object).

ಕೂಟಸ್ಥಂ ಬ್ರಹ್ಮ ವಿಶ್ವಂ ಜನಯತಿ ನ ವಿನಾ ಮಾಯಯಾ ಸಾ ಚ ಮಿಥ್ಯಾ
ತಸ್ಮಿನ್ ಶಬ್ದಪ್ರಸಿದ್ಧೇಃ ಪರಸಮಧಿಗಮಾತ್ ತನ್ನಿವೃತ್ತಿಶ್ರುತೇಶ್ಚ ।
ಸೈವಾವಿದ್ಯಾ ಮೃಷಾರ್ಥಾ ಅಪಿ ಸಮಧಿಗತಾಃ ಕಾರ್ಯದಕ್ಷಾಃ ಪ್ರಪಂಚಃ
ತಸ್ಮಾನ್ ಮಾಯೂರಪಿಚ್ಛಚ್ಛವಿರಿವ ಗಹನೋ ಬ್ರಹ್ಮಸಂವಿದ್-ವಿವರ್ತಃ ॥೩॥

ನಿರ್ವಿಕಾರ ಬ್ರಹ್ಮವು ಮಾಯೆಯ ಮೂಲಕವಲ್ಲದೇ ಜಗತ್ತನ್ನು ನಿರ್ಮಿಸಲಾರದು. ಆ ಮಾಯೆಯಾದರೋ ಮಿಥ್ಯೆಯಾದುದು. ಏಕೆಂದರೆ ಮಾಯೆ ಮಿಥ್ಯೆ; ಶ್ರುತಿಗಳಲ್ಲಿ ಹಾಗೆಂದಿರುವದರಿಂದ. ಇದೂ ಅಲ್ಲದೆ, ಮಾಯೆಯು ಬ್ರಹ್ಮಜ್ಞಾನದಿಂದ ನಾಶಹೊಂದುವದೆಂದು (ಬಾಧಿತವಾಗುವದೆಂದು ವೇದವೊದಲಾದವುಗಳಲ್ಲಿ) ಹೇಳಿದುದರಿಂದ ಅದು ಅವಿದ್ಯಾ(ಅಜ್ಞಾನ)ರೂಪವೂ ಹೌದು. ಮಿಥ್ಯಾ ವಸ್ತುಗಳೂ ಕೂಡ ವಿಚಿತ್ರಕಾರ್ಯಗಳನ್ನು ಮಾಡಲು ಸಮರ್ಥವಾಗುವವೆಂಬುದು (ಪುರಾಣಾದಿಗಳಿಂದ) ತಿಳಿಯುತ್ತದೆ. ಆದ್ದರಿಂದ (ಮಾಯಿಕವಾದ) ಈ ಪ್ರಪಂಚವು ಚಿದ್ರೂಪವಾದ ಪರಬ್ರಹ್ಮದ ಬಗೆಬಗೆಯ ರೂಪಾಂತರ(ವಿವರ್ತ)ವಾಗಿ ತೋರುವದು. ನವಿಲುಗರಿಯ ವರ್ಣಮಯ ಕಾಂತಿಯಂತೆ ಪ್ರಪಂಚದ ರೂಪವು ಇಂತಹದೇ ಎಂದು ತಿಳಿಯಲಸಾಧ್ಯ.

ಯಸ್ಮಾದ್ವಿಶ್ವಂ ಸದುತ್ಥಂ ಸದುಪಭೃತಮಥೋ ಲೀಯತೇ ತತ್ರ ತಸ್ಮಾತ್
ಸನ್ಮಾತ್ರಂ ನಾನ್ಯದಸ್ಮಾನ್ಮೃದ ಇವ ಘಟಿಕೋದಂಚನಾದಿರ್ವಿಕಾರಃ ।
ಸದ್ಭೇದೇ ಸ್ಯಾದಸತ್ತ್ವಂ ಸದಥ ಯದಿ ತದಾ ನಾಸ್ತಿ ಭೇದಃ ಕಥಂಚಿತ್
ಭೇದಾಭೇದೌ ವಿರುದ್ಧೌ ನ ಹಿ ಭವತಿ ಭಿದಾಽಭಿನ್ನವಸ್ತುಪ್ರತಿಷ್ಠಾ ॥೪॥

ಸದ್ರೂಪವಾದ ಬ್ರಹ್ಮದಿಂದ ಪ್ರಕಟವಾದ ಈ ಜಗತ್ತು ಅದರಿಂದಲೇ ರಕ್ಷಿತವಾಗಿ ಕೊನೆಗೆ ಅದರಲ್ಲಿಯೇ ಲಯ ಹೊಂದುವದು. ಆದ್ದರಿಂದ ಪ್ರಪಂಚವೆಲ್ಲ ಸದ್ರೂಪವೇ ಸರಿ. ಗಡಿಗೆ, ಮಡಕೆ ಮೊದಲಾದವುಗಳು ಮಣ್ಣಿನ ವಿಕಾರಗಳು. (ಅವು ಆಕಾರದಲ್ಲಿ ಬೇರೆ ಬೇರೆಯಾಗಿ ತೋರುತ್ತಿದ್ದರೂ) ಮಣ್ಣಿನಿಂದ ಬೇರೆಯಲ್ಲ. ಜಗತ್ತು ಸದ್ರೂಪವಾದ ಬ್ರಹ್ಮದಿಂದ ಭಿನ್ನವಿರುವದಾದರೆ ಅದು 'ಅಸತ್' ಆದೀತು. ಅದು 'ಸತ್' ಆಗಿರುವದಾದರೆ ಬ್ರಹ್ಮದಿಂದ ಭಿನ್ನವೆನ್ನಲು ಬಾರದು. ಪರಸ್ಪರ ವಿರುದ್ಧವಾದ, ಭೇದಾಭೇದಗಳೆರಡೂ ಒಂದೆಡೆ ಇರಲಾರವು. ಇದೂ ಅಲ್ಲದೇ, ವಸ್ತುವು ಅಭಿನ್ನವಾದಲ್ಲಿ (ಒಂದೇ ಒಂದಾದಲ್ಲಿ) ಭೇದವೇ ಸಿದ್ಧಿಸಲಾರದು. (ಭೇದವು ಪ್ರತಿಯೋಗಿಸಾಪೇಕ್ಷ. ಬ್ರಹ್ಮ–ಪ್ರತಿಯೋಗಿಯಾದ ಬೇರೊಂದು ವಸ್ತುವೇ ಇಲ್ಲ ಎಂದರ್ಥ.)

भेदोऽभिन्ने प्रतीतो भवति खलु मृषा चन्द्रनानात्मतावत्
भिन्नेऽभेदश्च तद्वत् प्रभवति हि ततो न स्वतो वस्तुभेदः ।
धर्मैर्भेदः प्रसिध्येद्यदि भवति भिदा धर्मिणो हन्त तेषां
भेदेऽभेदेऽपि लोके न खलु परिचिता धर्मधर्मि-व्यवस्था ॥४॥

The Difference, which appears (in an object) where there is no (real) difference is unreal, as in the case of (the appearance of) a number of moons (due to some defect in the eyes. In fact, the moon is only one.) In difference, similarly, non-difference is unreal (as in the case of many trees appearing like one tree from a distance). Thus indeed the difference of an object does not arise by itself (as that difference depends upon a comparison with some other object). Difference may be established on the strength of properties if they are different from the entity, (but, alas, it is not so). The relation of properties to objects is not indeed determined in this world, whether there be difference or non-difference.

यच्चाभिन्नं स्वतस्तन्न भवति परतो भेदभाङ् नान्यभेदात्[1]
अन्यो भिद्येत, धर्माः कथमथ विविधा धर्म्यभेदादभिन्नाः ।
भेदो भिन्नाश्रयश्चेदधिकरणभिदा, तेन चेदात्मनिष्ठा
नो चेदन्योन्यनिष्ठा स्थितिहतिरथवा तद्भिदा दुर्निरूपा ॥५॥

ಭೇದೋಽಭಿನ್ನೇ ಪ್ರತೀತೋ ಭವತಿ ಖಲು ಮೃಷಾ ಚಂದ್ರನಾನಾತ್ಮತಾವತ್
ಭಿನ್ನೇಽಭೇದಶ್ಚ ತದ್ವತ್ ಪ್ರಭವತಿ ಹಿ ತತೋ ನ ಸ್ವತೋ ವಸ್ತುಭೇದಃ ।
ಧರ್ಮೈರ್ಭೇದಃ ಪ್ರಸಿಧ್ಯೇದ್ಯದಿ ಭವತಿ ಭಿದಾ ಧರ್ಮಿಣೋ ಹಂತ ತೇಷಾಂ
ಭೇದೇಽಭೇದೇಽಪಿ ಲೋಕೇ ನ ಖಲು ಪರಿಚಿತಾ ಧರ್ಮಧರ್ಮಿವ್ಯವಸ್ಥಾ ॥೪॥

ಭೇದವಿಲ್ಲದ (ಅಭಿನ್ನ) ವಸ್ತುವಿನಲ್ಲಿ ಭೇದವು ತೋರಿದರೆ ಅದು ಒಂದೇ ಆದ ಚಂದ್ರನಲ್ಲಿ ತೋರುವ ನಾನಾತ್ವದಂತೆ ಮಿಥ್ಯೆ. ಅದರಂತೆ ಭಿನ್ನವಸ್ತುವಿನಲ್ಲಿ ತೋರುವ ಅಭೇದವೂ ಕೂಡ (ಬೇರೆ ಬೇರೆಯಾದ ಗಿಡಗಳಲ್ಲಿ ದೂರದಿಂದ ತೋರುವ ಅಭೇದದಂತೆ) ಮಿಥ್ಯೆ. (ಭೇದಾಭೇದಗಳು ಸಾಪೇಕ್ಷವಾಗಿರುವದರಿಂದ) ವಸ್ತುಗಳಲ್ಲಿ ಸ್ವರೂಪತಃ ಭೇದವಾಗಲಿ ಅಭೇದವಾಗಲಿ ಇರಲಾರದು. (ಕಟಕತ್ವ–ಕುಂಡಲತ್ವ) ಧರ್ಮಗಳ ಮೂಲಕ (ಮೂಲ ಧರ್ಮಿ) ಕನಕವು ಭಿನ್ನವೆಂಬುದು ಸಿದ್ಧವಾಗಬಹುದಿತ್ತು. ಹಾಗಾದರೆ (ಕಟಕತ್ವ–ಕುಂಡಲತ್ವ) ಧರ್ಮಗಳ ಧರ್ಮಿಗಳಾದ (ಆಶ್ರಯವಾದ) ಕಟಕ–ಕುಂಡಲಾದಿಗಳು ಕನಕದಿಂದ ಭಿನ್ನವೆಂದು ಸಿದ್ಧವಾಗುತ್ತಿತ್ತು. ಆದರೆ ಆ ಭೇದವು ಸಿದ್ಧಿಸುವದಿಲ್ಲ. (ಗವಾಶ್ವಗಳಂತೆ) ಭೇದವಿರುವಲ್ಲಿಯೂ (ಚಂದ್ರನಂತೆ) ಭೇದವಿಲ್ಲದಿರುವಲ್ಲಿಯೂ ಇದು 'ಧರ್ಮ', ಇದು 'ಧರ್ಮಿ' ಎಂಬ ವ್ಯವಹಾರವು ನಿಶ್ಚಿತವಾಗಲಾರದು (ಸಿದ್ಧಿಸಲಾರದು).

ಯಚ್ಚಾಭಿನ್ನಂ ಸ್ವತಸ್ತನ್ನ ಭವತಿ ಪರತೋ ಭೇದಭಾಜ್ ನಾನ್ಯಭೇದಾತ್[1]
ಅನ್ಯೋ ಭಿದ್ಯೇತ ಧರ್ಮಾಃ ಕಥಮಥ ವಿವಿಧಾ ಧರ್ಮ್ಯಭೇದಾದಭಿನ್ನಾಃ ।
ಭೇದೋ ಭಿನ್ನಾಶ್ರಯಶ್ಚೇದಧಿಕರಣಭಿದಾ ತೇನ ಚೇದಾತ್ಮನಿಷ್ಠೋ
ನೋ ಚೇದನ್ಯೋನ್ಯನಿಷ್ಠಾ ಸ್ಥಿತಿಹತಿರಥವಾ ತದ್ಭಿದಾ ದುರ್ನಿರೂಪಾ ॥೫॥

1. छ. ज्ञान्यभेदात्.

Whatever is not different by itself, does never come to possess difference due to the (influence of) things other than itself. An entity will not be different, because of some other entity. How again can the various properties, which are non-different from the object, be different from each other? If difference is based on different substrata, that will be a difference based on difference. Consequently difference will be *ātmaniṣṭha* (based on itself) and if this is not accepted (and some other *bheda* is imagined as its basis), the *bheda-s* will be mutually interdependent, or there will be regressus ad infinitum (if a third *bheda* is imagined to be the basis for the second). Hence difference is difficult to be defined.

भेदोऽयं भिन्नधर्मिप्रतिभटविषयज्ञानजज्ञानवेद्यो
धर्म्यादिर्भेदसिद्धिः पुनरपि च तथेत्यापतेच्चानवस्था ।
भेदे धर्म्याद्यभेदे बत भवति मृषा भेदबुद्धिर्विभेदे
प्रादुःष्युः पूर्वदोषा न च गतिरपरा तेन भेदो मृषैव ॥६॥

This difference is known through the knowledge produced from the knowledge of the object having one quality and another object having the opposite quality. (This)different-ness is proved again on the basis of things possessing (different) properties. In this way there will be regressus ad infinitum If difference is not different from the entity possessing properties, then imagining *bheda* will indeed be to no purpose and if it is different, then all the defects pointed out previously will be manifest. There is no other go. Hence difference is certainly false.

ಯಾವುದು (ಸುವರ್ಣ ಮೊದಲಾದುದು) ಸ್ವರೂಪದಿಂದಲೇ (ಕಟಕ–ಕುಂಡಲಾದಿಗಳಿಂದ) ಅಭಿನ್ನವಾಗಿದೆಯೋ ಅದು (ಕಟಕತ್ವ–ಕುಂಡಲತ್ವಾದಿ) ಇತರ ಧರ್ಮಗಳಿಂದ ಭಿನ್ನವಾಗಲಾರದು. (ಕಟಕತ್ವ–ಕುಂಡಲತ್ವಾದಿ) ಧರ್ಮಗಳಲ್ಲಿ ಪರಸ್ಪರ ಭೇದವಿದ್ದ ಮಾತ್ರಕ್ಕೆ ಅದರಿಂದ ಧರ್ಮಿಯು (ಕನಕವು) ಭಿನ್ನವಾಗಲಾರದು. ಇದೂ ಅಲ್ಲದೆ ಧರ್ಮಗಳಲ್ಲಿ ಪರಸ್ಪರ ಭೇದವಿದೆಯೆಂಬುದಾದರೂ ಹೇಗೆ ? (ಏಕೆಂದರೆ) ಮೂಲಧರ್ಮಿಯಾದ ಕನಕದಿಂದ ವಿಕಾರಿಯಾದ (ಕನಕ–ಕುಂಡಲಾದಿ) ಧರ್ಮಿಗಳು ಅಭಿನ್ನವಾಗಿವೆ. (ಘಟ) ಭೇದವು ಭಿನ್ನಾಶ್ರಯದಲ್ಲಿ (ಘಟಭೇದಾಶ್ರಯವಾದ ಪಟದಲ್ಲಿ) ಇರುವದೆಂದು ಹೇಳಿದರೆ, ಅಂದರೆ ಭೇದವು ಭೇದಾಧಿಕರಣದಲ್ಲಿದೆ ಎಂದು ಹೇಳಿದರೆ, ಭೇದಾಧಿಕರಣವೆಂದರೆ ಪ್ರಕೃತ ಭೇದಾಧಿಕರಣವೆಂದು ಹೇಳುವದಾದರೆ, ಆತ್ಮಾಶ್ರಯ ದೋಷ ಬರುವದು. ಭೇದಾಧಿಕರಣ ಎಂಬಲ್ಲಿ ಭೇದ ಪದದಿಂದ ಅಪ್ರಕೃತವಾದ ಜಲಭೇದಾದಿಗಳನ್ನು ತೆಗೆದುಕೊಂಡರೆ ಜಲಭೇದವೂ ಭೇದವಾದ್ದರಿಂದ ಅದರ ಅಧಿಕರಣವನ್ನು ನಿರೂಪಿಸಬೇಕು. ಹೀಗೆ ಅನ್ಯೋನ್ಯಾಶ್ರಯ ದೋಷವು ಬರುವದು. ಮತ್ತೊಂದು ಭೇದವನ್ನು ತೆಗೆದುಕೊಂಡರೆ ಅದಕ್ಕೆ ಮತ್ತೊಂದು ಪುನಃ ಮತ್ತೊಂದಕ್ಕೆ ಮಗದೊಂದು ಹೀಗೆ ಅನವಸ್ಥಾದೋಷ ಬರುವದು. ಆದ್ದರಿಂದ ಭೇದಾಶ್ರಯವನ್ನು ನಿರೂಪಿಸುವದೇ ಸಾಧ್ಯವಿಲ್ಲದ್ದರಿಂದ ಭೇದವು ಸಿದ್ಧಿಸುವದಿಲ್ಲ.

ಭೇದೋಽಯಂ ಭಿನ್ನಧರ್ಮಿಪ್ರತಿಭಟವಿಷಯಜ್ಞಾನಜಜ್ಞಾನವೇದ್ಯೋ
ಧರ್ಮಾದೇರ್ಭೇದಸಿದ್ಧಿಃ ಪುನರಪಿ ಚ ತಥೇತ್ಯಾಪತೇಚ್ಚಾನವಸ್ಥಾ ।
ಭೇದೇ ಧರ್ಮ್ಯಾದ್ಯಭೇದೇ ಬತ ಭವತಿ ಮೃಷಾ ಭೇದಬುದ್ಧಿರ್ವಿಭೇದೇ
ಪ್ರಾದುಷ್ಯುಃ ಪೂರ್ವದೋಷಾ ನ ಚ ಗತಿರಪರಾ ತೇನ ಭೇದೋ ಮೃಷೈವ ॥೬॥

ಎಲ್ಲ ಭೇದಗಳು (ಅನುಯೋಗಿ–ಪ್ರತಿಯೋಗಿ ಸಾಪೇಕ್ಷಗಳಾಗಿದ್ದರಿಂದ) ಭಿನ್ನ ಭಿನ್ನವಾದ ಅನುಯೋಗಿ ಪ್ರತಿಯೋಗಿಗಳ ಜ್ಞಾನವಾದಾಗಲೇ ವಿದಿತವಾಗುವವು. (ಅಂದರೆ, ಅನುಯೋಗಿ–ಪ್ರತಿಯೋಗಿ–ಭೇದಜ್ಞಾನವು ಭೇದಜ್ಞಾನಕ್ಕೆ ಕಾರಣ ಎಂದರ್ಥ.) ಅನುಯೋಗಿ-ಪ್ರತಿಯೋಗಿ ಭೇದ ಮೊದಲು ಸಿದ್ಧಿಸಬೇಕು. ಆಮೇಲೆ ಭೇದವು ಸಿದ್ಧಿಸುವದು. ಅನುಯೋಗಿ-ಪ್ರತಿಯೋಗಿಗಳ ಪರಸ್ಪರ ಭೇದವು ಸಿದ್ಧಿಸಬೇಕಾದರೆ ಆ ಭೇದಕ್ಕೆ ಪುನಃ ಅನುಯೋಗಿ- ಪ್ರತಿಯೋಗಿ ಭೇದಜ್ಞಾನವು ಬೇಕು, ಹೀಗೆ ಅನವಸ್ಥಾದೋಷವು ಬರುವದು. ಭೇದ-ಪದಾರ್ಥವು ಅನುಯೋಗಿ ಪ್ರತಿಯೋಗಿ ಅಪ್ರಕೃತ-ಭೇದ ಇವುಗಳಿಂದ ಅಭಿನ್ನವಾದುದು ಎಂದು ಹೇಳಿದರೆ ಅಂತಹ ಭೇದ–ಪದಾರ್ಥವು ಮಿಥ್ಯೆಯಾದುದು; ಭಿನ್ನವೆಂದು ಹೇಳಿದರೆ ಆತ್ಮಾಶ್ರಯಾದಿ ಮೊದಲಿನ ದೋಷಗಳೆಲ್ಲ ತಲೆಯೆತ್ತುವವು. ಬೇರೊಂದು ಉಪಪತ್ತಿಯು ಇಲ್ಲದ್ದರಿಂದ ಭೇದವು ಅಸಿದ್ಧವೇ.

द्रव्ये भेदस्य योगो न भवति निरुपाख्यस्य भावस्वरूपो
नाभावोऽन्यः समत्वादनुभयमिलनान्नापि तत्तत्स्वरूपम् ।
भावाभावातिरिक्तं[1] न च किमपि तयोरस्ति संबन्धरूपं
निःसंबन्धेऽपि शुक्तौ रजतमिव मृषा तेन भेदः प्रतीतः ॥७॥

Difference, which can not thus be defined, cannot have any existing association with the entity. The non-existence of difference is no other thing, but identity itself. Difference is not of the nature of the respective object, as it does not concur with either. Nor is there anything in the form of relationship over and above existence and non-existence. Just as the silver, which appears even on the conch shell that has no relationship with it is false, difference also which appears, is false in character.

संयोगादेरयोगान्न हि भवति भिदा गोचरश्चेन्द्रियाणां
व्याप्तिर्नासङ्गताया न भवति सदृशी वाक्यतात्पर्यदूरा ।
मानाभावो न मानं न च पुनरपरं मानमस्यां तथाऽपि
प्रत्यक्षा स्वाप्नमायानगरमिव भवेत् साधु सैषा मृषैव ॥८॥

Due to the impropriety of contact etc., difference does not come into the range of the sense-organs. There cannot be any invariable concomitance (*vyāpti* leading to *anumāra*) in the case of what is not related (to any subject). Nor can it be similar (to another object and thus lead to *upamiti*). Moreover it goes away from the purport of the Vedānta. That it is not found (*anupalabdhi*) cannot be a means of knowledge and there is no other means of knowledge (such as *arthāpatti*) to know it. Still difference appears. Hence like a false city seen in a dream this difference deserves to be unreal.

ದ್ರವ್ಯೇ ಭೇದಸ್ಯ ಯೋಗೋ ನ ಭವತಿ ನಿರುಪಾಖ್ಯಸ್ಯ ಭಾವಸ್ವರೂಪೋ
ನಾಭಾವೋಽನ್ಯಃ ಸಮುತ್ಪಾದನುಭಯಮಿಲನಾನ್ನಾಪಿ ತತ್ತತ್ಸ್ವರೂಪಂ ।
ಭಾವಾಭಾವಾತಿರಿಕ್ತಂ ನ ಚ ಕಿಮಪಿ ತಯೋರಸ್ತಿ ಸಂಬಂಧರೂಪಂ
ನಿಃಸಂಬಂಧೇಽಪಿ ಶುಕ್ತೌ ರಜತಮಿವ ಮೃಷಾ ತೇನ ಭೇದಃ ಪ್ರತೀತಃ ॥೭॥

ವಸ್ತುವೆಂದು ಹೆಸರಿಸಲನರ್ಹವಾದ (ತುಚ್ಛ) ಭೇದಕ್ಕೆ ಯಾವ ವಸ್ತುವಿನೊಡನೆಯೂ ಭಾವರೂಪ ಸಂಬಂಧವು ಸಂಭವಿಸುವದಿಲ್ಲ. ಅಭಾವರೂಪ ಸಂಬಂಧವೂ ಸಂಭವಿಸಲಾರದು. ಆಗ ಭೇದವೂ ಅಭಾವರೂಪ, ಸಂಬಂಧವೂ ಅಭಾವರೂಪವಾದ್ದರಿಂದ ಸಂಬಂಧಿ-ಸಂಬಂಧಗಳೆರಡೂ ಒಂದಾಗುವವು. (ಸಂಬಂಧವು ಸಂಬಂಧಿಗಳಿಂದ ಭಿನ್ನವಾಗಿರಬೇಕೆಂಬ ನಿಯಮವು ಭಂಗವಾಗುವದೆಂದರ್ಥ.) ಸಂಬಂಧವು ಆಯಾ ಸಂಬಂಧಿ (ಭೇದ ಮತ್ತು ಭೇದಾಧಿಕರಣ) ಸ್ವರೂಪವಾಗಲಾರದು. ಏಕೆಂದರೆ ಸಂಬಂಧವು ಆ ಎರಡು ಸಂಬಂಧಿಗಳ ಸ್ವರೂಪಕ್ಕಿಂತಲೂ ಭಿನ್ನವಾಗಿದೆ. ಭೇದ ಮತ್ತು ಭೇದಾಶ್ರಯಗಳಲ್ಲಿರತಕ್ಕ ಸಂಬಂಧವು ಭಾವಸ್ವರೂಪವಾಗಲಿ ಅಭಾವ–ಸ್ವರೂಪವಾಗಲಿ ಇರಬೇಕು. ಇವುಗಳಿಂದ ಭಿನ್ನವಾದ ಬೇರೊಂದು ಸಂಬಂಧವಿಲ್ಲ. ಆದ್ದರಿಂದ ಭೇದದ ಆಶ್ರಯಕ್ಕೆ ಕಾರಣವಾದ ಸಂಬಂಧವೇ ಇಲ್ಲದಿರುವಾಗ ಭೇದವು ತೋರಿದರೆ ಅದು ಮುತ್ತಿನ ಚಿಪ್ಪಿನಲ್ಲಿ ತೋರುವ ಬೆಳ್ಳಿಯಂತೆ ಮಿಥ್ಯೆಯಾಗುವದು.

ಸಂಯೋಗಾದೇರಯೋಗಾನ್ನ ಹಿ ಭವತಿ ಭಿದಾ ಗೋಚರಶ್ಚೇಂದ್ರಿಯಾಣಾಂ
ವ್ಯಾಪ್ತಿರ್ನಾಸಂಗತಾಯಾ ನ ಭವತಿ ಸದೃಶೀ ವಾಕ್ಯ-ತಾತ್ಪರ್ಯದೂರಾ ।
ಮಾನಾಭಾವೋ ನ ಮಾನಂ ನ ಚ ಪುನರಪರಂ ಮಾನಮಸ್ಯಾಂ ತಥಾಪಿ
ಪ್ರತ್ಯಕ್ಷಾ ಸ್ವಾಪ್ನ-ಮಾಯಾ-ನಗರಮಿವ ಭವೇತ್ ಸಾಧು ಸೈಷಾ ಮೃಷೈವ ।೮॥

ಭೇದದಲ್ಲಿ ಸಂಯೋಗಾದಿ ಸನ್ನಿಕರ್ಷಗಳು ಸಂಭವಿಸುವದಿಲ್ಲ; ಆದ್ದರಿಂದ ಭೇದವು ಪ್ರತ್ಯಕ್ಷ ಪ್ರಮಾಣಕ್ಕೆ ವಿಷಯವಲ್ಲ. ಭೇದಕ್ಕೆ ಯಾವ ಸಂಬಂಧವೂ ಸಂಭವಿಸುವದಿಲ್ಲ. ಆದ್ದರಿಂದ (ಸಂಬಂಧವಿಶೇಷವಾದ) ವ್ಯಾಪ್ತಿಯೂ ಇಲ್ಲ; ಹಾಗೆಯೇ ಅನುಮಾನ-ಪ್ರಮಾಣಕ್ಕೆ ವಿಷಯವಲ್ಲ. ಭೇದಕ್ಕೆ ಸದೃಶವಾದ ಬೇರೊಂದು ವಸ್ತುವಿಲ್ಲ; ಆದ್ದರಿಂದ ಭೇದವು ಉಪಮಾನ ಪ್ರಮಾಣಕ್ಕೂ ವಿಷಯವಲ್ಲ. ವೇದಾಂತ ವಾಕ್ಯಗಳ ತಾತ್ಪರ್ಯವೂ ಭೇದದಲ್ಲಿ ಸರ್ವಥಾ ಸಿದ್ಧಿಸುವದಿಲ್ಲ. ಆದ್ದರಿಂದ ಭೇದವು ಶಬ್ದಪ್ರಮಾಣಕ್ಕೂ ವಿಷಯವಲ್ಲ. ಅನುಪಲಬ್ಧಿಯು ಪ್ರಮಾಣವೇ ಅಲ್ಲ. ಭೇದಕ್ಕೆ ಬೇರೆ ಯಾವ ಪ್ರಮಾಣವೂ ಇಲ್ಲ. ಆದ್ದರಿಂದ ಭೇದವು ಸರ್ವಾನುಭವಸಿದ್ಧವೆಂದು ತೋರಿದರೂ ಕನಸಿನಲ್ಲಿ ಕಂಡ ಮಾಯಾ-ನಗರಿಯಂತೆ ಮಿಥ್ಯೆ

---

1. क. भावाभावातिरिक्ते.

वाह्योऽर्थो बुद्धिमात्रान्न भवति स भवन् गोचरः स्यात् परेषाम्
एकैकं न द्वयं चेदुभयमिति मृषा तद्विशिष्टप्रथा च।
द्वित्वादेः सङ्करः स्यान्न खलु भवति ते प्रागभावाद्व्यवस्था
नापेक्षा-बुद्धिक्लृप्तिः सकलमपि शनैर्योज्यमेतत् पृथक्त्वे ॥९॥

An external entity does not come into existence simply because it is felt to be there. If it does, then it should be perceptible to others also. If each one (of the two objects) does not have *dvitva* (two-ness) then the concept of two and also the idea that the object is qualified by two-ness are unreal. The concepts of second (third)etc. will be mixed up in (one object only). You cannot explain it by assuming prior non-existence (*prāgabhāva*), nor can you imagine a relative notion (to prove *dvitva*). All this is to be gradually applied to separate-ness (*pṛthaktva*) also.

कार्यं नान्यन्निदानात् पृथगनधिगमान्न ह्युपादानहेत्वोः
वैलक्षण्यं तथात्वे न भवति समवायाद्व्यवस्थानुपेतात् ।
नोचेत् स्वर्णादिकार्ये द्विगुणगुरुतया मूल्यवृद्धि-प्रसङ्गो-
ऽवस्था-भेदाद्विभेदे स्थितिगतिभिदया भेदिनः स्युर्नराश्च ॥१०॥

The effect is non-different from the (material) cause, because the effect is never obtained as separate from that cause. If it were so (different), there would be no difference between the material cause and the efficient cause. Samavāya can not explain this, as it is not accepted by us. Otherwise in the case of the ornaments made from gold the weight will be doubled and there will arise the contingency of doubling the price. If therefore one says that with the change of condition (or state) there is change of entity also, then the same men in stationary and moving positions will have to be considered as different.

ಬಾಹ್ಯೋಽರ್ಥೋ ಬುದ್ಧಿಮಾತ್ರಾನ್ನ ಭವತಿ ಸ ಭವನ್ ಗೋಚರಃ ಸ್ಯಾತ್ಪರೇಷಾಂ
ಏಕೈಕಂ ನ ದ್ವಯಂ ಚೇದುಭಯಮಿತಿ ಮೃಷಾ ತದ್ವಿಶಿಷ್ಟಪ್ರಥಾ ಚ ।
ದ್ವಿತ್ವಾದೇಃ ಸಂಕರಃ ಸ್ಯಾನ್ನ ಖಲು ಭವತಿ ತೇ ಪ್ರಾಗಭಾವಾದ್ವ್ಯವಸ್ಥಾ
ನಾಪೇಕ್ಷಾ-ಬುದ್ಧಿಕ್ಲೃಪ್ತಿಃ ಸಕಲಮಪಿ ಶಸ್ತೈರ್ಯೋಜ್ಯಮೇತತ್ಪೃಥಕ್ತ್ವೇ ॥೯॥

(ಭೂತಲ ಮೊದಲಾದ) ಬಹಿರ್ದೇಶದಲ್ಲುಂಟಾಗುವ (ಸತ್ಯ) ಪದಾರ್ಥವು ಕೇವಲ ಬುದ್ಧಿ(ನಮ್ಮ ಭಾವನೆ)ಯಿಂದ ಹುಟ್ಟುವದಿಲ್ಲ. ಅದು ಬುದ್ಧಿಯಿಂದಲೇ ಉತ್ಪನ್ನವಾಗುವದಾದರೆ (ಸತ್ಯವಾದ ಹೊರಗಣ ಘಟಾದಿ ವಸ್ತುಗಳಂತೆ) ಇನ್ನೊಬ್ಬರಿಗೂ ತಿಳಿಯಬೇಕಾಗಿತ್ತು. ಎರಡು ಒಂದುಗಳು ಎರಡಲ್ಲ ಅಂದರೆ ದ್ವಿತ್ವವಿಲ್ಲ ಎಂದರ್ಥ, ಆಗ ಎರಡು ದ್ವಿತ್ವದಿಂದ ಕೂಡಿದುದು (ಉಭಯಂ ದ್ವಿತ್ವವಿಶಿಷ್ಟಂ) ಎಂಬ ಬುದ್ಧಿಯು ಮಿಥ್ಯೆಯಾಗುವದು. ಇದೇ ರೀತಿಯಾಗಿ ದ್ವಿತ್ವತ್ರಿತ್ವಾದಿಗಳು ಒಂದೇ ಆಶ್ರಯದಲ್ಲಿರುವದಾದರೆ ಸಂಕರ-ದೋಷವು ಬರುವದು. ಪ್ರಾಗಭಾವಾದಿಗಳಿಂದ ದ್ವಿತ್ವವು ಸಿದ್ಧಿಸುವದೆಂದೂ ಹೇಳಲು ಬರುವದಿಲ್ಲ. (ಏಕೆಂದರೆ ಆ ಪ್ರಾಗ-ಭಾವಗಳಲ್ಲಿಯೇ ವ್ಯವಸ್ಥೆಯಿಲ್ಲ.) ಅದರಂತೆ ಈ ಆಪೇಕ್ಷಾ-ಬುದ್ಧಿಯು ಇಂಥ ದ್ವಿತ್ವಕ್ಕೆ ಕಾರಣವೆಂಬುದೂ ಸಿದ್ಧಿಸಲಾರದು. ಈ ಎಲ್ಲ ವಿಚಾರಗಳನ್ನು 'ಪೃಥಕ್ತ್ವ' ಎಂಬಲ್ಲಿಯೂ ನಿಧಾನವಾಗಿ ಅನ್ವಯಿಸಬೇಕು.

ಕಾರ್ಯಂ ನಾನ್ಯನ್ನಿದಾನಾತ್ ಪೃಥಗನಧಿಗಮಾನ್ನ ಹ್ಯುಪಾದಾನಹೇತ್ವೋಃ
ವೈಲಕ್ಷಣ್ಯಂ ತಥಾತ್ವೇ ನ ಭವತಿ ಸಮವಾಯಾದ್ವ್ಯವಸ್ಥಾನುಪೇತಾತ್ ।
ನೋ ಚೇತ್ ಸ್ವರ್ಣಾದಿಕಾರ್ಯೇ ದ್ವಿಗುಣಗುರುತಯಾ ಮೌಲ್ಯವೃದ್ಧಿ-ಪ್ರಸಂಗೋ-
ಽವಸ್ಥಾ-ಭೇದಾದ್ವಿಭೇದೇ ಸ್ಥಿತಿಗತಿಭಿದಯಾ ಭೇದಿನಃ ಸ್ಯುರ್ನರಾಶ್ಚ ॥೧೦॥

ಉಪಾದಾನ ಕಾರಣದಿಂದ (ಮೃತ್ತಿಕೆಯಿಂದ) ಕಾರ್ಯವನ್ನು (ಘಟವನ್ನು) ಬೇರ್ಪಡಿಸಲು ಸಾಧ್ಯವಿಲ್ಲದ್ದರಿಂದ (ಘಟಾದಿ) ಕಾರ್ಯವು (ಮೃತ್ತಿಕಾದಿ) ಉಪಾದಾನ ಕಾರಣದಿಂದ ಭಿನ್ನವಲ್ಲ. ಕಾರ್ಯವು ಉಪಾದಾನ-ಕಾರಣದಿಂದ ಭಿನ್ನವಾದಲ್ಲಿ ಉಪಾದಾನಕಾರಣ-ನಿಮಿತ್ತಕಾರಣಗಳಿಗೆ ಭೇದವೇ ಇರಲಾರದು. ಸಮವಾಯ ಸಂಬಂಧವನ್ನು(ನಾವು) ಒಪ್ಪದಿರುವದರಿಂದ "ಸಮವಾಯ-ಸಂಬಂಧದಿಂದ ಕಾರಣವಾದುದು ಉಪಾದಾನ-ಕಾರಣ, ಅದರಿಂದ ಭಿನ್ನವಾದುದು ನಿಮಿತ್ತಕಾರಣ" ಎಂಬ ವ್ಯವಸ್ಥೆಯೂ ಸಿದ್ಧಿಸುವದಿಲ್ಲ. ಕಾರ್ಯವು ಉಪಾದಾನ-ಕಾರಣದಿಂದ ಬೇರೆಯಾದಲ್ಲಿ ಸುವರ್ಣ-ಕಾರ್ಯವಾದ ಕಟಕ-ಕುಂಡಲಾದಿಗಳ ತೂಕವು ಇಮ್ಮಡಿಯಾಗಿ ಬೆಲೆಯೂ ಇಮ್ಮಡಿಯಾಗಬೇಕಾದೀತು. ಅವಸ್ಥಾ-ಭೇದದಿಂದ ಕಾರ್ಯವು ಭಿನ್ನವೆಂದು ಹೇಳುವದಾದರೆ (ಇದ್ದಲ್ಲಿ) ಇರುವಿಕೆ, ಗಮನಕ್ರಿಯೆ ಮುಂತಾದ ಅವಸ್ಥೆಗಳ ಭೇದದಿಂದಲೂ ಮನುಷ್ಯರೆಲ್ಲರೂ ಭಿನ್ನ-ಭಿನ್ನರಾಗಬೇಕಾದೀತು.

पिण्डावस्था-घटत्वे मनसि विमृशतो हेतुकार्यत्वधीः स्यात्
मृण्मात्रं यद्वदेकं स्फुटमभिमृशतो नैव हेतुर्न कार्यम् ।
तद्वन्मायिप्रपञ्चौ मनसि कलयतो ब्रह्म विश्वस्य हेतुः
सन्मात्रं त्वेकरूपं पटु परिमृशतो नैव मायी न विश्वम् ॥११॥

In the case of a person, who reflects upon a pitcher and its (prior condition as) the lump of clay, there may be the thought about the cause and the effect. But in the case of one, who clearly thinks about the clay only, there is neither the cause nor the effect. Similarly in the case of a person who thinks in his mind about the Magician and the world, the Brahman is the cause of the world. But when he clearly reflects upon the mere Existence of a unified nature, there is neither the Magician nor the world.

सन् कुम्भः सत् कुसूलं सदखिलमिति यद्भाति यच्च श्रुतं प्राक्
तत् सत्यं व्याप्य विश्वं घटपिठरमुखं मृत्तिकेवावभाति ।
तस्मिन् रज्जाविवाहिर्निखिलमपि जगत् कल्पितं तत्स्वभावात्
तन्मात्रं तत्पृथक्त्वे ह्यसदिदमखिलं स्यात्तदेव ह्यभेदे ॥१२॥

"The pot is existing, the granary is existing. everything is existing" in this way everything appears and the scripture also declares *sat* as existing prior (to creation). Just as the clay is seen to pervade the pot, the pan etc., so does Brahman pervade the whole world. On this ultimate reality is superimposed the world, as a snake is superimposed upon a rope. Being that essentially, the world is identical with that. If that and the world are taken to be separate, the world would be non-existent. If they are taken to be one, then it is that (Brahman) only.

ಪಿಂಡಾವಸ್ಥಾ-ಘಟತ್ವೇ ಮನಸಿ ವಿಮೃಶತೋ ಹೇತುಕಾರ್ಯತ್ವಧೀಃ ಸ್ಯಾತ್
ಮೃಣ್ಮಾತ್ರಂ ಯದ್ವದೇಕಂ ಸ್ಫುಟಮಭಿಮೃಶತೋ ನೈವ ಹೇತುರ್ನ ಕಾರ್ಯಂ ।
ತದ್ವನ್ಮಾಯಿ ಪ್ರಪಂಚೌ ಮನಸಿ ಕಲಯತೋ ಬ್ರಹ್ಮ ವಿಶ್ವಸ್ಯ ಹೇತುಃ
ಸನ್ಮಾತ್ರಂ ತ್ವೇಕರೂಪಂ ಪಟು ಪರಿಮೃಶತೋ ನೈವ ಮಾಯೀ ನ ವಿಶ್ವಂ ।೧೮।

"ಮಣ್ಣಿನ ಮುದ್ದೆ, ಮಡಕೆಯ ಆಕಾರ" ಇವುಗಳ ಬಗೆಗೆ ಮನಸ್ಸಿನಲ್ಲಿ ವಿಮರ್ಶಿಸುವಾಗ ಮಣ್ಣಿನ ಮುದ್ದೆಯು ಕಾರಣವೆಂದೂ ಮಡಕೆಯು ಕಾರ್ಯವೆಂದೂ ತಿಳಿಯುವದು. ಕೇವಲ ಮಣ್ಣನ್ನು ಮಾತ್ರ ನಿಚ್ಚಳವಾಗಿ ಕಂಡಾಗ ಕಾರಣವೂ ಇಲ್ಲ ಕಾರ್ಯವೂ ಇಲ್ಲ. ಅದರಂತೆಯೇ ಈಶ್ವರ ಮತ್ತು ಪ್ರಪಂಚಗಳ ಕುರಿತು ವಿಮರ್ಶಿಸುವವನಿಗೆ ಈಶ್ವರ ಕಾರಣ, ಪ್ರಪಂಚ ಕಾರ್ಯವೆಂದು ತೋರುವದು. ಏಕಾಕಾರವಾದ ಸದ್ರೂಪವನ್ನೇ ಸರಿಯಾಗಿ ಚಿಂತಿಸುವಾಗ (ಸದ್ರೂಪದಿಂದ ಭಿನ್ನವಾದ) ಈಶ್ವರನೂ ಇಲ್ಲ ಪ್ರಪಂಚವೂ ಇಲ್ಲ.

ಸನ್ ಕುಂಭಃ ಸತ್ ಕುಸೂಲಂ ಸದಖಿಲಮಿತಿ ಯದ್ಭಾತಿ ಯಚ್ಚ ಶ್ರುತಂ ಪ್ರಾಕ್
ತತ್ ಸತ್ಯಂ ವ್ಯಾಪ್ಯ ವಿಶ್ವಂ ಘಟ-ಪಿಠರಮುಖಂ ಮೃತ್ತಿಕೇವಾವಭಾತಿ ।
ತಸ್ಮಿನ್ ರಜ್ಜ್ವಾವಿವಾಹಿರ್ನಿಖಿಲಮಪಿ ಜಗತ್ ಕಲ್ಪಿತಂ ತತ್ಸ್ವಭಾವಾತ್
ತನ್ಮಾತ್ರಂ ತತ್ಪೃಥಕ್ತ್ವೇ ಹ್ಯಸದಿದಮಖಿಲಂ ಸ್ಯಾತ್ತದೇವ ಹ್ಯಭೇದೇ ॥೧೯॥

ಮಣ್ಣು ಮಡಕೆ-ಕುಡಿಕೆಗಳನ್ನು ವ್ಯಾಪಿಸುವಂತೆ "ಸೃಷ್ಟಿಗೆ ಮೊದಲೂ ಕೂಡ ಇರುವದು" ಎಂದೂ ಶ್ರುತಿಯಲ್ಲಿ ಸಾರಿಹೇಳಿದ ಸತ್ತತ್ವವೇ, ಘಟವೂ ಸತ್, ಕಣಜವೂ ಸತ್, ಎಲ್ಲವೂ ಸತ್ ಎಂದು ಏಕಾಕಾರವಾಗಿ ವಿಶ್ವವನ್ನು ವ್ಯಾಪಿಸಿದೆ. ಆ ಸತ್ತತ್ವದಲ್ಲಿಯೇ ಈ ಜಗತ್ತು, ಹಗ್ಗದಲ್ಲಿ ಹಾವಿನಂತೆ ಕಲ್ಪಿತವಾಗಿದೆ (ಅಧ್ಯಸ್ತವಾಗಿದೆ). ಕಲ್ಪಿತವಾದ ಜಗತ್ತು (ಮೂಲತಃ) ಅದೇ (ಆ ಬ್ರಹ್ಮವೇ); ಆದ್ದರಿಂದ ತನ್ಮಾತ್ರವಾಗಿದೆ. ಅದರಿಂದ ಭಿನ್ನವಾಗಿದ್ದರೆ ಅಸತ್ ಆಗುತ್ತಿತ್ತು. ಅಭಿನ್ನವಾದಾಗ ಅದೇ ಬ್ರಹ್ಮ.

एकैव ब्रह्म-सत्ता व्यवहृति[1]-विषये शुक्तिरूप्यादिके च
स्फान्त्याद्ये सत्यमेतज्जगदिति धियमाब्रह्मबोधाद्विधत्ते ।
यावत्-स्फूर्ति द्वितीये प्रथितमिव पटस्फाटिके रक्तरूपं
माञ्जिष्ठं साधु रक्तः पट इति न मृषा स्फाटिके तन्मृषेति ॥१३॥

The only one 'existence' of Brahman is seen in practical matters as also in the case of shell-silver. In the first case it creates the impression that "this world is true" until Brahman is realised. In the second case the impression lasts only till the fact is known. (To give another example) the redness of madder (*mañjiṣṭha*) is seen in a cloth and also in a crystal The statement that the cloth is red is not false; it is proper (as the cloth is dyed). But the redness in the crystal is unreal (as redness is only apparent due to juxta-position).

सच्चित्सौख्यैकरस्येऽप्यनृतजडमहादुःखमोहान्यभावात्
सत्यज्ञानादिवाक्यव्यवहृतिविषये कल्पिते रूपभेदे ।
शुक्तीदंतेव सत्ता स्फुरति समरसा कल्पितेनानुविद्धा
शुक्तित्वादीव मायावरण–परिभवाच्चित्सुखत्वे न भातः[2] ॥१४॥

Brahman is the identity of Existence, Knowledge and Bliss. Though in practice for explaining Upaniṣadic statements like "Brahman is Truth, Knowledge" etc. different forms are imagined; they are meant only to show that they are negations of falsity, non-sentiency, great grief and delusion, In fact the 'existence' aspect of Brahman becomes involved with the imaginary (things) and appears as identical with the world, just as this-ness of the shell (gets mixed up with the imaginary silver). Being enveloped by the covering of *māyā*, the aspects of Knowledge and Bliss are not evident just as the shell is not revealed (as shell at the outset)

ಏಕೈವ ಬ್ರಹ್ಮ-ಸತ್ತಾ ವ್ಯವಹೃತಿ-ವಿಷಯೇ-ಶುಕ್ತಿರೂಪ್ಯಾದಿಕೇ ಚ
ಖ್ಯಾಂತ್ಯಾದ್ಯೇ ಸತ್ಯಮೇತಜ್ಜಗದಿತಿ ಧಿಯಮಾಬ್ರಹ್ಮಬೋಧಾದ್ ವಿಧತ್ತೇ ।
ಯಾವತ್‌ಸ್ಫೂರ್ತಿ ದ್ವಿತೀಯೇ ಪ್ರಥಿತಮಿವ ಪಟಸ್ಫಾಟಿಕೇ ರಕ್ತರೂಪಂ
ಮಾಂಜಿಷ್ಠಂ ಸಾಧು ರಕ್ತಃ ಪಟ ಇತಿ ನ ಮೃಷಾ ಸ್ಫಾಟಿಕೇ ತನ್‌ಮೃಷೇತಿ   ॥೧೬॥

ಲೌಕಿಕ ವ್ಯವಹಾರದ ವಸ್ತುಗಳಲ್ಲಿ ಹೇಗೋ ಹಾಗೆ ಮುತ್ತಿನ ಚಿಪ್ಪಿನಲ್ಲಿ ಭಾಸಮಾನವಾಗುವ ಬೆಳ್ಳಿಯಲ್ಲಿಯೂ ತೋರುವ ಬ್ರಹ್ಮಸತ್ತೆಯು ಒಂದೇ ಆಗಿದೆ. ಅವರೆ ಬ್ರಹ್ಮಜ್ಞಾನದ ವರೆಗೆ (ಬೆಳ್ಳಿ ಇತ್ಯಾದಿ) ವ್ಯಾವಹಾರಿಕ ವಸ್ತುಗಳಲ್ಲಿ ತೋರುವ ಬ್ರಹ್ಮಸತ್ತೆಯು "ಈ ಜಗತ್ತು ಸತ್ಯವೇ" ಎಂಬುದನ್ನು ತಿಳಿಸಿಕೊಡುವದು. ಪ್ರಾತಿಭಾಸಿಕ ಜ್ಞಾನವಿರುವ ವರೆಗೆ ಮಾತ್ರ ಅದೇ ಬ್ರಹ್ಮಸತ್ತೆಯು ಇದು (ಪ್ರಾತಿಭಾಸಿಕ ಬೆಳ್ಳಿ) ಸತ್ಯವೆಂಬುದನ್ನು ತಿಳಿಸಿಕೊಡುವದು. ಉದಾಹರಣೆಗೆ, ಕೆಂಪು ಬಟ್ಟೆ ಮತ್ತು (ಕಾವಿಯ ಹತ್ತಿರದಲ್ಲಿರುವ) ಸ್ಫಟಿಕದಲ್ಲಿ ಕೆಂಪು ಬಣ್ಣವು ತೋರುವದು. ಅದರಲ್ಲಿ 'ಕೆಂಪು ಬಟ್ಟೆ' ಎನ್ನುವ ಜ್ಞಾನವು ಸತ್ಯವಾದುದು; ಅದು ಮಿಥ್ಯೆಯಲ್ಲ. 'ಕೆಂಪು ಸ್ಫಟಿಕ' ಎಂಬ ಜ್ಞಾನವು ಅಸತ್ಯವಾದುದು.

ಸಚ್ಚಿತ್‌ಸೌಖ್ಯೈಕರಸ್ಯೇಽಪ್ಯನೃತ-ಜಡ-ಮಹಾದುಃಖ-ಮೋಹಾನ್ಯಭಾವಾತ್
ಸತ್ಯಜ್ಞಾನಾದಿ-ವಾಕ್ಯ-ವ್ಯವಹೃತಿ-ವಿಷಯೇ ಕಲ್ಪಿತೇ ರೂಪಭೇದೇ ।
ಶುಕ್ತೀದಂತೇವ ಸತ್ತಾ ಸ್ಫುರತಿ ಸಮರಸಾ ಕಲ್ಪಿತೇನಾನುವಿದ್ಧಾ
ಶುಕ್ತಿತ್ವಾದೀವ ಮಾಯಾವರಣ-ಪರಿಭವಾಚ್ಚಿತ್ಸುಖತ್ವೇ ನ ಭಾತಃ   ॥೧೭॥

ಬ್ರಹ್ಮವು ಸತ್–ಚಿತ್–ಆನಂದಗಳ ಏಕಘನವಾಗಿದೆ. ಆದರೆ 'ಸತ್ಯಂ ಜ್ಞಾನಂ' ಮುಂತಾದ ಶ್ರುತಿವಾಕ್ಯಗಳನ್ನು ವಿವರಿಸುವಾಗ ಅಸತ್ಯ, ಜಡತ್ವ, ಮಹಾದುಃಖ ಮತ್ತು ಮೋಹ ಇವುಗಳಿಂದ ಬ್ರಹ್ಮವು ಭಿನ್ನವಾಗಿದೆ ಎನ್ನುವದನ್ನು ತಿಳಿಸಿಕೊಡಲೆಂದು ರೂಪಗಳು ಕಲ್ಪಿತವಾಗಿವೆ. ಶುಕ್ತಿಯಲ್ಲಿ ತೋರುವ 'ಇದು' ಎಂಬ ಅಂಶವು ಕಲ್ಪಿತವಾದ ಬೆಳ್ಳಿಯೊಡನೆ ಕಲಿಸಿಕೊಂಡಿರುವಂತೆ ಬ್ರಹ್ಮದ ಸತ್ತಾ-ಲಕ್ಷಣವು ಕಲ್ಪಿತ ವಸ್ತುಗಳ ಜೊತೆಗೆ ಸಮ್ಮಿಶ್ರವಾಗಿ ಕಾಣುವದು. ಮಾಯೆಯ ತೆರೆಯಿಂದ ಮುಚ್ಚಿದ ಕಾರಣ ಶುಕ್ತಿತ್ವ ಮುಂತಾದವುಗಳು (ಮೊದಲು) ಕಾಣದಿರುವಂತೆ ಬ್ರಹ್ಮದ ಚಿತ್ ಮತ್ತು ಆನಂದಭಾವಗಳು ಗೋಚರವಾಗುವದಿಲ್ಲ.

---

1. क. व्यवहृत
2. क. भाति

दृष्टे कोऽस्मिन् समाजे नरपतिरिति यो मत्तमातङ्गपृष्ठे
मुक्ताजालान्तराले शशिधवललसच्छत्रमूले स्फुरन् सः ।
इत्युक्तः पुंविशेषं सपदि परिचिनोत्येष राजेति सर्वम्
मुक्त्वैकं येन पश्यन्नमुमपरविधं सैष राजेति वेत्ति ॥१५॥

When some one asks, "Who is the king in this mass of people?" he is told, "The person who shines on the back of the intoxicated elephant, in the interstices of the net-work of pearls and under the moon-white shining umbrella is the king". Then the man immediately discovers the particular person as "This is the king", leaving out all (his paraphernalia); because even when he sees the king otherwise (while bathing etc.) he recognises 'this is that king'.

वर्णिता विविदिषादियन्त्रणात्
पुंविशेषमिव लक्षणोक्तयः ।
विश्वसर्गविषयागमाः परं
लक्षयन्ति निरवद्यचिद्घनम् ॥१६॥

Just as the characteristic statements made (in the previous verse) refer to a particular individual (namely the king), there being an urge to know him (and not his attributes), so do the Upaniṣadic statements referring to the creation of the world indicate the highest (Brahman), which is a pure mass of consciousness.

तत्त्वमर्थवदत्र यद्यपि नान्वयानुपपत्तिधीः
नाप्यभिन्नपदार्थकत्वमतः पदेषु न लक्षणा ।
भेदसङ्गतिकानि तानि समेत्य सत्यचिदद्वयं
तत्पराणि हि लक्षयेयुरुपक्रमाद्यनुसारतः ॥१७॥

ಪೃಷ್ಟೇ ಕೋಽಸ್ಮಿನ್ ಸಮಾಜೇ ನರಪತಿರಿತಿ ಯೋ ಮತ್ತಮಾತಂಗ-ಪೃಷ್ಠೇ
ಮುಕ್ತಾ-ಜಾಲಾಂತರಾಲೇ ಶಶಿ-ಧವಲ-ಲಸಚ್ಛತ್ರ-ಮೂಲೇ ಸ್ಫುರನ್ ಸಃ ।
ಇತ್ಯುಕ್ತಃ ಪುಂವಿಶೇಷಂ ಸಪದಿ ಪರಿಚಿನೋತ್ಯೇಷ ರಾಜೇತಿ ಸರ್ವಂ
ಮುಕ್ತ್ವೈಕಂ ಯೇನ ಪಶ್ಯನ್ನಮುಮಪರವಿಧಂ ಸೈಷ ರಾಜೇತಿ ವೇತ್ತಿ ॥೧೫॥

"ಈ ಜನಸಮೂಹದಲ್ಲಿ ರಾಜನಾರು?" ಎಂದು ಕೇಳಿದವನಿಗೆ "ಮುದ್ದಾನೆಯ ಮೇಲೆ ತೂಗುಮುತ್ತುಗಳ ನಡುವೆ ಚಂದ್ರನಂತಿರುವ ಶ್ವೇತಚ್ಛತ್ರದ ಕೆಳಗೆ ರಾಜಿಸುತ್ತಿರುವವನೇ ಅವನು" ಎಂದು ಹೇಳಿದಾಗ ಅವನು (ಕೇಳಿದವನು) ಬೇರೆ ಎಲ್ಲ ವರ್ಣಿತಾಂಶಗಳನ್ನು ಬಿಟ್ಟು ಒಮ್ಮೆಲೆ ಇವನೇ ರಾಜನೆಂದು ರಾಜನನ್ನು ಗುರುತಿಸುತ್ತಾನೆ. ಅವನನ್ನು (ಸ್ನಾನಮಾಡುವಾಗ ಇತ್ಯಾದಿ) ಬೇರೆ ಸಂದರ್ಭಗಳಲ್ಲಿ ನೋಡಿದಾಗ ಕೂಡ ಇವನೇ ಆ ರಾಜನೆಂದು ತಿಳಿಯಲು ಶಕ್ತನಾಗುವದರಿಂದ ಇದು ಸಿದ್ಧವಾಗುತ್ತದೆ.

ವರ್ಣಿತಾ ವಿವಿದಿಷಾದಿಯಂತ್ರಣಾತ್
ಪುಂವಿಶೇಷಮಿವ ಲಕ್ಷಣೋಕ್ತಯಃ ।
ವಿಶ್ವಸರ್ಗ-ವಿಷಯಾಗಮಾಃ ಪರಂ
ಲಕ್ಷಯಂತಿ ನಿರವದ್ಯಚಿದ್ಘನಂ ॥೧೬॥

ರಾಜನನ್ನು ತಿಳಿಯಬೇಕೆಂದಾಗ ಅವನನ್ನು ಗುರುತಿಸಲು ಹೇಳಿದ ನಾನಾ ಲಕ್ಷಣಗಳು ಕೇವಲ ಪುರುಷ-ವಿಶೇಷವನ್ನು ತಿಳಿಸುವಂತೆ, ಜಗತ್ತಿನ ಉತ್ಪತ್ತಿಯನ್ನು ನಿರೂಪಿಸುವ ಉಪನಿಷತ್ತುಗಳು ಆ (ಶ್ರೇಷ್ಠವಾದ) ಶುದ್ಧಚಿದ್ಘನವಾದ ಪರಬ್ರಹ್ಮವನ್ನು ಮಾತ್ರ ನಿರ್ದೇಶಿಸುತ್ತವೆ. (ಲಕ್ಷಣಗಳಿಗೆ ಮುಖ್ಯ ತಾತ್ಪರ್ಯವಿಲ್ಲ.)

ತತ್ತ್ವಮರ್ಥವದತ್ರ ಯದ್ಯಪಿ ನಾನ್ವಯಾನುಪಪತ್ತಿಧೀಃ
ನಾಪ್ಯಭಿನ್ನ-ಪದಾರ್ಥಕತ್ವಮತಃ ಪದೇಷು ನ ಲಕ್ಷಣಾ ।
ಭೇದಸಂಗತಿಕಾನಿ ತಾನಿ ಸಮೇತ್ಯ ಸತ್ಯಚಿದದ್ವಯಂ
ತತ್ಪರಾಣಿ ಹಿ ಲಕ್ಷಯೇಯುರುಪಕ್ರಮಾದ್ಯನುಸಾರತಃ ॥೧೭॥

As found in the case of the meaning of '*tat tvam* (*asi*)', there is no abesence of congruity (in the primary sense leading to secondary sense) in this case (of the *sṛṣṭiśruti*). Nor is there the identity of the entities. Hence there is no secondary sense in these words. Even then, those statements (describing creation etc.) refer to that (Brahman) and though they are various by nature, all of them taken together indicate the Brahman which is truth, knowledge and free from duality, in accordance with the rule of *upakrama* (beginning) etc.

अक्षजादि–बहिःप्रमाण–समेधित–द्वयविभ्रमे
जाग्रति श्रुतिरद्वयप्रतिबोधने सहसाऽक्षमा ।
व्यावहारिक–वस्तुजातमिदं मृषेति विवक्षया
प्रक्रियां रचयांबभूव विसृष्टि–संहृतिलक्षणाम् ॥१८॥

When the delusion of duality, caused by the external means of knowledge based on the senses etc. is patent, the scripture is unable to enlighten at once (the people) on the non-dual reality. Hence the scripture with a desire to proclaim the falsity of the phenomenal world, formulated a procedure involving creation and dissolution.

ब्रह्म सच्चिदनन्तमेकमशेषवाङ्मनसातिगम्
पञ्चकोशगुहान्तरं च निगद्य शश्वदलौकिकम् ।
तद्विसृज्य विवेश सत्यमसत्यमित्युभयं स्वतः
सत्यमित्यभिधायिनी श्रुतिरद्वयं स्फुटमभ्यधात् ॥१९॥

'ತತ್ತ್ವಮಸಿ' ವಾಕ್ಯದ 'ತತ್' ಮತ್ತು 'ತ್ವಂ' ಈ ಪದಗಳ ಅರ್ಥದಲ್ಲಿರುವ ಅನ್ವಯಾನುಪಪತ್ತಿಯೆಂಬ ಲಕ್ಷಣಾಬೀಜವು (ಸೃಷ್ಟಿ-ಶ್ರುತಿಗಳಲ್ಲಿ) ಇಲ್ಲ ಮತ್ತು ಅಭಿನ್ನಪದಾರ್ಥಕತ್ವವೂ (ಪದಾರ್ಥಗಳ ಅಭೇದಭಾವವೂ) ಇಲ್ಲ. ಆದ್ದರಿಂದ ಈ ಪದಗಳಲ್ಲಿ ಲಕ್ಷಣೆಯು ಇರುವದಿಲ್ಲ. ಬ್ರಹ್ಮಪರಗಳಾದ ಆ ವಾಕ್ಯಗಳು ಪರಸ್ಪರ ಭೇದ-ಸಂಬಂಧ ಹೊಂದಿದ್ದರೂ ಕೂಡಿಕೊಂಡು ಉಪಕ್ರಮಾದಿ ನಿಯಮಗಳನ್ನು ಅನುಸರಿಸಿ ಸತ್-ಚಿತ್-ಅದ್ವಯವಾದ ಬ್ರಹ್ಮವನ್ನೇ ತಿಳಿಸುತ್ತವೆ

ಅಕ್ಷಜಾದಿ-ಬಹಿಃಪ್ರಮಾಣ-ಸಮೇಧಿತ-ದ್ವಯವಿಭ್ರಮೇ
ಜಾಗ್ರತಿ ಶ್ರುತಿರದ್ವಯ-ಪ್ರತಿಬೋಧನೇ ಸಹಸಾಕ್ಷಮಾ ।
ವ್ಯಾವಹಾರಿಕ-ವಸ್ತುಜಾತಮಿದಂ ಮೃಷೇತಿ ವಿವಕ್ಷಯಾ
ಪ್ರಕ್ರಿಯಾಂ ರಚಯಾಂಬಭೂವ ವಿಸೃಷ್ಟಿ-ಸಂಹೃತಿ-ಲಕ್ಷಣಾಂ ॥೧೮॥

ಪ್ರತ್ಯಕ್ಷಾದಿ ಬಾಹ್ಯ ಪ್ರಮಾಣಗಳಿಂದುಂಟಾದ ದ್ವೈತದ ಭ್ರಮೆಯು ತಲೆ ಎತ್ತಿರುವಾಗ ಶ್ರುತಿಯು ಅದ್ವಯವಾದ ಬ್ರಹ್ಮವನ್ನು ತಿಳಿಸಲು ಒಮ್ಮೆಲೆ ಸಮರ್ಥವಾಗುವದಿಲ್ಲ. (ಆದ್ದರಿಂದ ಶ್ರುತಿಯು) ವ್ಯಾವಹಾರಿಕ ವಸ್ತುಗಳೆಲ್ಲವು ಮಿಥ್ಯ ಎಂದು ಹೇಳಲಿಚ್ಛಿಸಿ ಉತ್ಪತ್ತಿ-ಲಯಗಳನ್ನೊಳಗೊಂಡ ಪ್ರಕ್ರಿಯೆಯನ್ನು ನಿರ್ಮಿಸಿತು.

ಬ್ರಹ್ಮ ಸಚ್ಚಿದನಂತಮೇಕಮಶೇಷವಾಙ್ಮನಸಾತಿಗಂ
ಪಂಚಕೋಶ-ಗುಹಾಂತರಂ ಚ ನಿಗದ್ಯ ಶಶ್ವದಲೌಕಿಕಂ ।
ತದ್ವಿಸೃಜ್ಯ ವಿವೇಶ ಸತ್ಯಮಸತ್ಯಮಿತ್ಯುಭಯಂ ಸ್ವತಃ
ಸತ್ಯಮಿತ್ಯಭಿಧಾಯಿನೀ ಶ್ರುತಿರದ್ವಯಂ ಸ್ಫುಟಮಭ್ಯಧಾತ್ ॥೧೯॥

The scripture (*brahma-valli* of the Taittirīya Upaniṣad) having declared (at the beginning) that Brahman is existent, sentient, infinite and one (without a second), points out (at the end) that it is beyond the power of speech and mind. The scripture points out (in the middle) that Brahman is concealed inside the five sheaths. It is never involved in this empirical world. Having created the world, Brahman entered into it and became *satya* and *asatya* both. The scripture by pointing out that Brahman is real by itself (whereas the reality of the world depends upon Brahman) clearly declared the non-duality.

ब्रह्मवित् परमेति तत् खलु सच्चिदद्वयलक्षणं
वेदनं च गुहान्तरस्य निजस्वरूपतदाप्तये ।
इत्युदीर्य सदद्वयत्व–समर्थनाय समाददे
विश्वसृष्टिमिमां श्रुतिर्नहि तत्समर्थनमन्यथा ॥२०॥

"The knower of Brahman reaches the ultimate (abode). That is indeed characterised by existence, knowledge and non-duality. This knowledge of the Brahman in the heart is meant for attaining one's true nature". Having declared thus the scripture, in order to explain the existent and non-dual nature of Brahman, took up (the topic of) the creation of this world. There can be no other justification for this procedure.

एक एव पुरा बभूव न चापरं स किलाखिलं
वीक्ष्य विश्वमिदं ससर्ज तनुं प्रविश्य निरीक्षते ।
स्वप्नमावसथत्रयं स विचारतः प्रतिबुद्धवान्
स्वात्मनैव समस्तकाममवाप्नुवन्नमृतोऽभवत्[1] ॥२१॥

೧೭. ಸೃಷ್ಟಿ ಮುಂತಾದವುಗಳನ್ನು ತಿಳಿಸುವ ಉಪನಿಷತ್ತಿನ ವಾಕ್ಯಗಳು ನಿರ್ಗುಣ ಬ್ರಹ್ಮವನ್ನು ಹೇಗೆ ಸಮರ್ಪಿಸುವವು ? ಅದು ಅವುಗಳ ವಾಚ್ಯಾರ್ಥವಾಗ ಲಾರದೆಂಬುದು ಸ್ಪಷ್ಟವೇ ಇದೆ. ಅದು ಲಕ್ಷಣಾರ್ಥವೂ ಕೂಡ ಆಗಲಾರದು. ಏಕೆಂದರೆ ಅಲ್ಲಿ 'ಗಂಗಾಯಾಂ ಘೋಷಃ' ಅಥವಾ 'ಯಷ್ಟೀಃ ಪ್ರವೇಶಯ' ಎಂಬಲ್ಲಿ ಕಂಡುಬರುವ ಅನನ್ವಯ ಅಥವಾ ಮುಖ್ಯಾರ್ಥ-ಬಾಧವೂ ತೋರುವದಿಲ್ಲ.

ಉಪಕ್ರಮಾದ್ಯನುಸಾರತಃ —

ಉಪಕ್ರಮೋಪಸಂಹಾರಾವಭ್ಯಾಸೋಽಪೂರ್ವತಾ ಫಲಮ್ ।

ಅರ್ಥವಾದೋಪಪತ್ತೀ ಚ ಲಿಂಗಂ ತಾತ್ಪರ್ಯ-ನಿರ್ಣಯೇ ॥

ಉಪಕ್ರಮೋಪಸಂಹಾರಗಳು, ಅಭ್ಯಾಸ [ಪುನರಾವೃತ್ತಿ], ಅಪೂರ್ವತಾ, ಫಲ, ಸ್ತುತಿ [ಅರ್ಥವಾದ] ಮತ್ತು ಯುಕ್ತಿ-ಇವು ಶ್ರುತಿವಾಕ್ಯಾರ್ಥವನ್ನು ನಿಶ್ಚಯಿಸುವವುಗಳೆಂದು ಹೇಳಲಾಗಿದೆ. ಇವುಗಳನ್ನು ಉಪನಿಷತ್ತಿನ ವಾಕ್ಯಗಳಿಗೆ ಅನ್ವಯಿಸಲಾಗಿ ಅವು ಕೊನೆಗೆ ಯಾವ ಗುಣವೂ ಇಲ್ಲದ ಬ್ರಹ್ಮವನ್ನೇ ಸಾರುವವೆಂಬುದು ಸುಲಭಗಮ್ಯ-ವಾಗಿದೆ.

೧೮. ಉಪನಿಷತ್ತುಗಳು ಹೆಜ್ಜೆಹೆಜ್ಜೆಯಾಗಿ ಹೀಗೆ ಪರಮಾರ್ಥೋಪದೇಶ ವನ್ನು ಮಾಡುವವೆಂಬುದನ್ನು ಈ ಶ್ಲೋಕ ತಿಳಿಹೇಳುತ್ತದೆ. ಸೃಷ್ಟಿ, ಸ್ಥಿತಿ ಮುಂತಾ ದವುಗಳು ಬ್ರಹ್ಮವನ್ನವಲಂಬಿಸಿದೆ ಎಂಬ ವಿವರಣೆಯು, ಕಾರಣ ಅಥವಾ ನಿಯಾಮಕ ವಾದುದು ಬೇರೆ ಯಾವುದು ಇಲ್ಲವೆಂಬ ಅಂತರಾರ್ಥವನ್ನು ತಿಳಿಸುವ ಮೊದಲನೆಯ

ಹೆಜ್ಜೆಯಾಗಿದೆ. ಮೇಲೆ [ಪದ್ಯ ೧೫] ಹೇಳಿದ ಉದಾಹರಣೆಯಲ್ಲಿ, ರಾಜನ ವ್ಯಕ್ತಿತ್ವವು ಹೇಗೆ ಆನೆ ಅಥವಾ ಛತ್ರಚಾಮರಾದಿಗಳನ್ನವಲಂಬಿಸಿರುವದಿಲ್ಲವೋ, ಹಾಗೆಯೇ ಬ್ರಹ್ಮನ ನಿಜಸ್ವರೂಪವು ಸೃಷ್ಟಿ ಮುಂತಾದವುಗಳಿಗೆ ಸಂಬಂಧಿಸಿಲ್ಲ. ಇದು ಮುಂದಿನ ಹೆಜ್ಜೆಯಾಗಿ ಕಾಣಿಸಲಾಗಿದೆ. ದಾರಿಕಾಣದವರಿಗೆ ಗುರಿ ತೋರಿಸಲು ಇಂಥ ಕ್ರಮವಾದ ಸೋಪಾನಮಾರ್ಗ ಅತ್ಯಾವಶ್ಯಕವಾಗಿದೆ. ಹೋಲಿಸಿ :-

ಏತಮ್ ಅನ್ನಮಯಮ್ ಆತ್ಮಾನಮ್ ಉಪಸಂಕ್ರಮ್ಯ.... ।

—ತೈ. ೩.೧೦.೧೫

ಉಪಾಯಾಃ ಶಿಕ್ಷಮಾಣಾನಾಂ ಬಾಲಾನಾಮುಪಲಾಲನಾಃ ।
ಅಸತ್ಯೇ ವರ್ತ್ಮನಿ ಸ್ಥಿತ್ವಾ ತತಃ ಸತ್ಯಂ ಸಮೀಹತೇ ॥

—ಭರ್ತೃಹರಿ; ವಾಕ್ಯಪದೀಯ ೨.೨೪೦

ಮೃಷಾ=ಇದಂ ಬಾಹ್ಯಪ್ರಮಾಣಗಮ್ಯಂ ವ್ಯಾವಹಾರಿಕವಸ್ತುಜಾತಂ ವ್ಯವಹಾರಕಾಲಮಾತ್ರವ್ಯಾಪ್ತಿ ।

೧೯. ಸೃಷ್ಟಿಸ್ಥಿತಿಯು ಬ್ರಹ್ಮದ ಸ್ವರೂಪ ಲಕ್ಷಣವಾಗದೆ ತಟಸ್ಥಲಕ್ಷಣವಾಗಿದೆ ಏಕೆ ? ಏಕೆಂದರೆ ಬ್ರಹ್ಮವು ಮಾತು ಮತ್ತು ಮನಸ್ಸನ್ನು ಮೀರಿದುದೆಂದು ತೋರಿಸಲಾಗಿದೆ--

ಯತೋ ವಾಚೋ ನಿವರ್ತಂತೇ ಅಪ್ರಾಪ್ಯಮನಸಾ ಸಹ ।
ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ ॥ —ತೈ. ೨.೯

ಪಂಚಕೋಶ—ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ. -- ತೈ. ೨.೧-೮

ಉತ್ತರೋತ್ತರವಾದ ಪ್ರತಿಯೊಂದು ಕೋಶವು ಅಂತರತರ ಮತ್ತು ಸೂಕ್ಷ್ಮತರವಾದುದು. ಆತ್ಮನು ಅಂತರತಮವಾದ ಆನಂದಮಯ ಕೋಶದಲ್ಲಿರುವನು. ಆದ್ದರಿಂದ ಈ ಕೋಶವು ಕೂಡ ಆತ್ಮವಾಗಲಾರದು. ಆನಂದಮಯಾಧಿಕರಣ ನೋಡಿರಿ. —ಬ್ರ. ಸೂ. ೧.೧.೧೨-೧೯ ಹೋಲಿಸಿ :—

'ಆನಂದಮಯ ಆತ್ಮಾ ಮೇ ಶುದ್ಧ್ಯಂತಾಮ್' ಇತಿ
ವಿರಜಾಹೋಮಮಂತ್ರೇ ಆನಂದಮಯಸ್ಯಾಪಿ ಶೋಧ್ಯತ್ವಪ್ರದರ್ಶನೇನ
ಆನಂದಮಯೋ ನ ಬ್ರಹ್ಮ । —ಕೈವಲ್ಯ ಕಲ್ಪದ್ರುಮ

ನೈವಾಯಮಾನಂದಮಯಃ ಪರಾತ್ಮಾ
ಸೋಪಾಧಿಕತ್ವಾತ್ ಪ್ರಕೃತೇರ್ವಿಕಾರಾತ್ ।

ಕಾರ್ಯತ್ವಹೇತ್ವೋಃ ಸುಕೃತಕ್ರಿಯಾಯಾ
ವಿಕಾರಸಂಘಾತಸಮಾಹಿತತ್ವಾತ್ ॥
— ಶಂಕರಾಚಾರ್ಯ, ವಿವೇಕಚೂಡಾಮಣಿ ೨೦೯

ಸತ್ಯಮಸತ್ಯಮ್—ಹೋಲಿಸಿ : –ತತ್ಸೃಷ್ಟ್ವಾ ತದೇವಾನುಪ್ರಾವಿಶತ್ ।
ತದನುಪ್ರವಿಶ್ಯ ಸಚ್ಚ ತ್ಯಚ್ಚಾಭವತ್ । —ತೈ. ೨.೬

೨೦. ಬ್ರಹ್ಮವಿದಾಪ್ನೋತಿ ಪರಮ್ । —ತೈ. ೨.೧

ಬ್ರಹ್ಮದ ಸ್ವರೂಪವು ಸತ್ ಎಂಬುದನ್ನು ಕೆಳಗಿನ ಶ್ರುತಿವಾಕ್ಯದಿಂದ ಕಾಣಬಹುದು.

ಅಸನ್ನೇವ ಸ ಭವತಿ ಅಸದ್ಬ್ರಹ್ಮೇತಿ ವೇದ ಚೇತ್ ।
ಅಸ್ತಿ ಬ್ರಹ್ಮೇತಿ ಚೇದ್ವೇದ ಸಂತಮೇನಂ ತತೋ ವಿದುಃ ॥ —ತೈ. ೨.೬

ತೈತ್ತಿರೀಯೋಪನಿಷತ್ತಿನ ಬ್ರಹ್ಮವಲ್ಲಿಯು ಸೃಷ್ಟಿಯ ವರ್ಣನೆಯೊಂದಿಗೆ ಪ್ರಾರಂಭಿಸುವದು :—

ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ । ಆಕಾಶಾತ್ ವಾಯುಃ । ವಾಯೋರಗ್ನಿಃ । ಅಗ್ನೇರಾಪಃ । ಅದ್ಭ್ಯಃ ಪೃಥಿವೀ । ಪೃಥಿವ್ಯಾ ಓಷಧಯಃ । ಓಷಧೀಭ್ಯೋ ಅನ್ನಮ್ । ಅನ್ನಾತ್ ಪುರುಷಃ । ಸ ವಾ ಏಷ ಪುರುಷಃ । ಅನ್ನರಸಮಯಃ । ತೈ. ೨.೧

ಆದರೆ ಇದು ಆ ಬ್ರಹ್ಮವು ಮನಸ್ಸು ಮತ್ತು ಮಾತುಗಳಿಗೆ ನಿಲುಕಲಾರದೆಂಬ ವರ್ಣನೆಯಿಂದ ಕೊನೆಗೊಳ್ಳುವದು. ಇದು ಸೃಷ್ಟಿಯ ವರ್ಣನೆಯುಳ್ಳವುಗಳನ್ನೊಳಗೊಂಡ ಎಲ್ಲ ಉಪನಿಷತ್ತುಗಳ ಉಪದೇಶವು ಬ್ರಹ್ಮನನ್ನು ಹೊಂದುವದರ ಸಲುವಾಗಿಯೇ ಎಂಬುದನ್ನು ಸಿದ್ಧಮಾಡಿ ತೋರಿಸುವದು [ಹೊರತು ಜಗತ್ತು ಸತ್ಯವೆಂದು ಹೇಳುವದಕ್ಕಲ್ಲ.]

೨೧. ಏಕ ಏವ—ಹೋಲಿಸಿ:—ಆತ್ಮಾ ವಾ ಇದಮೇಕ ಏವಾಗ್ರ ಆಸೀತ್ ।
ನಾನ್ಯತ್ ಕಿಂಚನ ಮಿಷತ್ । ಐ. ೧.೧
ಅಮೃತೋಭವತ್—ಸ ಏವಂ ವಿದ್ವಾನ್ ಅಸ್ಮಾತ್ . ಶರೀರ ಭೇದಾತ್
ಊರ್ಧ್ವ ಉತ್ಕ್ರಮ್ಯ....ಅಮೃತಃ ಸಮಭವತ್ । —ಐ. ೨.೬

ಹಿಂದಿನ ಪದ್ಯದಲ್ಲಿ ಉದಾಹೃತವಾದ ತೈತ್ತಿರೀಯ ಉಪನಿಷತ್ತು ಕೃಷ್ಣ-ಯಜುರ್ವೇದಕ್ಕೆ ಸೇರಿದೆ. ಇಲ್ಲಿ ಉದಾಹೃತವಾದ ಐತರೇಯ ಉಪನಿಷತ್ತು ಋಗ್ವೇದಕ್ಕೆ ಸೇರಿದೆ. ಕೆಳಗೆ ೨೩ನೆಯ ಪದ್ಯದಲ್ಲಿ ಉದಾಹೃತವಾದ ಛಾಂದೋಗ್ಯೋ

ಪನಿಷತ್ತು ಸಾಮವೇದಕ್ಕೆ ಸೇರಿದೆ. ೨೫ನೆಯ ಪದ್ಯದಲ್ಲಿ ಉದಾಹೃತವಾದ ಮಾಂಡೂಕ್ಯೋಪನಿಷತ್ತು ಅಥರ್ವಣವೇದಕ್ಕೆ ಸೇರಿದೆ. ಹೀಗೆ ಎಲ್ಲ ವೇದಗಳು ಬ್ರಹ್ಮದ ಅದ್ವಿತೀಯ ಸ್ವರೂಪವನ್ನು ತೋರಿಸುವದರಲ್ಲಿ ಏಕಮತವುಳ್ಳವುಗಳಾಗಿವೆ.

೨೨. ಸ್ಥೂಲಸೂಕ್ಷ್ಮವಿಭಾಗಿ—ದ್ವೇ ವಾವ ಬ್ರಹ್ಮಣೋರೂಪೇ ಮೂರ್ತಂ ಚೈವಾ ಮೂರ್ತಂ ಚ । —ಬೃ. ೨.೩.೧

ಪೃಥಿವಿ, ಜಲ, ತೇಜ ಇವು ಮೂರ್ತ [ಪರಿಚ್ಛಿನ್ನ ಪರಿಮಾಣವುಳ್ಳ] ವಸ್ತುಗಳಾದರೆ ವಾಯು ಮತ್ತು ಆಕಾಶ ಅಮೂರ್ತದ್ರವ್ಯಗಳಾಗಿವೆ.

ನೇತಿ—ಅಥಾತ ಆದೇಶೋ ನೇತಿ ನೇತಿ । —ಬೃ. ೨.೩.೬

ಸ ಏಷ ನೇತಿ ನೇತ್ಯಾತ್ಮಾ । —ಬೃ. ೩.೯.೨೬; ೪,೨.೪, ೪.೨೨, ೫.೧೫

ಬೃಹದಾರಣ್ಯಕೋಪನಿಷತ್ತು [ಶುಕ್ಲ] ಯಜುರ್ವೇದದ ಕಣ್ವ ಮತ್ತು ಮಾಧ್ಯಂದಿನ ಶಾಖೆಗೆ ಸೇರಿದೆ· ಸ್ಥೂಲ, ಸೂಕ್ಷ್ಮ ಎಂಬ ವಿಭಾಗಮಾಡಿ 'ನ ಇತಿ ನ ಇತಿ' ಎಂದು ಶ್ರುತಿಯೇ ಅದನ್ನು ಅಲ್ಲಗಳೆಯುತ್ತದೆ.

೨೩. ಸೃಷ್ಟಿರೀಕ್ಷಣಪೂರ್ವಿಕಾ— ಸದೇವ ಸೋಮ್ಯೇದಮಗ್ರ ಆಸೀತ್ ಏಕಮೇವಾದ್ವಿತೀಯಮ್ । ತದೈಕ್ಷತ್ ಬಹುಸ್ಯಾಂ ಪ್ರಜಾಯೇಯ ಇತಿ । —ಛಾ. ೬.೨.೧

ಮೃತ್ತಿಕಾದಿ ನಿದರ್ಶನಾನಿ—ಯಥಾ ಸೌಮ್ಯ ಏಕೇನ ಮೃತ್ಪಿಂಡೇನ ವಿಜ್ಞಾತೇನ ಸರ್ವಂ ಮನ್ಮಯಂ ವಿಜ್ಞಾತಂ ಸ್ಯಾತ್, ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್ । ಛಾ. ೬.೧.೪–೯

೨೪. ಪೃಥಜ ಮೃಷಾ—ಅಪಾಗಾದಗ್ನೇರಗ್ನಿತ್ವಂ . ತ್ರೀಣಿ ರೂಪಾಣೀತ್ಯೇವ ಸತ್ಯಮ್ । —ಛಾ. ೬.೪.೧

ಅನಯಾ ಪ್ರತ್ಯಕ್ಷೋಪಲಬ್ಧ್ಯಾ ಲೋಹಿತ ಶುಕ್ಲಕೃಷ್ಣಾನಿ ತ್ರೀಣಿರೂಪಾಣಿ, ತತೋ ವಾಯುಮಾತ್ರಮ್ ಆಕಾಶಮಾತ್ರಂ ಚೇತ್ಯನುಮೇಯಮ್ । ತತಃ ಪರಂ ಬ್ರಹ್ಮ ಏಕಮೇವಾದ್ವಿತೀಯಮ್ । ಬ್ರ. ಸೂ. ಶಾಂ. ಭಾ. ೨.೧.೧೫

೨೫. ತದ್ಧಿ ಸತ್ಯಮ್—ಹೋಲಿಸಿ :–

ಸತ್ಯಮೇವ ಜಯತೇ ನಾನೃತಂ ಸತ್ಯೇನ ಪಂಥಾ ವಿತತೋ ದೇವಯಾನಃ ।
ಯೇನಾಕ್ರಮನ್ತ್ಯೃಷಯೋ ಹ್ಯಾಪ್ತಕಾಮಾ ಯತ್ರ ತತ್ಸತ್ಯಸ್ಯ ಪರಮಂ ನಿಧಾನಮ್ । —ಮು. ೩.೧.೫

ವೇದನಮಾತ್ರತಃ—ಬ್ರಹ್ಮವೇದ ಬ್ರಹ್ಮೈವ ಭವತಿ । —ಮು. ೩.೨.೭

೨೬. ಮಾಂಡೂಕ್ಯೋಪನಿಷತ್ತು ಚೈತನ್ಯದ ನಾಲ್ಕು ದಶೆಗಳನ್ನು ತಿಳಿಸಿ ಅವುಗಳಲ್ಲಿ ಕ್ರಮವಾಗಿ ಪೂರ್ವಪೂರ್ವವಾದದ್ದು ಉತ್ತರೋತ್ತರದಲ್ಲಿ ಲಯವಾಗಿ ಕೊನೆಗೆ ತುರೀಯ ಮಾತ್ರ ಉಳಿಯುವ ಹಾಗೆ ತಿಳಿಹೇಳುತ್ತದೆ.

ಅದೃಶ್ಯಮ್ ಅವ್ಯವಹಾರ್ಯಮ್ ಅಗ್ರಾಹ್ಯಮ್ ಅಲಕ್ಷಣಮ್ ಅಚಿಂನ್ತ್ಯಮ್ ಅವ್ಯಪದೇಶಮ್ ಏಕಾತ್ಮಪ್ರತ್ಯಯಸಾರಮ್ ಪ್ರಪಂಚೋಪಶಮಮ್ ಶಿವಮ್ ಅದ್ವೈತಂ ಚತುರ್ಥಂ ಮನ್ಯಂತೇ ಸ ಆತ್ಮಾ ಸ ವಿಜ್ಞೇಯಃ ।

—ಮಾ. ೭

ನಿಹ್ನುತ-ವಾಚ್ಯ-ವಾಚಕ-ಭೇದಕಂ— ಜಗತ್ತನ್ನು (ತೋರಿಸುವ) ಓಂಕಾರದೊಂದಿಗೆ ಅಭಿನ್ನವಾಗಿ ಮಾಡಿ :—

ಭೂತಂ ಭವತ್ ಭವಿಷ್ಯದಿತಿ ಸರ್ವಮ್ ಓಂಕಾರ ಏವ, ಯಚ್ಚ ಅನ್ಯತ್ ತ್ರಿಕಾಲಾತೀತಂ ತದಪ್ಯೋಂಕಾರ ಏವ । —ಮಾ. ೧

೨೭. ತಟಸ್ಥಲಕ್ಷಣಂ- ಕಾದಾಚಿತ್ಕತ್ವೇ ಸತಿ ವ್ಯಾವರ್ತಕತ್ವಂ ತಟಸ್ಥಲಕ್ಷಣಮ್ ।

ಮನೆಯಮೇಲೆ ಕುಳಿತ ಕಾಗೆ ಆ ಸಮಯಕ್ಕೆ ಆ ಮನೆಯನ್ನು ಬೇರ್ಪಡಿಸುತ್ತದೆ. ಅದು ಆ ಮನೆಯೊಳಗಿನ ಮುಖ್ಯವಸ್ತು ಆಗಲಿ ಅಥವಾ ಅದರ ಗುರುತಾಗಲಿ ಆಗಿರುವದಿಲ್ಲ. ಅದೇ ರೀತಿಯಾಗಿ 'ಜನ್ಮಾದ್ಯಸ್ಯ ಯತಃ' ಇದು ಬ್ರಹ್ಮದ ತಟಸ್ಥ ಲಕ್ಷಣವಾಗಿದೆ.

ಲಕ್ಷ್ಯಸತ್ತ್ವ=ಲಕ್ಷ್ಯಸ್ಯ ಬ್ರಹ್ಮಣಃ ಪರಮಾರ್ಥಸತ್ಯತಾ ।

ಪರಿಚ್ಛಿದಾತ್ರಯವಾರಣ–ಬ್ರಹ್ಮವು ಕಾಲ ದಿಕ್ಕು ಅಥವಾ ಯಾವದೇ ವಸ್ತುವಿನಿಂದ ಸೀಮಿತವಾಗಿಲ್ಲ. ಹೋಲಿಸಿ:—

ಕಾಲಪರಿಚ್ಛೇದಾಭಾವೋ ನಿತ್ಯತ್ವಂ, ದೇಶಪರಿಚ್ಛೇದಾಭಾವೋ ವಿಭುತ್ವಂ, ವಸ್ತುಪರಿಚ್ಛೇದಾಭಾವೋ ಪೂರ್ಣತ್ವಮ್ ।

—ಅದ್ವೈತಸಿದ್ಧಿ ೧.೫ [ದ್ವಿತೀಯ ಮಿಥ್ಯಾತ್ವ-ನಿರೂಪಣಮ್]

ತತ್ರ ದೇಶತಃ ಪರಿಚ್ಛಿನ್ನತ್ವಮ್ ಅತ್ಯಂತಾಭಾವ-ಪ್ರತಿ-ಯೋಗಿತ್ವಂ, ಕಾಲತಃ ಪರಿಚ್ಛಿನ್ನತ್ವಂ ಧ್ವಂಸಪ್ರತಿಯೋಗಿತ್ವಮ್, ವಸ್ತುತಃ ಪರಿಚ್ಛಿನ್ನತ್ವಮ್, ಅನ್ಯೋನ್ಯಾಭಾವಪ್ರತಿಯೋಗಿತ್ವಮ್ ।

—ಅದ್ವೈತಸಿದ್ಧಿಃ ೧.೧೨ [ಪರಿಚ್ಛಿನ್ನತ್ವ-ನಿರುಕ್ತಿಃ]

೨೪. ವಾರಣೀಯವಿಧಾ— ಅಸತ್ಯತ್ವ, ಜಡತ್ವ, ಪರಿಚ್ಛಿನ್ನತ್ವ ಮುಂತಾದವುಗಳು ಬ್ರಹ್ಮದ ವಿಷಯದಲ್ಲಿ ನಿಷಿದ್ಧವಾಗಿವೆ.

ಪೂರ್ವವ್ ಅವಾದಿಷಮ್— ಈ ಅಂಶವು ಮೇಲಿನ ೨.೧೪ನೇ ಪದ್ಯದಲ್ಲಿ ವಿವರಿಸಲಾಗಿದೆ.

೨೯ ನೀಲಿಮಾಧಾರ-ಭಾವಾತ್—ಸೂಕ್ಷ್ಮ ಆಕಾಶವು ವಿಶದವಾಗಿ ಕಾಣುವ ನೀಲತ್ವಕ್ಕೆ ಹೇಗೆ ಆಶ್ರಯವಾಗಿದೆಯೋ ಹಾಗೆಯೇ ಸೂಕ್ಷ್ಮವಾದ ಬ್ರಹ್ಮವು ಒಡೆದು ಕಾಣುವ ಈ ಜಗತ್ತಿಗೆ ಆಧಾರವಾಗಿದೆ.

ಅವ್ಯಾವೃತ್ತೇ :— ಬ್ರಹ್ಮವು ಇತರ ಭೇದವಿಲ್ಲದಿರುವದರಿಂದ

ಅವೃತ್ತೇ :— ಬ್ರಹ್ಮಕ್ಕೆ ಯಾವುದೇ ಅಧಿಕರಣಬೇಕಾಗದಿರುವದರಿಂದ

ಸಾಕ್ಷೀ-ಭಾವಾತ್—ಚಕ್ಷುಷಃ ಸಾಕ್ಷೀ, ಶ್ರೋತ್ರಸ್ಯ ಸಾಕ್ಷೀ, ವಾಚಃ ಸಾಕ್ಷೀ, ಮನಸಃ ಸಾಕ್ಷೀ, ಬುದ್ಧೇಃ ಸಾಕ್ಷೀ, ಪ್ರಾಣಸ್ಯ ಸಾಕ್ಷೀ, ತಮಸಃ ಸಾಕ್ಷೀ, ಸರ್ವಸ್ಯ ಸಾಕ್ಷೀ । —ನೃಸಿಂಹ, ಉತ್ತರತಾಪನೀ ಉಪ. ೨

ಅನ್ಯದ್ರಷ್ಟುಃ ನಿಷೇಧಾತ್— ನಾನ್ಯೋऽತೋऽಸ್ತಿ ದ್ರಷ್ಟಾ. ನಾನ್ಯೋऽತೋऽಸ್ತಿ ಶ್ರೋತಾ, ನಾನ್ಯೋऽತೋऽಸ್ತಿ ಮನ್ತಾ, ನಾನ್ಯೋऽತೋऽಸ್ತಿ ವಿಜ್ಞಾತಾ।

—ಬೃ. ೩.೭.೨೩

೩೦. ಪೂರ್ವದ ಪದ್ಯದಲ್ಲಿ ಬ್ರಹ್ಮವು ಸತ್ ಸ್ವಭಾವದ್ದೆಂದು ತಿಳಿಸಲಾಯಿತು. ಈ ಪದ್ಯವು ಅದು ಚಿತ್ ಸ್ವಭಾವದ್ದೆಂದು ತಿಳಿಸುತ್ತದೆ. ಮುಂದಿನ ಪದ್ಯ ಇದರ ಸ್ವರೂಪಆನಂದವೆಂಬುದನ್ನು ತಿಳಿಹೇಳುತ್ತದೆ.

ಅಖಿಲವಶಿತಯಾ— ಏತಸ್ಯೈವಾಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತಃ । —ಬೃ. ೩.೮.೯

ಭೀಷಾಸ್ಮಾದ್ವಾತಃ ಪವತೇ ಭಿಷೋದೇತಿ ಸೂರ್ಯಃ ।
ಭೀಷಾಸ್ಮಾದಗ್ನಿಶ್ಚೇಂದ್ರಶ್ಚ ಮೃತ್ಯುರ್ಧಾವತಿ ಪಂಚಮ ಇತಿ ॥

—ತೈ. ೨.೮.೧

ಕಾಮಭಿಧ್ಯೋಪದೇಶಾತ್-ಸೋऽಕಾಮಯತ ಬಹುಸ್ಯಾಂಪ್ರಜಾಯೇಯೇತಿ।

—ತೈ. ೨.೬.೧

ಶಶಿ-ತಪನ....

ನ ತತ್ರ ಸೂರ್ಯೋ ಭಾತಿ ನ ಚಂದ್ರ-ತಾರಕಂ
ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿ: ।
ತಮೇವ ಭಾನ್ತಮನುಭಾತಿ ಸರ್ವಂ
ತಸ್ಯ ಭಾಸಾ ಸರ್ವಮಿದಂ ವಿಭಾತಿ ॥

ಕಠ. ೫.೧೫, ಶ್ವೇ. ೬.೧೪, ಮು. ೨-೨-೧೧

ಅಧ್ಯಕ್ಷ-ಸಾಕ್ಷಿತ್ವ-ವಾದಾತ್—

ಏಕೋ ದೇವಃ ಸರ್ವಭೂತೇಷು ಗೂಢಃ
ಸರ್ವವ್ಯಾಪೀ ಸರ್ವಭೂತಾಂತರಾತ್ಮಾ ।
ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ
ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥ ಶ್ವೇ. ೬.೧೧

೩೧. ನಿಧಿ-ತದ್ಯಥಾ ಹಿರಣ್ಯನಿಧಿಂ ನಿಹಿತಮ್ ಅಕ್ಷೇತ್ರಜ್ಞಾ ಉಪರ್ಯುಪರಿ ಸಂಚರನ್ತೋ ನ ವಿಂದೇಯುಃ ಏವಮೇವ ಇಮಾಃ ಸರ್ವಾಃ ಪ್ರಜಾಃ ಅಹರಹರ್ಬ್ರಹ್ಮ ಗಚ್ಛನ್ತ್ಯ: ಏವಂ ಬ್ರಹ್ಮಲೋಕಂ ನ ವಿಂದನ್ತಿ ಅನೃತೇನ ಹಿ ಪ್ರತ್ಯೂಢಾಃ ।

ಛಾ. ೮.೩.೨

ನಿಲಯ—ತದ್ಯಥಾ ಶ್ಯೇನೋ ವಾ ಸುಪರ್ಣೋ ವಾ ವಿಪರಿಪತ್ಯ ಶ್ರಾಂತಃ ಸಂಹತ್ಯ ಪಕ್ಷೌ ಸಲ್ಲಯಾಯೈವ ಧ್ರಿಯತೇ ಏವಮೇವ ಅಯಂ ಪುರುಷಃ ಏತಸ್ಮಾ ಅನ್ತಾಯ ಧಾವತಿ, ಯತ್ರ ಸುಪ್ತೋ ನ ಕಂಚನ ಕಾಮಂ ಕಾಮಯತೇ ನ ಕಂಚನ ಸ್ವಪ್ನಂ ಪಶ್ಯತಿ । ಬೃ. ೪.೩.೧೯

ವಧೂ—ತದ್ಯಥಾ ಪ್ರಿಯಾ ಸ್ತ್ರಿಯಾ ಸಂಪರಿಷ್ವಕ್ತೋ ನ ಕಂಚನ ಬಾಹ್ಯಂ ವೇದ ನಾಂತರಮ್, ಏವಮೇವಾಯಂ ಪುರುಷಃ ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದ ನಾಂತರಂ, ತದ್ವಾ ಅಸ್ಯ ಏತತ್ ಆತ್ಮಕಾಮಮ್ ಅಕಾಮಂ ರೂಪಂ ಶೋಕಾಂತರಮ್ । ಬೃ. ೪.೩.೨೧

ರಸತಯಾ—ರಸೋ ವೈ ಸಃ । ರಸಂ ಹ್ಯೇವಾಯಂ ಲಬ್ಧ್ವಾ ಆನಂದೀ ಭವತಿ । ತೈ. ೨.೬.೧

೩೨. ಮುಖ್ಯಪ್ರೇಮಾಸ್ಪದತ್ವಾತ್—ನ ವಾ ಅರೇ ಸರ್ವಸ್ಯ ಕಾಮಾಯ ಸರ್ವಂ ಪ್ರಿಯಂ ಭವತಿ, ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ ।

ಬೃ. ೨.೪.೫; ೪.೫.೬

ಬ್ರಹ್ಮಾಂಶತ್ವಪ್ರವಾದಾತ್—ಯಥಾಗ್ನೇಃ ಕ್ಷುದ್ರಾ ವಿಸ್ಫುಲಿಂಗಾ ವ್ಯುಚ್ಚ-ರಂತಿ, ಏವಮೇವ ಅಸ್ಮಾದಾತ್ಮನಃ ಸರ್ವೇ ಏವ ಆತ್ಮಾನೋ ವ್ಯುಚ್ಚರಂತಿ ।
ಬೃ. ೨.೧-೧೦

೩೩. ದೃಗ್ಭೇದೇ ಯನ್ನ ಮಾನಮ್—ನಾನ್ಯೋಽತೋಽಸ್ತಿದ್ರಷ್ಟಾ ।
ಬೃ. ೩.೭.೭೩

ಸಮಾ ದೃಕ್—ಸತ್ಯಪಿ ದೃಗಂತರೇ ದೃಕ್ತ್ವೇನ ತುಲ್ಯಾ ದೃಕ್ । ನ ಹಿ ಸಮಾನ ಪ್ರದೀಪಯೋಃ ವಿಷಯವಿಷಯೀಭಾವೋ ದೃಷ್ಟಃ । –ಕೈವಲ್ಯಕಲ್ಪದ್ರುಮ

ನಿರ್ವಿಕಾರ–ಜೀವಾತ್ಮನು ದೇಹದ ಶೈಶವದಲ್ಲಾಗಲಿ, ಕೌಮಾರ್ಯದಲ್ಲಾಗಲಿ ಯೌವನದಲ್ಲಾಗಲಿ ವಾರ್ಧಕ್ಯದಲ್ಲಾಗಲಿ ಬದಲಾಗುವದಿಲ್ಲ.

೩೪. ಸುಪ್ತಿಸೌಖ್ಯಾದಿ-ಸಾಕ್ಷೀ–ಜೀವಾತ್ಮನು ನಿದ್ರೆಯಲ್ಲಿ ಸುಖ, ಅಜ್ಞಾನ ಮುಂತಾದವುಗಳಿಗೆ ಸಾಕ್ಷಿಯಾಗಿರುವನು.

ದ್ರಷ್ಟುಃ ದೃಷ್ಟೇಃ ಅಲೋಪೇ ಶ್ರುತಿಃ—ನ ಹಿ ದ್ರಷ್ಟುಃ ದೃಷ್ಟೇಃ ವಿಪರಿ-ಲೋಪೋ ವಿದ್ಯತೇ । ಬೃ. ೪.೩.೨೩

೩೫. ತವ ತತ್ ರೋತ್ಸ್ಯತಿ–ಸ ಯೋಽನ್ಯಮಾತ್ಮನಃ ಪ್ರಿಯಂ ಬ್ರುವಾಣಂ ಬ್ರೂಯಾತ್ ಪ್ರಿಯಂ ರೋತ್ಸ್ಯತೀತಿ ಈಶ್ವರೋ ಹ ತಥೈವ ಸ್ಯಾತ್ ।
ಬೃ. ೧.೪.೮

ಸರ್ವದಾ ಸ್ಯಾಮ್ — ಜೀವಾತ್ಮನು ಆನಂದಸ್ವಭಾವದವನಾಗಿರದಿದ್ದರೆ ಯಾವನೂ ಚಿರವಾಗಿರಲು ಬಯಸುತ್ತಿರಲಿಲ್ಲ.

೩೬. ವಸ್ತುನೋ ಲಕ್ಷಣೈಕ್ಯೇ—ಸ್ವರೂಪಲಕ್ಷಣ–ಅಭೇದೇ (ಅಧಿಗತೇ ಸತಿ) ಆದ್ಯಂತಾವೇಕ್ಷಣಾದ್ಯೈಃ–ಉಪಕ್ರಮೋಪಸಂಹಾರವಿಚಾರಣಾದ್ಯೈಃ

೩೭. ಯತ್ ತಸ್ಮಿನ್ ಪ್ರವಿಷ್ಟಂ ಜೀವ ಆಸೀತ್- ಅನೇನ ಜೀವೇನಾತ್ಮನಾ ಅನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ । ಛಾ.೬ ೩.೨

೩೮. ಸಾಮಾನಾಧಿಕರಣ್ಯ— ಒಂದೇ ಅಧಿಕರಣದಿಂದಾಗುವ ವ್ಯಾಕರಣ ವಿಶೇಷ. ಒಂದು ವಾಕ್ಯದಲ್ಲಿ ಎರಡು ಶಬ್ದಗಳಿಗೆ ಒಂದೇ ವಿಭಕ್ತಿ ಇದ್ದರೆ ಈ ಕೆಳಗಿನ ಪಕ್ಷಾಂತರಗಳು ಸಂಭವಿಸಬಲ್ಲವು:-

೧) ಇತರಗ್ರಹಣ—ಚೋರೋಽಯಂ ಸ್ಥಾಣುಃ (ಕಳ್ಳನೆಂದು ನೀನೇನು ಬಗೆದಿದ್ದಿಯೋ ಅದು ಕೇವಲ ಒಂದು ಮೋಟುಮರ)

೨) ಅಧ್ಯಾಸ—ಸಿಂಹೋಮಾಣವಕಃ (ಈ ಹುಡುಗ ಸಿಂಹ (ನಂತಿರುವವನು)

೩) ವಿಶೇಷಣ–ನೀಲಮ್ ಉತ್ಪಲಮ್ (ನೀಲಕಮಲ)

೪) ಅಭೇದಗ್ರಹಣ–ಸೋಽಯಂ ದೇವದತ್ತಃ (ಆ ದೇವದತ್ತನೇ ಇವನು)

ತತ್ತ್ವಮಸಿ (ಅದು ನೀನಿರುವಿ) ಈ ವಿಷಯದಲ್ಲಿ ಜೀವಬ್ರಹ್ಮರಲ್ಲಿಯ ಇತರ ಗ್ರಹಣವು ಸಾಕ್ಷಾತ್ಕಾರದ ಸಲುವಾಗಿ ಉಪಯೋಗವಿಲ್ಲದ್ದು.
'ಮನೋ ಬ್ರಹ್ಮ' ಇತಿ ಉಪಾಸೀತ (ಮನಸ್ಸು ಬ್ರಹ್ಮವೆಂದು ಉಪಾಸನೆ ಮಾಡಬೇಕು) ಎಂಬಲ್ಲಿರುವಂತೆ ಇಲ್ಲಿ ಅಧ್ಯಾಸದ ಪ್ರಸಂಗವೂ ಇಲ್ಲ. ಜೀವಾತ್ಮನು ಸಂಸಾರದಲ್ಲಿರುವನು. ಆದರೆ ಬ್ರಹ್ಮವು ಹಾಗಲ್ಲ ಹೀಗೆ ಎರಡೂ ಸಂಪೂರ್ಣವಾಗಿ ಭಿನ್ನ ಧರ್ಮಗಳುಳ್ಳವು. ಕಾರಣ ಒಂದು ಇನ್ನೊಂದರ ವಿಶೇಷಣವಾಗಲಾರದು. ಹೀಗೆ ನಮಗೆ ಉಳಿದಿರುವುದೊಂದೇ ಪಕ್ಷ 'ಎರಡೂ ಒಂದು' ಎಂಬುದು.

೩೯. 'ತತ್' ಮತ್ತು 'ತ್ವಮ್' ಈ ಎರಡೂ ಶಬ್ದಗಳು ಒಂದೇ ಆದ ಅಖಂಡಾರ್ಥವನ್ನು ಬೋಧಿಸುತ್ತವೆ. ಇದು ವಾಚ್ಯಾರ್ಥದಿಂದ ಎಂದರೆ-ಅಲ್ಲ. ಅದು ಹಾಗೆ ಸಾಧ್ಯವೇ ಇಲ್ಲ. ಹಾಗಾದರೆ ಅದು ಲಕ್ಷಣಾದಿಂದವೆಂದರೆ ಯಾವತರಹದ ಲಕ್ಷಣಾ–?

'ಗಂಗಾಯಾಂ ಘೋಷಃ' ಎಂಬಲ್ಲಿದ್ದಂತೆ ಜಹಲ್ಲಕ್ಷಣೆಯೋ? ಅಥವಾ ಯಃಷ್ಟೀಃ ಪ್ರವೇಶಯ ಎಂಬಲ್ಲಿಯಂತೆ ಅಜಹಲ್ಲಕ್ಷಣೆಯೋ? ಅಥವಾ ಸೋಽಯಂ ದೇವದತ್ತಃ ಎಂಬಲ್ಲಿಯಂತೆ ಜಹದಜಹಲ್ಲಕ್ಷಣೆಯೋ?

ಇದು ಕೊನೆಯತರಹದ್ದಾದರೆ ಅದು ಕೇವಲ 'ತತ್' ಪದದಲ್ಲಿದೆಯೋ ಅಥವಾ 'ತ್ವಂ' ಪದದಲ್ಲಿದೆಯೋ ಅಥವಾ ಎರಡೂ ಪದಗಳಲ್ಲಿದೆಯೋ? ಇದಕ್ಕೆ ಉತ್ತರ ಈ ಮತ್ತು ಮುಂದಿನ ಪದ್ಯಗಳಲ್ಲಿ ಕೊಡಲಾಗಿದೆ. ಉಪಯೋಗ ಮುಂತಾದ ಶಬ್ದಗಳನ್ನು ಈ ಕೆಳಗಿನಂತೆಯೂ ಅರ್ಥಮಾಡಬಹುದು.

ಉಪಯೋಗಃ— ಆಕಾಂಕ್ಷಾ (ಮೋಕ್ಷವಿಷಯೇ)

ಮೂಲಮ್— ಲಕ್ಷಣಾಬೀಜಮ್ ತಾತ್ಪರ್ಯಮ್

ಘಟನಾ— ಲಕ್ಷಣಾನಿರ್ವಾಹಕಃ ಸಂಬಂಧವಿಶೇಷಃ

ಆದಿ— ಲಕ್ಷಣಾಫಲಮ್

ಪರಸ್ಪರಾರ್ಥಘಟಿತೇ— 'ಯಷ್ಟೀಃ ಪ್ರವೇಶಯ' ಎಂಬಲ್ಲಿ 'ಯಷ್ಟೀ' ಎಂದರೆ 'ಯಷ್ಟಿವಿಶಿಷ್ಟಃ ಪುರುಷಃ' (ದಂಡಧಾರಿಯಾದ ಮನುಷ್ಯ). ಆದರೆ ತತ್ತ್ವಮಸಿ ಎಂಬಲ್ಲಿ ಮಾತ್ರ 'ತದ್ವಿಶಿಷ್ಟಃ ತ್ವಂ' ಎಂದು ಅರ್ಥಮಾಡಲು ಸಾಧ್ಯವೇ ಇಲ್ಲ.

೪೦. ಅಧ್ಯವಸಾನಲಿಂಗವ್—ಜಹದಜಹಲ್ಲಕ್ಷಣೆ (ಭಾಗಲಕ್ಷಣೆ) ಯನ್ನಾಶ್ರಯಿಸಿ ಕೇವಲ 'ತತ್'ಪದ ಅಥವಾ 'ತ್ವಂ' ಪದಕ್ಕೆ ಅಖಂಡಾರ್ಥ ಬರಲು ಸರಿಯಾದ ಹೇತು ಸಿಗಲಾರದು. ಆದ್ದರಿಂದ ಭಾಗಲಕ್ಷಣೆಯನ್ನು ಎರಡೂ ಪದಗಳಿಗೆ ಒಪ್ಪಲೇ ಬೇಕು.

೪೧. ನಚ ಭಾವಿನಃ ಅಸ್ತಿತಾ– ('ತತ್ತ್ವಮಸಿ'ಯಲ್ಲಿ) 'ಅಸಿ' ಕ್ರಿಯಾಪದವು ವರ್ತಮಾನಕಾಲದಲ್ಲಿದೆ. ಮುಂದೆ ಜೀವಾತ್ಮನು ಪರಮಾತ್ಮನೊಂದಿಗೆ ಒಂದಾಗುವ ನೆಂಬ ಕಲ್ಪನೆಯಿಂದ ಶ್ರುತಿಗೆ ಹಾನಿಯಾಗಿ ಅಶ್ರುತವಾದುದನ್ನು ಅಂಗೀಕರಿಸಬೇಕಾಗುವದು (ಅಶ್ರುತಗತಿ).

೪೨. ಧರ್ಮನಿಚಯಂ ವಿರೋಧಿನಮ್—ಹೋಲಿಸಿ

ಐಕ್ಯಂ ತಯೋರ್ಲಕ್ಷಿತಯೋರ್ನ ವಾಚ್ಯಯೋಃ
ನಿಗದ್ಯತೇಽನ್ಯೋನ್ಯ ವಿರುದ್ಧಧರ್ಮಿಣೋಃ ।
ಖದ್ಯೋತ ಭಾನ್ವೋರಿವ ರಾಜಭೃತ್ಯಯೋಃ
ಕೂಪಾಂಬುರಾಶ್ಯೋಃ ಪರಮಾಣು-ಮೇರ್ವೋಃ ॥

—ವಿವೇಕಚೂಡಾಮಣಿ—೨೪೨

ತನು–ಬುದ್ಧಿ–ಸಾಕ್ಷಿ— 'ತ್ವಂ' ಎಂದರೆ ದೇಹ ಹಾಗೂ ಮನಸ್ಸಿಗೆ ಸಾಕ್ಷಿಯಾದ ಜೀವಾತ್ಮನೆಂದರ್ಥ. ('ಸೋಽಯಂದೇವದತ್ತಃ') ಎಂಬಲ್ಲಿ 'ಸಃ' ಮತ್ತು 'ಅಯಂ' ಈ ಎರಡೂ ಶಬ್ದಗಳೂ ಒಬ್ಬನನ್ನೇ ಹೇಗೆ ತಿಳಿಸುತ್ತವೆಯೋ ಹಾಗೆಯೇ 'ತತ್' ಮತ್ತು 'ತ್ವಂ' ಇವು ಒಂದೇ ವ್ಯಕ್ತಿಯನ್ನು ಸೂಚಿಸುತ್ತವೆ.

ಹೋಲಿಸಿ— ತತ್ತ್ವಮಸ್ಯಾದಿ—ವಾಕ್ಯಂ ಅಖಂಡಾರ್ಥನಿಷ್ಠಮ್ ಅಕಾರ್ಯಕಾರಣದ್ರವ್ಯಮಾತ್ರವೃತ್ತಿತ್ವೇ ಸತಿ ಸಾಮಾನಾಧಿಕೃತತ್ವಾತ್ ಸೋಽಯಂ ದೇವದತ್ತ ಇತಿವತ್ । — ಅಖಂಡಾನಂದ, ತತ್ತ್ವದೀಪನ, ಪು. ೨೬೧

೪೩. ಒಂದುವೇಳೆ ಅಖಂಡಾರ್ಥವೇ ತಾತ್ಪರ್ಯವಾಗಿದ್ದರೆ ಅಥವಾ ಉದ್ದೇಶ್ಯವಾಗಿದ್ದರೆ ಒಂದು ಶಬ್ದವು ಸಾಕಾಗುವದೆಂದರೆ ಎರಡು ಶಬ್ದಗಳ ಅವಶ್ಯ-

ಕತೆ ಏನು? ಇಂತಹ ಪ್ರಶ್ನೆಗಳಿಗೆ ಈ ಪದ್ಯದಲ್ಲಿ ಉತ್ತರಿಸಲಾಗಿದೆ. ಒಂದು ವೇಳೆ ಒಂದೇ ಶಬ್ದವಿದ್ದಿದ್ದರೆ ವಾಕ್ಯವು— ತತ್ ಅಸ್ತಿ (ಅದು ಇರುತ್ತದೆ) ಅಥವಾ ತ್ವಂ ಅಸಿ (ನೀನಿರುತ್ತಿ) ಎಂದಾಗಬಹುದಾಗಿತ್ತು. ಆದರೆ ಇದು ಯಾವ ಗುರಿಯನ್ನೂ ತೋರಿಸಲಾರದು.

'ತ್ವಂ' ಶಬ್ದವು ಬ್ರಹ್ಮವು ನಿಲುಕಲಾರದಷ್ಟು ದೂರವಿದೆ ಎಂಬ ಭಾವವನ್ನು ದೂರಮಾಡುತ್ತದೆ. 'ತತ್' ಎಂಬ ಶಬ್ದವು ಜೀವಾತ್ಮನು ಅಸಂಪೂರ್ಣ ಮತ್ತು ದುಃಖಿತ ಎಂಬ ಜ್ಞಾನವನ್ನು ನಿವಾರಿಸುತ್ತದೆ. ಹೀಗೆ ಎರಡೂ ಶಬ್ದಗಳು ಪರಸ್ಪರ ಸಹಾಯಕವಾಗಿವೆ. ಹೀಗೆ ವಿರುದ್ಧಾಂಶಗಳನ್ನು ತೆಗೆಯುವದರಿಂದ ಅಭೇದವು ಸುಲಭವಿದೆ.

೪೪. ಅಸಂಸರ್ಗಿ–ಸತ್ಯಾರ್ಥತಾ— ಅನ್ಯಸಂಸರ್ಗಾಬಾಧಿತವಸ್ತು-ಸ್ವರೂಪತಾ । ಯಥಾ ಸಾಸ್ನಾದಿಮತಿ ಗೌಃ ಅವ್ಯಾಪ್ತಿವಾರಣಾಯ ।

ಅನನ್ಯಾರ್ಥತಾ– ಏಕಪದಾರ್ಥಾನತಿರಿಕ್ತತಾ । ಯಥಾ 'ದಂಡೀ ಪುರುಷಃ' ಅತಿವ್ಯಾಪ್ತಿವಾರಣಾಯ ।

ಅಖಂಡಾರ್ಥತಾ— ಇದನ್ನು ಅಮಲಾನಂದರು ಕಲ್ಪತರುವಿನಲ್ಲಿ ಹೀಗೆ ವಿವರಿಸಿದ್ದಾರೆ—

ಅವಿಶಿಷ್ಟಮಪರ್ಯಾಯಾನೇಕಶಬ್ದಪ್ರಕಾಶಿತಮ್ ।
ಏಕಂ ವೇದಾಂತ-ನಿಷ್ಣಾತಾ ಅಖಂಡಂ ಪ್ರತಿಪೇದಿರೇ ॥

ಜನ್ಮಾದ್ಯಧಿಕರಣ (ನಿರ್ಣಯಸಾಗರ ಪ್ರಕಾಶನ. ಪು. ೯೩) ಅಖಂಡಾರ್ಥ-ವನ್ನು ಚಿತ್ಸುಖರು ತತ್ತ್ವಪ್ರದೀಪಿಕಾದಲ್ಲಿ ಹೀಗೆ ವಿವರಿಸಿದ್ದಾರೆ.

ಸಂಸರ್ಗಾಸಂಗಿಸಮ್ಯಗ್ಧೀಹೇತುತಾ ಯಾ ಗಿರಾಮಿಯಮ್ ।
ಉಕ್ತಾಖಂಡಾರ್ಥತಾ ಯದ್ವಾ ತತ್ಪ್ರಾತಿಪದಿಕಾರ್ಥತಾ ॥

ಇದು ಧರ್ಮರಾಜಾಧ್ವರಿಯವರಿಂದ ವೇದಾಂತ ಪರಿಭಾಷೆಯಲ್ಲಿ (ಪು. ೨೯. ೯೪೨) ಉದಾಹರಿಸಲಾಗಿದೆ–ಮತ್ತು ಅದರ ವ್ಯಾಖ್ಯಾ ಹೀಗಿದೆ—
ಪ್ರಾತಿಪದಿಕಾರ್ಥಮಾತ್ರಪರತ್ವಮ್ ಇತಿ ಚತುರ್ಥಪಾದಾರ್ಥಃ ।

ಏಕದೇಶ–ಪ್ರರೂಢಾಃ ವೃಕ್ಷಾಃ ವನಮ್— ಇದು ಅಖಂಡಾರ್ಥಕ್ಕೆ ಇನ್ನೊಂದು ಉದಾಹರಣೆ. ವನವೆಂದರೆ ಒಂದೆಡೆ ಕೂಡಿಬೆಳೆದ ಗಿಡಗಳ ದೊಡ್ಡ ಗುಂಪು. ಹೀಗೆ 'ವನ' ಶಬ್ದಕ್ಕೆ ಸಮೂಹಾರ್ಥವಿದೆ ಎಲ್ಲ ಗಿಡಗಳೂ ಕೂಡಿ ವನವಾಗುವವು.

೪೫. ರಾತ್ರಿಯಲ್ಲಿ ಒಬ್ಬ ಅಜ್ಞನು ಆಕಾಶದಲ್ಲಿ ಹೊಳೆಯುವ ಅಸಂಖ್ಯ-ಚಿಕ್ಕೆಗಳನ್ನು ನೋಡಿ ಚಂದ್ರ ಯಾರು ಎಂದು ಕೇಳುತ್ತಾನೆ. ತಿಳಿದವನು 'ಎಲ್ಲರಿಗಿಂತ ಹೆಚ್ಚು ಬೆಳಕು ಯಾರಲ್ಲಿದೆಯೋ ಅವನೇ ಚಂದ್ರ' ಎನ್ನುತ್ತಾನೆ. ಆ ಅಜ್ಞನಿಗೆ ಕೇವಲ ಚಂದ್ರನನ್ನು ನೋಡುವದರಲ್ಲಿ ಅಭಿನಿವೇಶವಿರುತ್ತದೆ ಹೊರತು ಪ್ರಕೃಷ್ಟಪ್ರಕಾಶತ್ವಾದಿಗುಣಗಳಲ್ಲಾಗಲಿ, ಚಂದ್ರತ್ವಾದಿಧರ್ಮಗಳಲ್ಲಾಗಲಿ ಅಥವಾ ಅವುಗಳ ಪರಸ್ಪರ ಸಂಬಂಧ ಅಥವಾ ಭೇದ ಮುಂತಾದವುಗಳಲ್ಲಾಗಲಿ ಇರುವದಿಲ್ಲ. ಆದಕಾರಣ ಅವನಿಗೆ ಕೇವಲ ಜಾಣನ ಆ ಸರಿಯಾದ ಉತ್ತರದಿಂದಲೇ ಚಂದ್ರ-ನಾರೆಂಬುದು ತಿಳಿದುಹೋಗುತ್ತದೆ.

ಅದೇ ರೀತಿಯಾಗಿ 'ಸತ್ಯಂ ಜ್ಞಾನಮನಂತಂ ಬ್ರಹ್ಮ' 'ಅಯಮಾತ್ಮಾ ಬ್ರಹ್ಮ' ಮುಂತಾದ ಉಪನಿಷದ್ವಾಕ್ಯಗಳು ಕೇವಲ ಬ್ರಹ್ಮವೊಂದನ್ನೇ ತಿಳಿಸಿ ಕೊಡುತ್ತವೆ ಹೊರತು ವೈವಿಧ್ಯ-ಸ್ವಭಾವವನ್ನಾಗಲಿ ನಾನಾತ್ವವನ್ನಾಗಲಿ ತಿಳಿಸುವದಿಲ್ಲ.

೪೬. ಋಗ್ವೇದಕ್ಕೆ ಸೇರಿದ 'ಪ್ರಜ್ಞಾನಂಬ್ರಹ್ಮ' (ಐ. ೫. ೩) ಎಂಬ ಪ್ರಸಿದ್ಧ ಮಹಾವಾಕ್ಯವನ್ನು ಈ ಶ್ಲೋಕವು ವಿವರಿಸುತ್ತದೆ. ಬ್ರಹ್ಮವು ಈ ಜಗತ್ತನ್ನು ಸೃಷ್ಟಿಸಿ ಅದರಲ್ಲಿ ಜ್ಞಾನೇಂದ್ರಿಯಗಳಿಗೆ.ಕರ್ಮೇಂದ್ರಿಯಗಳಿಗೆ ಮತ್ತು ಅಹಂಕಾರಕ್ಕೆ ಆಶ್ರಯವಾದ ಆತ್ಮನಾಗಿ ಪ್ರವೇಶಿಸುವದು. ಕಬ್ಬಿಣದ ತುಂಡುಗಳನ್ನು ಕ್ರಿಯಾಪರ ವಾಗಿಸುವ ಲೋಹ ಚುಂಬಕದಂತೆ ಆತ್ಮನು ಇಂದ್ರಿಯಗಳನ್ನು ಕ್ರಿಯೋನ್ಮುಖವಾಗಿ ಮಾಡುತ್ತಾನೆ.

೪೭. ಈ ಶ್ಲೋಕದಲ್ಲಿ ಶುಕ್ಲಯಜುರ್ವೇದಕ್ಕೆ ಸೇರಿದ ಬೃಹದಾರಣ್ಯಕ ಉಪನಿಷತ್ತಿನ 'ಅಹಂಬ್ರಹ್ಮಾಸ್ಮಿ' ಈ ಇನ್ನೊಂದು ಮಹಾವಾಕ್ಯವು ಅಖಂಡಾರ್ಥ ಬೋಧಕವಾಗಿ ವಿವರಿಸಲಾಗಿದೆ.

ಆನಖಾಗ್ರಾತ್ — ಸ ಏಷ ಇಹ ಪ್ರವಿಷ್ಟ ಆ-ನಖಾಗ್ರೇಭ್ಯಃ ಯಥಾ
ಕ್ಷುರಃ ಕ್ಷುರಧಾನೇ ಅವಹಿತಃ ಸ್ಯಾತ್ । ಬೃ. ೧. ೪. ೭

ಅಕೃತ್ಸ್ನಂ-ತಂ ನ ಪಶ್ಯಂತಿ, ಅಕೃತ್ಸ್ನೋಹಿ ಸಃ । ಬೃ. ೧. ೪. ೭

ಪ್ರೇಯಸ್ತದೇವ ಪರಮಂ—ತದೇತತ್ ಪ್ರೇಯಃ ಪುತ್ರಾತ್, ಪ್ರೇಯೋ ವಿತ್ತಾತ್, ಪ್ರೇಯೋಽನ್ಯಸ್ಮಾತ್ ಸರ್ವಸ್ಮಾತ್ ಅಂತರತರಂ ಯದಯಮಾತ್ಮಾ ।
ಬೃ. ೧. ೪. ೮

೪೮. ಕೃಷ್ಣಯಜುರ್ವೇದಕ್ಕೆ ಸೇರಿದ ತೈತ್ತಿರೀಯೋಪನಿಷತ್ತಿನ–ಸ ಯಶ್ಚಾ-ಯಂ ಪುರುಷೇ ಯಶ್ಚಾಸಾವಾದಿತ್ಯೇ ಸ ಏಕಃ ಈ ವಾಕ್ಯವನ್ನು ಇಲ್ಲಿ ವಿವರಿಸಲಾಗಿದೆ. ಬ್ರಹ್ಮ ಮತ್ತು ಆತ್ಮರ ಅಭೇದಸಾಕ್ಷಾತ್ಕಾರವಾದಮೇಲೆ, ಎಲ್ಲಡೆಗೂ ಬ್ರಹ್ಮ ಒಂದೇ

ತೋರುತ್ತಿರಲು ಈ ಕಾಣುವ ಪ್ರಪಂಚ ಕರಗಿ ಕಾಣದಾಗುತ್ತದೆ. ಬೇರೆ ಏನೊಂದೂ ತೋರುವದಿಲ್ಲ. ಇದು ಅಭಯ ಮತ್ತು ಪರಮಾನಂದವನ್ನುಂಟು ಮಾಡುತ್ತದೆ.

೪೯. ಸಾಮವೇದಕ್ಕೆ ಸೇರಿದ ಛಾಂದೋಗ್ಯೋಪನಿಷತ್ತಿನಲ್ಲಿ ಸರಿಯಾದ ಉದಾಹರಣೆಯೊಂದಿಗೆ 'ತತ್ತ್ವಮಸಿ' ಮಹಾವಾಕ್ಯವು ಒಂಬತ್ತು ಬಾರಿ ಪುನಃ ಪುನಃ ಉಚ್ಚರಿಸಲಾಗಿದೆ. ಈ ಮತ್ತು ಮುಂಬರುವ ಒಂಬತ್ತು ಶ್ಲೋಕಗಳು ಅವುಗಳನ್ನು ಉಲ್ಲೇಖಿಸುತ್ತವೆ. ಹೋಲಿಸಿ ವಿವೇಕಚೂಡಾಮಣಿ-- ೨೫೩-೨೬೨; ಈ ಎಲ್ಲ ಹತ್ತೂ ಪದ್ಯಗಳು 'ಬ್ರಹ್ಮ ತತ್ತ್ವಮಸಿ ಭಾವಯಾತ್ಮನಿ' ಎಂದು ಕೊನೆಗೊಳ್ಳುತ್ತವೆ.

ತದಭಿಮತ್ಯ ಬಭೂವ ಜೀವಃ — ಅನೇನ ಜೀವೇನ ಆತ್ಮನಾ ಅನುಪ್ರವಿಶ್ಯ ನಾಮರೂಪೇವ್ಯಾಕರವಾಣಿ– ಛಾ ೫-೩-೨

ಹೋಲಿಸಿ—

ಯದ್ಯಪಿ ಭೋಕ್ತಾ ನ ಬ್ರಹ್ಮಣೋ ವಿಕಾರಃ 'ತತ್ಸೃಷ್ಟ್ವಾ ತದೇವಾನುಪ್ರಾವಿಶತ್'' ಇತಿ ಸ್ರಷ್ಟುರೇವಾವಿಕೃತಸ್ಯ ಕಾರ್ಯಾನುಪ್ರವೇಶೇನ ಭೋಕ್ತೃತ್ವಶ್ರವಣಾತ್, ತಥಾಪಿ ಕಾರ್ಯಮನುಪ್ರವಿಷ್ಟಸ್ಯ ಅಸ್ತಿ ಉಪಾಧಿನಿಮಿತ್ತಃ ವಿಭಾಗಃ ಆಕಾಶಸ್ಯೇವ ಘಟಾದ್ಯುಪಾಧಿ ನಿಮಿತ್ತಃ । ಬ್ರ. ಸೂ. ಶಾಂ. ಭಾ. ೨-೧-೧೩

ದೇಹಾಂತಶುಂಗಮ್— ದೇಹದಲ್ಲಿ ಪರ್ಯವಸಾನವಾಗುವ ಎಲ್ಲ ಕಾರ್ಯಗಳು.

ಹೋಲಿಸಿ—

ಅನ್ನೇನ ಶುಂಗೇನ ಆಪೋ ಮೂಲಮನ್ವಿಚ್ಛ. ಅದ್ಭಿಃಸೋಮ್ಯ ಶುಂಗೇನ ತೇಜೋ ಮೂಲಮನ್ವಿಚ್ಛ. ತೇಜಸಾ ಸೋಮ್ಯ ಶುಂಗೇನ ಸನ್ಮೂಲಮನ್ವಿಚ್ಛ । ಛಾ. ೬. ೮. ೪

೫೦. ಅಧಿಗಮ್ಯ ಜನಾ ನ ವಿದ್ಯುಃ-- ತದ್ಯಥಾ ಹಿರಣ್ಯನಿಧಿಂ ನಿಹಿತಂ ಉಪರ್ಯುಪರಿ ಸಂಚರಂತೋ ನ ವಿಂದೇಯುಃ ಏವಮೇವ ಇಮಾಃ ಸರ್ವಾಃ ಪ್ರಜಾ ಅಹರಹರ್ಗಚ್ಛಂತ್ಯ ಏತಂ ಬ್ರಹ್ಮಲೋಕಂ ನ ವಿಂದಂತಿ ಅನೃತೇನ ಹಿ ಪ್ರತ್ಯೂಢಾಃ । —ಛಾ. ೮. ೩. ೨

ನ ಅಸಿ ಕದಾಪಿ ದುಃಖೀ-- "ನೀನೆಂದಿಗೂ ದುಃಖಿಯಾಗಿರುವದಿಲ್ಲ. ನೀನು ಕೇವಲ ಆನಂದಮಯನಾದ ಬ್ರಹ್ಮವೇ" ಈ ಆಶ್ವಾಸನೆಯು ನಮಗೆ ಎಷ್ಟೋ ಸಮಾಧಾನವನ್ನು ತರುವದು.

೫೧. ಮಲಗಿದ ಮನುಷ್ಯನು ತಾನು ಬ್ರಹ್ಮದೊಡನೆ ಕೂಡಿರುವುದನ್ನು ಅರಿಯಲಾರ; ಆದರೆ ಎಚ್ಚರದಲ್ಲಿರುವವನು ಏಕೆ ತಾನೆ ಅರಿಯಬಾರದು ? ಅದು ಹೀಗೇಕೆಂದರೆ, ಅವನು ದೇಹ, ಇಂದ್ರಿಯಾದಿ ಉಪಾಧಿಗಳಿಂದ ಬ್ರಹ್ಮೈಕ್ಯವನ್ನು ಮರೆತುಬಿಟ್ಟಿರುತ್ತಾನೆ. ಪ್ರಸಂಗವಶಾತ್ ಬೇಡರ ಗುಡಿಸಲದಲ್ಲಿ ಬೆಳೆದ ಒಬ್ಬ ರಾಜಕುಮಾರನು ತಾನು ರಾಜನಮಗನೆಂಬುವದನ್ನು ತಿಳಿದಿರುವದಿಲ್ಲ. ಅದು ಅವನಿಗೆ ತಿಳಿದಾಗ ಅವನು ಮತ್ತೆ ರಾಜಕುಮಾರನಾಗುತ್ತಾನೆ. ಅದೇ ರೀತಿಯಾಗಿ ಒಬ್ಬನ ಸಂಪೂರ್ಣತೆಯೆಂದರೆ ಬ್ರಹ್ಮನಿಂದ ಒಂದಾಗುವದೇ.

ಹೋಲಿಸಿ— ಬ್ರಹ್ಮವೇದ ಬ್ರಹ್ಮೇವ ಭವತಿ । ಮುಂ. ೩.೨-೯.

೫೨. ಗಿಡದ ಒಂದು ಟೊಂಗೆ ಒಣಗಿದಾಗ ಆ ಟೊಂಗೆಯೊಂದರಲ್ಲಿಯೇ ಜೀವವಿಲ್ಲದಿದ್ದರೂ ಆ ಗಿಡದ ಬೇರೆ ಟೊಂಗೆಗಳಲ್ಲಿ ಜೀವವಿರುವದು ನಮಗೆ ಕಂಡು ಬರುವದು. ಇದರಿಂದ ಆತ್ಮನು ದೇಹ ಭಿನ್ನನೆಂಬುದು ತಿಳಿದುಬರುವದು.

ಸ ಚ ನಿತ್ಯ ಏಕಃ— ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ
ನಹನ್ಯತೇ ಹನ್ಯಮಾನೇ ಶರೀರೇ ।
—ಕಠ–೨–೧೧, ಗೀತಾ ೨. ೨೦

೫೩. ಆಲದ ಮರದ ಬೀಜ ತೀರಸಣ್ಣದಿದ್ದರೂ ದೊಡ್ಡಮರವಾಗಿ ಬೆಳೆಯುವ ಸಾಮರ್ಥ್ಯ ಅದರಲ್ಲಿದ್ದೇ ಇದೆ. ಅದೇರೀತಿಯಾಗಿ ಸೂಕ್ಷ್ಮವಾದ ಬ್ರಹ್ಮವು ಈ ಬೃಹತ್ಪ್ರಪಂಚದ ಆಕಾರದಲ್ಲಿ ತನ್ನನ್ನು ಪ್ರಕಟಗೋಳಿಸಿರುವದು. ಇದು ಕೇವಲ ವಿಶ್ವಾಸದಿಂದ ತಿಳಿದುಬರುವಂತಹದು.

ಹೋಲಿಸಿ –

ಶ್ರದ್ಧತ್ಸ್ವ ಸೋಮ್ಯ । ಛಾ. ೬. ೧೨. ೩.

೫೪. ನೀರಲ್ಲಿ ಕರಗಿದ ಉಪ್ಪು ಕಣ್ಣಿಗೆ ಕಾಣಲಾರದು; ಕೈಗೆ ಹತ್ತಲಾರದು. ಅದು ಕೇವಲ ರುಚಿಯಿಂದ ಮಾತ್ರ ತಿಳಿಯಲಾಗುವದು. ಹಾಗೆಯೇ ಆತ್ಮನನ್ನು ಇಂದ್ರಿಯಗಳಿಂದ ತಿಳಿಯಲಾಗದು. ಅದು ಕೇವಲ ಆಧ್ಯಾತ್ಮ ಗುರುವಿನ ಉಪದೇಶದಿಂದ ಒಳಗೇ ಅರಿಯಲಾಗುವಂತಹದು.

೫೫. ದರೋಡೆಮಾಡುವವರು ಗಾಂಧಾರ ದೇಶದ ಶ್ರೀಮಂತನನ್ನು ಅಪಹರಿಸಿ ಅವನ ಎಲ್ಲ ಆಭರಣಗಳನ್ನು ಕಸಿದುಕೊಂಡು ಅಡವಿಯಲ್ಲಿ ಅವನನ್ನು ಬಿಟ್ಟು ಹೋದರು. ಅವನ ಕಣ್ಣುಗಳು ಕಾಣದ ಹಾಗೆ ಕಟ್ಟಲ್ಪಟ್ಟು, ಅವನ ಕೈಕಾಲುಗಳನ್ನೂ ಕೂಡ ಬಿಗಿಯಲಾಗಿದೆ. ಕಲ್ಲು ಮುಳ್ಳುಗಳಿಂದ ತುಂಬಿದ ನೆಲದ ಮೇಲೆ ಅವನು

ದಿಙ್ಮೂಢನಾಗಿ ಒರೆಗಿದ್ದಾನೆ. ಅವನು ಕಾಡುಮೃಗಗಳಿಗೆ ಮತ್ತು ಹಾವುಗಳಿಗೆ ಅಂಜುವನು. ಅಲ್ಲದೆ ಹಸಿವೆ ನೀರಡಿಕೆಯಿಂದ ಬಳಲುತ್ತಿದ್ದಾನೆ. ಅವನು ತನ್ನ ಬಿಡುಗಡೆ ಮತ್ತು ಸುರಕ್ಷಿತವಾದ ಮರುಳುವಿಕೆಯ ಬಗ್ಗೆ ಬಹಳೇ ಚಿಂತೆ ಮಾಡುತ್ತಿದ್ದಾನೆ ಏನು ಮಾಡಬೇಕೆಂಬುವದರ ಬಗ್ಗ ದಾರಿಕಾಣದವನಾಗಿದ್ದಾನೆ. ಅಲ್ಲಿ ಹಾಯ್ದು ಹೋಗುವ ಕರುಣೆ ತುಂಬಿದ ದಾರಿಹೋಕನೊಬ್ಬನು ಅವನ ಮೇಲೆ ದಯೆ ತೋರುತ್ತಾನೆ. ಮತ್ತು ಅವನನ್ನು ಬಿಡುಗಡೆ ಮಾಡಿ ಅವನಿಗೆ ಗಾಂಧಾರ ದೇಶಕ್ಕೆ ಹೋಗುವ ದಾರಿಯನ್ನು ತೋರಿಸುತ್ತಾನೆ. ಹೀಗೆ ಅವನು ಊರಿಂದೂರಿಗೆ ಹೋಗುತ್ತ ತನ್ನ ಮನೆ ಸೇರಿ ಸುಖದಿಂದಿರುತ್ತಾನೆ.

ಅದೇ ರೀತಿಯಾಗಿ ಮಾನವನ ಆರು ವೈರಿಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ಜೀವನನ್ನು ಅಪಹರಿಸುತ್ತವೆ. ಅವು ಅವನನ್ನು ಕುರುಡನನ್ನಾಗಿ ಮಾಡುವವು. ಅಂದರೆ ಅವನು ಶುದ್ಧಚೈತನ್ಯ ಆನಂದ ಸ್ವರೂಪನಿರುವನು ಎಂಬುದನ್ನು ಮರೆಸುವವು ಮತ್ತು ಅವನನ್ನು ಬಂಧನಕ್ಕೊಳಗಾಗುವಂತೆ ಮಾಡುವವು. ಅಲ್ಲಿ ಅವನು ರೋಗ, ದುಃಖ ಮತ್ತು ಮರಣಗಳಿಂದ ಪೀಡಿತನಾಗುವನು. ದಯಾಮಯನಾದ ಗುರುವು ಅವನನ್ನು ಅಜ್ಞಾನದಿಂದ ಬಿಡುಗಡೆ ಮಾಡಿ ಅವನಿಗೆ ಸಾಕ್ಷಾತ್ಕಾರಕ್ಕೆ ದಾರಿ ತೋರುವನು. ಆ ವ್ಯಕ್ತಿಯು ಆಧ್ಯಾತ್ಮಿಕ ವಿವಿಧೋಪಾಸನೆಯ ಸಮೃದ್ಧಿಯಿಂದ ಇದೇ ಜನ್ಮದಲ್ಲಾಗಲಿ ಜನನಾಂತರದಲ್ಲಾಗಲಿ ಪ್ರಾರಬ್ಧ ಕರ್ಮ ತೀರಿದ ಮೇಲೆ ಮುಕ್ತಿ ಹೊಂದುವನು. ಹೋಲಿಸಿ—

ತಸ್ಯ ತಾವದೇವ ಚಿರಂ ಯಾವನ್ನವಿಮೋಕ್ಷ್ಯೇ ಅಥ ಸಂಪತ್ಸ್ಯೇ ।

ಛಾ. ೬. ೧೪. ೨

೬. ಮರಣಸಮಯದಲ್ಲಿ ಇಂದ್ರಿಯಗಳು ಮನಸ್ಸಿನಲ್ಲಿ, ಮನಸ್ಸು ಪ್ರಾಣದಲ್ಲಿ, ಪ್ರಾಣವು ಆತ್ಮನಲ್ಲಿ ಲೀನವಾಗುವವು. ಅಜ್ಞನು ಈ ಸಂಸಾರಕ್ಕೆ ಮತ್ತೆ ಮರಳಬೇಕಾಗುವದು. ಆದರೆ ಪ್ರಾಜ್ಞನಿಗೆ ಮಾತ್ರ ಅವಿದ್ಯೆ, ಕಾಮ ಮತ್ತು ಕರ್ಮದ ಬಂಧನವು ಎಂದಿಗೂ ಇಲ್ಲದಾಗಿರುವಾಗ ಸಂಸಾರದೆಡೆಗೆ ಹೊರಳಿ ನೋಡುವದೂ ಕೂಡ ಆಗಲಾರದು. ಹೋಲಿಸಿ— ಛಾಂದೋಗ್ಯ ಉಪ. ೬. ೧೫. ೧–೨

೫೭. ಅಗ್ನಿದಿವ್ಯವು ಕಳ್ಳನು ಅಸತ್ಯತೆಯಿಂದ ಕೂಡಿದುದಕ್ಕೆ ಅವನನ್ನು ಸುಡುತ್ತದೆ. ಅದರಂತೆಯೇ ಒಬ್ಬ ವ್ಯಕ್ತಿಯು ತನ್ನನ್ನು ದೇಹದೊಡನೆ ಒಂದಾಗಿ ಭಾವಿಸಿದಾಗ ದುಃಖವನ್ನನುಭವಿಸುವನು. ಅಗ್ನಿದಿವ್ಯವು ಸತ್ಪುರುಷನನ್ನು ಸುಡುವದಿಲ್ಲ. ಅದಕ್ಕೆ ಪ್ರತಿಯಾಗಿ ಅವನು ರಾಜನಿಂದ ಆದರಿಸಲ್ಪಡುತ್ತಾನೆ. ಹಾಗೆಯೇ ತನ್ನನ್ನು ಆತ್ಮನೊಂದಿಗೆ ನಿಜವಾಗಿ ಒಂದಾಗಿ ತಿಳಿಯುವ ಸತ್ಪುರುಷನು ಆನಂದವನ್ನು ಪಡೆಯುವನು.

ಹೋಲಿಸಿ—

ತಸ್ಕರ ದೃಷ್ಟಾಂತೇನ ಚ ಅನೃತಾಭಿಸಂಧಸ್ಯ ಬಂಧನಂ ಸತ್ಯಾಭಿಸಂಧಸ್ಯ ಚ ಮೋಕ್ಷಂ ದರ್ಶಯನ್ ಏಕತ್ವಮೇವ ಏಕಂ ಪಾರಮಾರ್ಥಿಕಂ ದರ್ಶಯತಿ ।

ಬ್ರ. ಸೂ. ಶಾ. ಭಾ. ೨. ೧. ೧೩

೫೮. ಸ್ವಂ ಸತ್ಯಾದ್ವಿತೀಯ-ಸುಖ-ಬೋಧ-ಘನಂ ವಿಜಜ್ಞೌ — ಶ್ವೇತಕೇತುವು ತನ್ನನ್ನು ಸಚ್ಚಿದಾನಂದವಾದ ಅದ್ವಿತೀಯ ಆತ್ಮನೆಂದು ತಿಳಿದನು.

ಸ್ವಾರಾಜ್ಯಸೌಖ್ಯಂ — ತನ್ನದೇ ಆದ ಪ್ರಕಾಶದ ಆನಂದ.

೫೯. ಮಾಂಡೂಕ್ಯೋಪನಿಷತ್ತು ಪ್ರಣವವನ್ನು ಅ, ಉ, ಮ್, ಈ ಮೂರು ಮಾತ್ರೆಗಳನ್ನಾಗಿ ವಿಂಗಡಿಸುತ್ತದೆ. ಮತ್ತು ಅವುಗಳನ್ನು ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿಯ ಅವಸ್ಥೆಗಳಿಗೆ ಒಂದಾಗಿ ಹೇಳುತ್ತದೆ. ವೈಶ್ವಾನರ, ತೈಜಸ ಮತ್ತು ಪ್ರಾಜ್ಞ ಹೀಗೆ ಕ್ರಮವಾಗಿರುವ ಈ ಅವಸ್ಥೆಗಳು ತುರೀಯ ಎಂಬ ನಾಲ್ಕನೆಯ ಅವಸ್ಥೆಯಲ್ಲಿ ಲೀನವಾಗುವವು. ಹೋಲಿಸಿ —

ಸರ್ವಂ ಹಿ ಏತತ್ ಬ್ರಹ್ಮ, ಅಯಮಾತ್ಮಾ ಬ್ರಹ್ಮ, ಸೋಽಯಮಾತ್ಮಾ ಚತುಷ್ಪಾತ್ ।–ಮಾ. ೨

ಅಮಾತ್ರಃ ಚತುರ್ಥಃ ಅವ್ಯವಹಾರ್ಯಃ ಪ್ರಪಂಚೋಪಶಮಃ ಶಿವಃ ಅದ್ವೈತಃ ಏವಮ್ ಓಂಕಾರ ಆತ್ಮಾ ಏವ, ಸಂವಿಶತಿ ಆತ್ಮನಾ ಆತ್ಮಾನಂ ಯ ಏವಂ ವೇದ । –ಮಾ. ೧೨

೬೦. ಸ್ವ–ರಸ–ದೃಶಿ=ಸಹಜಪ್ರಕಾಶೇ (ರವೌ). ಸಹಜವಾಗಿ ತೇಜಸ್ವಿಯಾದ ಸೂರ್ಯನಲ್ಲಿ (ಕತ್ತಲೆ ಇರಲಾರದು).

ವ್ಯಾಖ್ಯೆಯಲ್ಲಿ ವಾರ್ತಿಕದಿಂದ ಉದಾಹರಿಸಲಾಗಿದೆ :—

ತತ್ತ್ವಮಸ್ಯಾದಿವಾಕ್ಯೋತ್ಥಸಮ್ಯಗ್ಧೀಜನ್ಮಮಾತ್ರತಃ ।
ಅವಿದ್ಯಾ ಸಹ ಕಾರ್ಯೇಣ ನಾಸೀದಸ್ತಿ ಭವಿಷ್ಯತಿ ॥

೬೧. ಅಖಂಡವೃತ್ತಿಃ = ಬ್ರಹ್ಮಾಕಾರಾ ಸಾಕ್ಷಾತ್ಕಾರವೃತ್ತಿಃ
ಸಂಮೋಹಮ್ = ಮೂಲಾಜ್ಞಾನಸಹಿತಮ್
ನಿತ್ಯಸಿದ್ಧೇ = ಅನಾಗಂತುಕೇ (ಆತ್ಮತತ್ತ್ವೇ)

ಈ ಪದ್ಯದಲ್ಲಿ ಕೊಟ್ಟ ಎರಡೂ ಉದಾಹರಣೆಗಳು ಅತ್ಯಂತ ಅರ್ಥಪೂರ್ಣವಾಗಿವೆ. ಅಗ್ನಿಯು ಉರುವಲವನ್ನು ಸುಟ್ಟು ತನ್ನಷ್ಟಕ್ಕೆ ತಾನೇ ಆರಿ ಹೋಗುತ್ತದೆ.

(ತಿಳಿಯಾಗಿ ಮಾಡುವ) ಕತಕದ ಪುಡಿಯು ನೀರಿನ ಕಸರಿನೊಂದಿಗೆ ಒಂದಾಗಿ ಕೆಳಗೆ ಹೋಗುತ್ತದೆ. ಹಾಗೆಯೇ 'ನಾನು ಬ್ರಹ್ಮ' ಎಂಬ ಅಂತಃಕರಣವೃತ್ತಿಯು ಶುದ್ಧ ಚೈತನ್ಯದಲ್ಲಿ ಅಡಗಿ ಹೋಗುತ್ತದೆ.

ಇದಂ ಚ ಬೋಧೇದ್ಧಾ ಬುದ್ಧಿರೇವ ಅಜ್ಞಾನನಿವರ್ತಕಾ ಇತಿ ಮತಮ್ ಆಶ್ರಿತ್ಯ ಉಕ್ತಮ್ । ಯದಿ ಚ ತೃಣಾದಿ–ಸಂಧುಕ್ಷಿತೋ ವಹ್ನಿರಿವ ಬುದ್ಧಿದೋ ಬೋಧ ಏವ ಸರ್ವದ್ವೈತ ಬಾಧಕಃ ಇತಿ ಸಿದ್ಧಾಂತಃ ಪರ್ಯಾಲೋಚ್ಯತೇ, ತದಾ ತು ನ ಕಶ್ಚಿದ್ದೋಷಃ । ಏತನ್ಮತಭೇದಸೂಚನ ಯು ಏವ ಹಿ ಶ್ಲೋಕೇ ದೃಷ್ಟಾಂತದ್ವಯೋಪಾದನಮ್ ಇತಿ ಭಾವಃ । –ಕೈವಲ್ಯಕಲ್ಪದ್ರುಮ

೬೨. ತ್ರಿತಾಪ— ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ. ತಾಪವು ಮೂರು ತರಹದ್ದು. ಆಧ್ಯಾತ್ಮಿಕ ಎಂದರೆ— ರೋಗ, ಮುಪ್ಪು, ತಲೆಶೂಲೆ, ಚರ್ಮರೋಗ, ಬಾವು ಮುಂತಾದವುಗಳಿಂದುಂಟಾದ ದುಃಖ.

ಆಧಿಭೌತಿಕ ಎಂದರೆ– ಹಾವು, ಹುಲಿ, ಕಳ್ಳ, ವೈರಿ ಮುಂತಾದ ಜೀವಿಗಳಿಂದುಂಟಾಗುವ ಬಾಧೆ. ಆಧಿದೈವಿಕ ಎಂದರೆ— ಭೂಕಂಪ, ಸಿಡಿಲು, ಅತಿವೃಷ್ಟಿ ಅನಾವೃಷ್ಟಿ ಮತ್ತು ಭೂತಬಾಧೆ, ನರಕಬಾಧೆ, ಮುಂತಾದ ದೈವೀಕಾರಣಗಳಿಂದುಂಟಾಗುವ ಪೀಡೆ.

ಜ್ವರ— ಆಯುರ್ವೇದದಂತೆ ಜ್ವರವು ವಾತ, ಪಿತ್ತ ಅಥವಾ ಕಫದ ಅತಿಶಯದಿಂದುಂಟಾಗುವದು.

ಕಾಡ್ಗಿಚ್ಚಿನಲ್ಲಿ ಹುಲ್ಲು ಸುಟ್ಟರೂ ಕೂಡ ಅದರ ಬೇರು ಮಣ್ಣಲ್ಲಿ ಹುಗಿದ ಕಾರಣ ಮಳೆಗಾಲದಲ್ಲಿ ಪುನಃ ಬೆಳೆಯುತ್ತದೆ. ಆದರೆ ಕರ್ಮದ ಬೀಜವೇ ಆತ್ಮ ಸಾಕ್ಷಾತ್ಕಾರದಿಂದ ಸುಟ್ಟು ಹೋಗುತ್ತದೆ. ಆದ್ದರಿಂದ ಕರ್ಮವು ಯಾವುದೇ ಬಂಧನವನ್ನು ಎಂದೆಂದಿಗೂ ತರಲಾರದು.

ಹೋಲಿಸಿ— ತದಧಿಗಮೇ ಉತ್ತರಪೂರ್ವಾಘಯೋಃ ಅಶ್ಲೇಷವಿನಾಶೌ ತದ್ವ್ಯಪದೇಶಾತ್ । — ಬ್ರ. ಸೂ. ೪–೧–೧೩

ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ ಕುರುತೇಽರ್ಜುನ ।
ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ॥ ಗೀತಾ ೪.೩೭

ಸಂದೇಹಗ್ರನ್ಥಿಭೇದೌ—

ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವ–ಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ॥ ಮುಂ॥ ೨.೨.೮

ಲೇಖಕರು ಎರಡನೆಯ ಪ್ರಕರಣದ ಸಾರವನ್ನು ಹೀಗೆ ಸಂಗ್ರಹಿಸಿ ಹೇಳುವರು.

ಅಪೋದ್ಯ ನಿಖಿಲಂ ದ್ವೈತಂ ಪದಾರ್ಥಪರಿಶೋಧತಃ ।
ಸಚ್ಚಿದಾನಂದಪೂರ್ಣಾತ್ಮಾ ವಾಕ್ಯಾರ್ಥೋऽತ್ರ ನಿದರ್ಶಿತಃ ॥

೩ ಕೈವಲ್ಯ ಪ್ರಕರಣ

ಈ ಪ್ರಕರಣವು 'ಅದು ನೀನಿರುವಿ' ಮುಂತಾದ ಉಪನಿಷತ್ತಿನ ಉಪದೇಶಗಳ ಪ್ರಯೋಜನದ ಬಗ್ಗಿರುವ ಚರ್ಚೆಯೊಂದಿಗೆ ಪ್ರಾರಂಭವಾಗುವದು. ಒಡೆದು ತೋರುವ ಪರೋಕ್ಷತೆಯ ಸ್ವಭಾವವುಳ್ಳ ಇಂಥ ಶಬ್ದೋಪದೇಶವು ಹೇಗೆ ತಾನೆ ಆತ್ಮನ ನೇರವಾದ (ಅಪರೋಕ್ಷ) ಸಾಕ್ಷಾತ್ಕಾರವನ್ನು ತರುವದು? ಇದಕ್ಕೆ ೧ ರಿಂದ ೮ ರವರೆಗಿನ ಶ್ಲೋಕಗಳಲ್ಲಿ ಉತ್ತರಿಸಲಾಗಿದೆ.

೧. ದಶಮಃ ತ್ವಮ್— ಗುರುಗಳು ಹತ್ತು ಜನ ಶಿಷ್ಯರನ್ನು ಒಂದು ಕೆಲಸಕ್ಕೋಸ್ಕರ ಬೇರೊಂದೂರಿಗೆ ಕಳುಹಿಸಿದರು. ಹಾದಿಯಲ್ಲಿ ಒಂದು ನದಿಯನ್ನು ದಾಟಬೇಕಾಯಿತು. ನದಿಯನ್ನು ದಾಟಿದಮೇಲೆ ಅವರು, ಎಲ್ಲರೂ ಸುರಕ್ಷಿತವಾಗಿ ದಡಸೇರಿರುವರೋ ಇಲ್ಲವೋ ಎಂಬುದನ್ನು ಖಚಿತ ಮಾಡಿಕೊಳ್ಳಲೆಣಿಸಿದರು. ಪ್ರತಿಯೊಬ್ಬನು ತನ್ನನ್ನು ಬಿಟ್ಟು ಉಳಿದೆಲ್ಲರನ್ನು ಎಣಿಸಿದನು ಮತ್ತು ತಮ್ಮಲ್ಲಿಯ ಯಾವನೋ ಒಬ್ಬನನ್ನು ನದಿಯು ತೇಲಿಸಿಕೊಂಡು ಹೋಯಿತೆಂದು ಭಾವಿಸಿದರು. ಶೋಕಿಸುತ್ತ ನದಿಯ ದಂಡೆಗುಂಟ ಅವನನ್ನು ಹುಡುಕುತ್ತ ಸಾಗಿದರು. ತಮಗೆ ಭೆಟ್ಟಿಯಾದ ಒಬ್ಬ ಮನುಷ್ಯನನ್ನು— "ನದಿಯು ತೇಲಿಸಿಕೊಂಡೊಯ್ದ ನಮ್ಮ ಗೆಳೆಯನನ್ನು ಎಲ್ಲಿಯಾದರು ನೀವು ಕಂಡಿದಿರಾ ?" ಎಂದು ಕೇಳಿದರು. ಅವನು ಅವರನ್ನು ಎಣಿಸಿ ನೀವು ಹತ್ತು ಜನರಿರುವಿರಿ ನಿಮ್ಮಲ್ಲಿ ಯಾವನೂ ಕಳೆದಿಲ್ಲ ಎಂದು ಉತ್ತರಿಸಿದನು. ಅವರಲ್ಲೊಬ್ಬನು ಮತ್ತೆ ಎಲ್ಲರನ್ನು ಎಣಿಸಿ ಹತ್ತನೆಯವನೆಲ್ಲಿ? ಎಂದು ಕೇಳಿದನು. ಆಗ ಆ ಮನುಷ್ಯನು "ನೀನೇ ಹತ್ತನೆಯವನು" ಎಂದು ಹೇಳಿದನು. ಹೀಗೆ ಎಲ್ಲ ಹುಡುಗರು ನಲಿದಾಡಿ ಸಮಾಧಾನ ಗೊಂಡರು.

ಇಲ್ಲಿ— "ನೀನು ಹತ್ತನೆಯವನು" ಎಂಬ ಶಬ್ದಗಳು ಅಪರೋಕ್ಷಜ್ಞಾನ ತಂದು ಕೊಡುವವೆಂಬುದು ಸ್ಪಷ್ಟವೇ ಇದೆ. ಏಕೆಂದರೆ ಅದರ ನಂತರ ಅವನು ಮತ್ತೆ ತನ್ನನ್ನು ಕಳೆದವನೆಂದು ಎಣಿಸಬಯಸುವದಿಲ್ಲ. ಇದೇ ರೀತಿಯಾಗಿ ಉಪ-ನಿಷತ್ತಿನ ಉಪದೇಶವು ಆತ್ಮನ ಅಪರೋಕ್ಷ ಸಾಕ್ಷಾತ್ಕಾರವನ್ನು ತಂದು ಕೊಡುತ್ತದೆ.

ಹೋಲಿಸಿ— ನವಸಂಖ್ಯಾಹೃತಜ್ಞಾನೋ ದಶಮೋ ವಿಭ್ರಮಾದ್ಯಥಾ ।
ನ ವೇತ್ತಿ ದಶಮೋಽಸ್ಮೀತಿ ವೀಕ್ಷಮಾಣೋಽಪಿ ತಾನ್ನವ ॥

—ಸುರೇಶ್ವರಾಚಾರ್ಯರು. ನೈಷ್ಕರ್ಮ್ಯಸಿದ್ಧಿ ೩. ೬೬, ಪಂಚದಶಿಯಲ್ಲಿ—ಉದಾಹೃತವಾಗಿದೆ. ೭–೨೩

ಲೇಖಕರು ಸಂಕ್ಷೇಪಶಾರೀರಕದ ಶ್ಲೋಕವನ್ನು [೧-೧೩] ಈ ಕೆಳಗಿನ ತಮ್ಮ ಟೀಕೆಯೊಂದಿಗೆ ಉದಾಹರಿಸುತ್ತಾರೆ.

ಪುರಃಪಾಪರಾಧಮಲಿನಾ ಧಿಷಾಣಾ ನಿರವದ್ಯಚಕ್ಷುರುದಿತಾಽಪಿ ಯಥಾ ।
ನ ಫಲಾಯ ಭತ್ಸ್ರ್ನವಿಷಯಾ ಭವತಿ ಶ್ರುತಿಸಂಭವಾಽಪಿ ತಥಾತ್ಮನಿ ಧೀಃ ॥

ಯಥಾ ಕಶ್ಚಿದ್ರಾಜಾ ಭತ್ಸ್ರ್ನನಾಮಾನಂ ಸ್ವಮಿತ್ರಂ ದೈವಾನ್ವಿಯುಕ್ತಂ ಚಿರೇಣ ವಟವೃಕ್ಷೇ ದೃಷ್ಟ್ವಾಽಪಿ ಬ್ರಹ್ಮರಾಕ್ಷಸೋಽಯಮಿತಿ ಮಂತ್ರಿಭಿಃ ಪ್ರತಾರ್ಯಮಾಣೋ ನ ಶ್ರದ್ದಧೇ ಇತಿ ತದ್ವಿಷಯಾಜ್ಞಾನಂ ವಿಪರೀತಬೋಧಪ್ರತಿಬದ್ಧಂ ರಾಜ್ಞೋ ನಿವೃತ್ತಂ ತಥಾ ಮಹಾವಾಕ್ಯಶ್ರುತಿ ಶ್ರುತಿಜನ್ಯಾಽಪಿ ಅಪಾತದರ್ಶಿನಾಂ ಆತ್ಮಸಾಕ್ಷಾತ್ಕಾರಧೀಃ ಇತಿ ತದರ್ಥಃ ।

ಒಬ್ಬ ರಾಜನು ಅಗಲಿದ ತನ್ನ ಗೆಳೆಯನಾದ ಭತ್ಸ್ರ್ನವನ್ನು ಚಿರಕಾಲದ ಮೇಲೆ ಅಡವಿಯಲ್ಲಿ ನೋಡಿದಾಗ ಮೋಸಗಾರರಾದ ಮಂತ್ರಿಗಳು ಇದು ದೆವ್ವ ಎಂದು ಹೇಳಿದಾಗ ಅವನು ತನ್ನ ಕಣ್ಣನ್ನು ತಾನೇ ನಂಬುವದಿಲ್ಲ. ಅದೇರೀತಿಯಾಗಿ ಇಂದ್ರಿಯಗಳಿಂದ ಅಡ್ಡಹಾದಿಗೆ ಎಳೆದವನನ್ನು ಶಾಸ್ತ್ರದಿಂದ ಹುಟ್ಟುವ ಜ್ಞಾನವು ಮನಗಾಣಿಸಲಾರದು.

೨. ಘಟವು ಸೂರ್ಯನಿಂದ ಬೆಳಗಲಿ ಅಥವಾ ದೀಪದಿಂದ ಬೆಳಗಲಿ ಅದು ಮಾತ್ರ ಹಾಗೆಯೇ ಇರುತ್ತದೆ. ಹಾಗೆಯೆ ಕೇವಲ ಶಬ್ದಜ್ಞಾನದಿಂದ ತಿಳಿದ ಮಾತ್ರಕ್ಕೆ ಆತ್ಮವು ಪರೋಕ್ಷವಾಗಲಾರದು. ಆತ್ಮವು ಅತೀಂದ್ರಿಯವಾದ ವಸ್ತು. ಇದು ಪರಿಮಾಣವಿಲ್ಲದ್ದು ಅಮೇಯವಾದದ್ದು ಬ್ರಹ್ಮದಿಂದ ಅಭಿನ್ನವಾದದ್ದು.

೩. ಆತ್ಮನಃ ಗೂಹಿತುಮ್— ತನ್ನ ದೆಸೆಯಿಂದ ಮರೆಮಾಡಲು.

ಆತ್ಮನಃ—(ಪಂಚಮೀ) ಅಂತರ್ಧೌಯೇನಾದರ್ಶನಮಿಚ್ಛತಿ ।

(ಪಾ. ೧. ೪. ೨೮)

ಆತ್ಮನು ಯಾವಾಗಲೂ ತನ್ನಷ್ಟಕ್ಕೆ ತಾನೇ ಬೆಳಗುವವನು. ಎಂಥ ಜಾಣನೂ ಕೂಡ 'ತಾನಿರುವೆನು' ಎಂಬುದನ್ನು ಒಪ್ಪಿಕೊಳ್ಳಲೇ ಬೇಕಾಗುವದರಿಂದ ಆತ್ಮನನ್ನು ತನ್ನಿಂದ ಮರೆಮಾಡಲಾರನು.

೪. ಸುಖ, ಕನಸು ಅಥವಾ ಕತ್ತಲೆ ಮುಂತಾದವುಗಳು ಹೇಗೆ ನೇರವಾಗಿ ತಿಳಿಯುವವೋ ಹಾಗೆ ಆತ್ಮನ ನೇರವಾದ ಅರಿವು ಇಂದ್ರಿಯಗಳ ನಿಲುವಿಗೆ ಹೊರತಾದದ್ದು. ಸಾಕ್ಷಿಚೈತನ್ಯದಿಂದ ತಿಳಿಯುವ ಸುಖ ದುಃಖ ಮುಂತಾದವುಗಳು

(ಸಾಕ್ಷಿಭಾಸ್ಯ) ಮನಸ್ಸಿನ ಅವಸ್ಥೆಗಳು. ಯತ್ನವೂ ಒಂದು ಆತ್ಮಗುಣವೆನ್ನುವರು ನೈಯಾಯಿಕರು.

ಹೋಲಿಸಿ —

ಬುದ್ಧ್ಯಾದಿಷಟ್ಕಂ ಸಂಖ್ಯಾದಿಪಂಚಕಂ ಭಾವನಾ ತಥಾ ॥

ಧರ್ಮಾಧರ್ಮೌ ಗುಣಾ ಏತೇ ಆತ್ಮನಃ ಸ್ಯುಶ್ಚತುರ್ದಶ ।–ಕಾರಿಕಾವಲೀ ೩೨-೩೩

[ಬುದ್ಧ್ಯಾದಿಷಟ್ಕಂ- ಬುದ್ಧಿ, ಸುಖ, ದುಃಖ, ಇಚ್ಛಾ, ದ್ವೇಷ, ಪ್ರಯತ್ನ]

ಅಪರೋಕ್ಷಜ್ಞಾನವು ಅತೀಂದ್ರಿಯವಾದ ಚೈತನ್ಯ. ಇದು ನಿಜಕ್ಕೂ ನೇರವಾದದ್ದು. (ಇಂದ್ರಿಯ) ಪ್ರತ್ಯಕ್ಷಜ್ಞಾನವು ವಸ್ತುತಃ ನೇರವಾಗಿರದೆ ಇಂದ್ರಿಯಗಳ ಮುಖಾಂತರ ಬರುವದು.

೫. ಛಾಂದೋಗ್ಯೋಪನಿಷತ್ತಿನ ಏಳನೆಯ ಪ್ರಪಾಠಕದಲ್ಲಿ ಆಚಾರ್ಯರಾದ ಸನತ್ಕುಮಾರರು ಶಿಷ್ಯರಾದ ನಾರದರಿಗೆ "ಯೋ ವೈ ಭೂಮಾ ತತ್ ಸುಖಮ್" [ಯಾವುದು ಮಹತ್ತಾಗಿದೆಯೋ ಅದು ಸುಖ] ಎಂದು ಉಪದೇಶಿಸುವರು. ಆ ಪ್ರಪಾಠಕದ ಕೊನೆಗೆ "ತಸ್ಮೈಮೃದಿತ ಕಷಾಯಾಯ ತಮಸಃ ಪಾರಂ ದರ್ಶಯತಿ ಭಗವಾನ್ ಸನ್‌ತ್ಕುಮಾರಃ" ಎಂದು ಹೇಳಲಾಗಿದೆ ಹೀಗೆ ಉಪದೇಶವು ಅಧಿಕೃತಪುರುಷನ ಅಜ್ಞಾನವನ್ನು ಕಳೆಯಬಲ್ಲದೆಂಬುದನ್ನು ಕಾಣಬಹುದು.

೬. "ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ" ಹೀಗೆ ಶ್ರವಣವು ಸಾಕ್ಷಾತ್ಕಾರವನ್ನು ಮಾಡಿಸುವುದೆಂದು ಬೃಹದಾರಣ್ಯಕೋಪನಿಷತ್ತು [೨. ೪. ೫] ಸಾರುತ್ತದೆ. ಮನನ (ಮನಗಾಣುವಿಕೆ) ಮತ್ತು ನಿದಿಧ್ಯಾಸನ (ನಿರಂತರ ಧ್ಯಾನ) ಇವೂ ಕೂಡ ಆವಶ್ಯಕವೆಂದು ಪ್ರಶ್ನೆ ಮಾಡಬಹುದು. ಆದರೆ ಪ್ರಶ್ನೋಪನಿಷತ್ತಿನಲ್ಲಿ [೬ – ೮] ಪಿಪ್ಪಲಾದನಿಂದ ಕೇವಲ ಶ್ರವಣಮಾಡಿದ ಸುಕೇಶ ಮತ್ತು ಇತರ ಐದು ಜನ ಶಿಷ್ಯರು ಅಜ್ಞಾನವನ್ನು ಕಳೆಯಲು ಸಮರ್ಥರಾದರೆಂಬುದನ್ನು ತಿಳಿಯುತ್ತೇವೆ. ಮನನ ಮತ್ತು ನಿದಿಧ್ಯಾಸನಗಳು ಸಾಕ್ಷಾತ್ಕಾರದ ನಿಚ್ಚಣಿಕೆಯ ಕೆಳಗಿನ ಹಣಿಗೆಯಲ್ಲಿರುವ ಸಾಧಕರಿಗೆ ಆವಶ್ಯಕವಾಗಿವೆ.

೭. ಒಳಗಿರುವ ಆತ್ಮನ ಸಾಕ್ಷಾತ್ಕಾರವು ಹೊರಗಿನ ವಿಷಯ ಪ್ರತ್ಯಕ್ಷದಷ್ಟು ಸುಲಭವಲ್ಲ. ಇಲ್ಲಿ ಮನಸ್ಸು ಮತ್ತು ಇಂದ್ರಿಯಗಳ ಆಟ ನಡೆಯುವದೇ ಇಲ್ಲ. ಆತ್ಮನು ಸಾಕ್ಷಿಯಾಗಿ ನಿಲ್ಲದೆ ಮನಸ್ಸು ಮತ್ತು ಇಂದ್ರಿಯಗಳು ಯಾವ ಹೊರಗಿನ ವಿಷಯಗಳನ್ನೂ ತಿಳಿಯಲಾರವು. ಆದ್ದರಿಂದ ಇಂದ್ರಿಯಗಳಿಂದಾಗುವ ಪ್ರತ್ಯಕ್ಷವನ್ನು ಗೌಣವೆನ್ನಬಹುದು.

ಸ್ವರಸ—ನಿಜದೃಶಃ =ಸ್ವಪ್ರಕಾಶ ಚೈತನ್ಯಸ್ಯ

೮. ಸಂವಿದ್—ಪ್ರಮಾತೃ ಚೈತನ್ಯ, ವೀಕ್ಷಿಸುವ ಅಹಂಕಾರ; ಆತ್ಮವನ್ನು ಹಿನ್ನೆಲೆಯಾಗಿರಿಸಿಕೊಂಡು ವಿಷಯಗಳನ್ನು ತಿಳಿಯುವ ಮತಿಗತ ಚೈತನ್ಯ, ಆಧುನಿಕರು ಕಲ್ಪಿಸುವ ಮನಸ್ಸಿನ ವೃತ್ತಿಗಳಲ್ಲೊಂದಾಗಿದೆ.

ವಿಷಯ ಪ್ರಬೋಧದಲನಾಯ ಮತ್ತು ವಿಷಯೋಪರಾಗ ಜನನಾಯ ಈ ಎರಡು ಮತಗಳು ಕ್ರಮವಾಗಿ ಭಾಮತಿ ಮತ್ತು ವಿವರಣ ಪ್ರಸ್ಥಾನಗಳಿಂದ ಅಂಗೀಕರಿಸಲ್ಪಟ್ಟಿವೆ.

ವಿಷಯಾಕೃತಿತ್ವಮ್— ನೈಯಾಯಿಕರ ಮತದಂತೆ ಮನಸ್ಸು ಇಂದ್ರಿಯಗಳ ಮುಖಾಂತರ ಹೊರಹೋಗಿ ವಿಷಯದ ಆಕಾರವನ್ನು ಧರಿಸುತ್ತದೆ. ಇದು ಆತ್ಮನ ಸಾಕ್ಷಾತ್ಕಾರಕ್ಕೆ ಅನವಶ್ಯಕವಾಗಿರುವುದು ಸ್ಪಷ್ಟವೇ ಇದೆ. ಏಕೆಂದರೆ ಇದು ಮನಸ್ಸು ಮತ್ತು ಇಂದ್ರಿಯಗಳನ್ನು ಮೀರಿದುದು.

೯. ನೇಕ್ಷ್ಯಂ ಚಕ್ಷುರಾದ್ಯೈಃ— ಹೋಲಿಸಿ—

ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ ।

ಕೇನ ೧. ೭

ಇಂದ್ರಿಯಗಳು ವ್ಯವಹರಿಸಲು ಆತ್ಮನಿಂದ ಸಾಮರ್ಥ್ಯ ಪಡೆಯುವವು. ಅವು ತಮ್ಮಷ್ಟಕ್ಕೆ ತಾವೇ ಬಿಡಲು ಶಕ್ತಿಹೀನವೇ ಸರಿ. ಅದಲ್ಲದೆ ಅವುಗಳಿಗೆ ಆತ್ಮನನ್ನು ಪ್ರಕಟಪಡಿಸುವದಕ್ಕಾಗಲಿ ಅಥವಾ ಗ್ರಹಿಸುವದಕ್ಕಾಗಲಿ ಸಾಮರ್ಥ್ಯವಿಲ್ಲ.

೧೦. ವಿಚಾರ-ವ್ಯಸನ-ವಶಮನಾಃ- ಮನುಜನಿಗೆ ಧನ, ಕೀರ್ತಿ ಸುಖಾದಿಗಳಿಗೆ ಸಹಜವಾಗಿ ಒಲಿದ ಮನವಿರುತ್ತದೆ. ಈ ಒಲವನ್ನು ಆತ್ಮನೆಡೆಗೆ ತಿರುಗಿಸಬೇಕು. ಹೋಲಿಸಿ—

ಯಾ ವೃತ್ತಿರವಿವೇಕಸ್ಯ ವಿಷಯೇಷ್ವನಪಾಯಿನೀ ।
ತ್ವಾಮನುಸ್ಮರತಃ ಸಾ ಮೇ ಹೃದಯಾನ್ಮಾಪಸರ್ಪತು ॥

ವ್ಯಸನಂ ಅತ್ಯಾಸಕ್ತಿಃ

ಲಾಲಸ್ಯೈಃ ವಾ ಹಠಾತ್ ವಾ- ಕ್ರಮಯೋಗದಿಂದ ಹೆಜ್ಜೆ ಹೆಜ್ಜೆಯಾಗಿಯಾಗಲಿ, ಹಠಯೋಗಸಾಧನೆಯಿಂದಾಗಲಿ ಮನಸ್ಸನ್ನು ಆತ್ಮನೆಡೆಗೆ ಹೊರಳಿಸಬೇಕು.

ರುಧ್ವಾ— ಚಿನ್ಮಾತ್ರೈಕರಸ್ಯೇನ ಮನಸಃ ಸ್ಥಿತಿಲಕ್ಷಣಂ ಸಮಾಧಿಃ ಭವತಿ ।
ಸ ಏವ ಮನೋನಾಶ ಇತ್ಯುಚ್ಯತೇ ।

ವ್ಯಾಖ್ಯೆಯಲ್ಲಿ ಕೆಳಗಿನ ಎರಡು ಶ್ಲೋಕಗಳನ್ನು ಯೋಗವಾಸಿಷ್ಠದಿಂದ ಉದಾಹರಿಸಲಾಗಿದೆ:—

ವಾಸನಾವಶತಃ ಪ್ರಾಣಸ್ಪಂದಸ್ತೇನ ಚ ವಾಸನಾ ।
ಕ್ರಿಯತೇ ಚಿತ್ತವೃಕ್ಷಸ್ಯ ತೇನ ಬೀಜಾಂಕುರಕ್ರಮಃ ॥

ದ್ವೇ ಬೀಜೇ ಚಿತ್ತವೃಕ್ಷಸ್ಯ ಪ್ರಾಣಸ್ಪಂದನವಾಸನೇ ।
ಏಕಸ್ಮಿಂಸ್ತು ತಯೋಃ ಕ್ಷೀಣೇ ಕ್ಷಿಪ್ರಂ ದ್ವೇ ಅಪಿ ನಶ್ಯತಃ ॥

೧೧. ಈ ಪದ್ಯವು ಯೋಗದಲ್ಲಿಯ ಎಂಟು ಅಂಗಗಳನ್ನು ವಿವರಿಸುತ್ತದೆ. ಯೋಗಸೂತ್ರಗಳ ಕರ್ತೃ ಆದ ಪತಂಜಲಿಯ ಮತದಂತೆ ಯಮ ಮತ್ತು ನಿಯಮಗಳು ಈ ಕೆಳಗಿನಂತಿವೆ :—

೧) ಯಮ-ಅಹಿಂಸಾ, ಸತ್ಯ, ಅಸ್ತೇಯ (ಕಳವಿರದಿರುವಿಕೆ), ಬ್ರಹ್ಮ-ಚರ್ಯ, ಮತ್ತು ಅಪರಿಗ್ರಹ (ಅಸ್ವೀಕಾರ).

೨) ನಿಯಮ— ಶೌಚ, ಸಂತೋಷ (ತೃಪ್ತಿ), ತಪಸ್, ಸ್ವಾಧ್ಯಾಯ (ವೇದಾಧ್ಯಯನ), ಈಶ್ವರಪ್ರಣಿಧಾನ.

೩) ಸು-ಆಸನಸ್ಥಃ—ಸ್ಥಿರಸುಖಮ್ ಆಸನಮ್ । (ಯೋ. ಸೂ. ೨. ೪೬) ಪ್ರಸನ್ನಃ— ಕ್ಷುತ್ತೃಷಾಚಿಂತಾಲಸ್ಯಾದಿಭಿಃ ಅಖಿನ್ನಃ ।

೪) ಪ್ರಾಣಾಯಾಮ-ಕ್ರಮೇಣ— ತಸ್ಮಿನ್ ಸತಿ ಶ್ವಾಸಪ್ರಶ್ವಾಸಯೋಃ ಗತಿವಿಚ್ಛೇದಃ ಪ್ರಾಣಾಯಾಮಃ । (ಯೋ. ಸೂ. ೨. ೪೭)

೫ ಆಹೃತ-ಚಪಲ-ಮನಃ— ಸ್ವವಿಷಯಾಸಂಪ್ರಯೋಗೇ ಚಿತ್ತಸ್ಯ ಸ್ವರೂಪಾನುಕಾರಃ ಚ ಇಂದ್ರಿಯಾಣಾಂ ಪ್ರತ್ಯಾಹಾರಃ । (ಯೋ. ಸೂ. ೨. ೫೪)

ವಿಷಯಗಳಲ್ಲಿ ತೊಡಗಿದ ಮನಸ್ಸನ್ನು ಮರಳಿ ತರುವದು. ಹೋಲಿಸಿ—
ಯತೋ ಯತೋ ನಿಶ್ಚರತಿ ಮನಶ್ಚಂಚಲಮಸ್ಥಿರಮ್ ।
ತತಸ್ತತೋ ನಿಯಮ್ಯೈತದಾತ್ಮನ್ಯೇವ ವಶಂ ನಯೇತ್ ॥

ಗೀತಾ—೬.೨೬

೬) ಸ್ಥೂಲಸೂಕ್ಷ್ಮೇ ನಿರುಧ್ಯ—ದೇಶಬಂಧಃ ಚಿತ್ತಸ್ಯಧಾರಣಾ ।

(ಯೋ. ಸೂ. ೩.೧)

ಪರ್ವತದ ಶಿಖರ, ಚಂದ್ರ, ನಕ್ಷತ್ರ, ಜ್ವಾಲೆ, ಭಗವನ್ಮೂರ್ತಿ ಮುಂತಾದ ಸ್ಥೂಲವಸ್ತುಗಳ ಮೇಲೆ ಮನಸ್ಸನ್ನಿಡುವದು ಅಥವಾ ಸೂಕ್ಷ್ಮನಾದ ಒಳಗಿನ ಆತ್ಮನಮೇಲೆ.

೭) ಧ್ಯಾಯನ್—ತತ್ರ ಪ್ರತ್ಯೇಕತಾನತಾ ಧ್ಯಾನಮ್ ।

(ಯೋ. ಸೂ. ೩.೨)

ಧ್ಯಾನವೆಂದರೆ ಆತ್ಮಪರವಾಗಿ ಯಾವಾಗಲೂ ಜಾಗ್ರತವಾಗಿರುವದು.

೮) ಸ್ಥಿರಗಲಿತಮನಾಃ—ತದೇವಾರ್ಥ ಮಾತ್ರನಿರ್ಭಾಸಂ ಸ್ವರೂಪಶೂನ್ಯ-ಮಿವ ಸಮಾಧಿಃ । (ಯೋ. ಸೂ. ೩.೩)

ಅತ್ರ ಸ್ಥಿರಮಿತಿ ಸಂಪ್ರಜ್ಞಾತೋ ಗಲಿತಮಿತಿ ಅಸಂಪ್ರಜ್ಞಾತಃ ಚ ಲಕ್ಷಣೇನ ದರ್ಶಿತಃ ।

ಸಮಾಧಿಯು ಎರಡು ತರಹದ್ದಾಗಿ ಹೇಳಲಾಗಿದೆ—ಸಂಪ್ರಜ್ಞಾತ ಮತ್ತು ಅಸಂಪ್ರಜ್ಞಾತ. (ವಿಷಯವಿರುವ ಮತ್ತು ಇಲ್ಲದ ಧ್ಯಾನ.)

ಮೋಹಬಂಧ—ಮೋಹದ ಕಟ್ಟಳೆ ಅಥವಾ ತನ್ನ ಅನುಭವಗಳಿಗೆ ಇಂದ್ರಿಯಗಳು, ಬುದ್ಧಿ ಮತ್ತು ಮನಸ್ಸು ಇವುಗಳನ್ನವಲಂಬಿಸಿದ ಜೀವನಲ್ಲಿಯ ಅವಿದ್ಯೆಯ ಕಾರಣದಿಂದಾಗಿ ಸಹಜವಾದ ವಿಷಯಾಸಕ್ತಿ.

ವ್ಯಾಖ್ಯಾಕಾರರು ಶ್ರೀ ಶಂಕರಾಚಾರ್ಯರ ಉಪದೇಶಸಾಹಸ್ರಿಯಿಂದ (೧೦. ೧-೩) ಈ ಕೆಳಗಿನ ಮೂರು ಶ್ಲೋಕಗಳನ್ನು ಉದಾಹರಿಸುತ್ತಾರೆ.

ಶ್ರೀಮದ್ಭಗವತ್ಪಾದಾ ಅಪಿ ಏವಮೇವ ಅಭಿನಿನ್ಯುः ।
ದೃಶಿಸ್ವರೂಪಂ ಗಗನೋಪಮಂ ಪರಂ
ಸಕೃದ್ವಿಭಾತಂ ತ್ವಜಮೇಕಮಕ್ಷರಮ್ ।
ಅಲೇಪಕಂ ಸರ್ವಗತಂ ಯದದ್ವಯಂ
ತದೇವ ಚಾಹಂ ಸತತಂ ವಿಮುಕ್ತ ಓಂ ॥
ದೃಶಿಸ್ತು ಶುದ್ಧೋಽಹಮವಿಕ್ರಿಯಾತ್ಮಕೋ
ನ ಮೇಽಸ್ತಿ ಕಶ್ಚಿದ್ವಿಷಯಃ ಸ್ವಭಾವತಃ ।
ಪುರಸ್ತಿರಶ್ಚೋರ್ಧ್ವಮಧಶ್ಚ ಸರ್ವತಃ
ಸು-ಪೂರ್ಣಭೂಮಾ ತ್ವಜ ಆತ್ಮನಿ ಸ್ಥಿತಃ ॥
ಅಜೋಽಮರಶ್ಚೈವ ತಥಾಽಜರೋಽಮೃತಃ
ಸ್ವಯಂಪ್ರಭಃ ಸರ್ವಗತೋಽಹಮದ್ವಯಃ ।
ನ ಕಾರಣಂ ಕಾರ್ಯಮತೀವ ನಿರ್ಮಲಃ
ಸದೈವ ತೃಪ್ತಶ್ಚ ವಿಮುಕ್ತ ಓಮಿತಿ ॥

ಈ ಪದ್ಯಗಳನ್ನು ಶ್ರೀ ವಿದ್ಯಾರಣ್ಯರು ಜೀವನ್ಮುಕ್ತಿವಿವೇಕದಲ್ಲಿ (ಮನೋ-ನಾಶಪ್ರಕರಣ) ಮತ್ತು ಸದಾನಂದರು ವೇದಾಂತಸಾರದಲ್ಲಿ ಉದಾಹರಿಸಿದ್ದಾರೆ.

೧೨. ವಾಕ್ಯತಃ ಯೋಗತಃ ವಾ—(ಹಠಯೋಗ ಅಥವಾ ಧ್ಯಾನದ ಸಾಧನೆಯಿಂದ) ಆತ್ಮನನ್ನು ಸಾಕ್ಷಾತ್ಕರಿಸಿಕೊಂಡ ಮನುಷ್ಯನು ಮನಬಂದಂತೆ ನಡೆದರೂ ಅವನು ಬಂಧನಕ್ಕೊಳಗಾಗುವದಿಲ್ಲ.

ಹೋಲಿಸಿ—

ಯೋ ಅಕಾಮೋ, ನಿಷ್ಕಾಮಃ, ಆಪ್ತಕಾಮಃ, ಆತ್ಮಕಾಮಃ, ನ ತಸ್ಯ ಪ್ರಾಣಾ ಉತ್ಕ್ರಾಮಂತಿ, ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ । —ಬೃ. ೪.೪.೬

೧೩. ಆತ್ಮಸಾಕ್ಷಾತ್ಕಾರವು ಪರಮಪುರುಷಾರ್ಥವು. ಹೋಲಿಸಿ—

ಆತ್ಮಲಾಭಾನ್ನ ಪರಂ ವಿದ್ಯತೇ ।

೧೪. ಸಾಕ್ಷಾತ್ಕಾರವು ಯಾವುದೇ ಕಳೆದುದನ್ನು ಹುಡುಕುವದಲ್ಲ ಇದ್ದುದರ ಬಗ್ಗೆ ಎಚ್ಚರವಾಗುವದು.

ಪದೇನ ಅನುವಿಂದೇತ—ಕಳೆದ ಆಕಳಿನ ಹೆಜ್ಜೆಗಳ ಗುರುತುಗಳ ಮೇಲಿಂದ ಅದನ್ನು ಹೇಗೆ ಪಡೆಯಬಹುದೋ ಹಾಗೆ ಆತ್ಮನು ಪವಿತ್ರವಾದ ಪದಗಳಿಂದ ತಿಳಿಯಲಾಗುವನು.

ತದಾಕ್ರಮ್ಯ— ಆತ್ಮಾ ಏವ ಇದಮ್ ಅಗ್ರೇ ಆಸೀತ್....ಯಥಾ ಹ ವೈ ಪದೇನ ಅನುವಿಂದೇತ್' ಏವಂ ಕೀರ್ತಿಂ ಶ್ಲೋಕಂ ವಿಂದತೇ ಯ ಏವಂ ವೇದ ।

—ಬೃ. ೧.೪.೧–೭

೧೫. ಒಮ್ಮೆ ನಾಶವಾದ ಅವಿದ್ಯೆಯು ಇನ್ನೊಮ್ಮೆ ಬರಲಾರದು. ಅಭಾವವು ನಾಲ್ಕು ತರಹದ್ದು. ಪ್ರಾಗಭಾವ (ಕಾರ್ಯಕ್ಕೂ ಮೊದಲಿರುವ). ಪ್ರಧ್ವಂಸಾಭಾವ. (ಅನಂತರದ ನಾಶದಿಂದಾದ ಅಭಾವ), ಅತ್ಯಂತಾಭಾವ (ತ್ರಿಕಾಲದಲ್ಲಿರುವ ಅಭಾವ) ಮತ್ತು ಅನ್ಯೋನ್ಯಾಭಾವ (ಪರಸ್ಪರವಾಗಿ ಬರುವ ಅಭಾವ). ಬಾಧವು ಮೂರನೇ ತರಹದ ಅಭಾವಕ್ಕೆ ಸೇರಿದುದು. ಅಧ್ಯಸ್ತವಾದುದು ಯಾವಾಗಲೂ ಇರದೇ ಇರುವುದು.

ನಾಭಾವಮಾತ್ರಪ್ರಥಾ— ಬಾಧವು ಕೇವಲ ಒಂದು ವಸ್ತುವಿನ ಅಭಾವವೆಂದಲ್ಲ. ಏಕೆಂದರೆ ಹಾವು ಬಾಧಿತವಾದ ಮೇಲೆ ಹಗ್ಗ ಪ್ರತ್ಯಕ್ಷವಾಗುವದು.

ಅಧಿಷ್ಠಾನರೂಪಃ—ಸಿಂಪು ಮತ್ತು ತೋರುವ ರಜತದಂತೆ, ಕಲ್ಪಿತ ವಸ್ತುವಿನ ಅಭಾವವು ಅದು ಅಧ್ಯಸ್ತವಾದ ಅಧಿಷ್ಠಾನದಿಂದ ಬೇರೆ ಇರುವದಿಲ್ಲ.

ಒಂದು ವಸ್ತುವಿನ ನಾಶವೆಂದರೆ ಅದರ ವಿಕಾರ. ಒಂದು ವಸ್ತುವಿನ ಅತ್ಯಂತಾಭಾವವು ಅದರ ತಾತ್ಪೂರ್ತಿಕವಾದ ಇರುವಿಕೆಗೆ ಅವಕಾಶ ಮಾಡಿಕೊಡುವದಿಲ್ಲ. ಯಾವುದು ಇರುವದೋ ಅದು ಸತ್ಯ. ಯಾವುದು ಇರದೇ ಕೇವಲ ತೋರುವದೋ ಅದು ಅಸತ್ಯ. ಅಸತ್ಯವಾದ ಜಗತ್ತು ಅವಿದ್ಯೆಯ ಕಾರಣದಿಂದ ಸತ್ಯವಾದ ಬ್ರಹ್ಮದಲ್ಲಿ ತೋರುವದು. ಅವಿದ್ಯೆಯ ನಾಶವೆಂದರೆ ಅದರ ವಿಕಾರವಾಗದೆ ಅನಂತರ ಎಂದೂ ತೋರಿಬರದ ನಾಶವೇ ಆಗಿದೆ. ಅದ್ದರಿಂದ ಅಜ್ಞಾನ ಒಂದು ವಸ್ತುವಲ್ಲ. ಅದು ವಿಕೃತವಾಗದೆ ಮೋಕ್ಷದೆಸೆಯಲ್ಲಿ ಬಾಧಿತವಾಗುತ್ತದೆ.

೧೬. ಕರ್ಮವು ಮೂರು ತರಹದ್ದು. ಸಂಚಿತ, ಪ್ರಾರಬ್ಧ ಮತ್ತು ಕ್ರಿಯಮಾಣ ಅಥವಾ ಆಗಾಮಿ. ಸಂಚಿತ ಕರ್ಮವು ಸಾಕ್ಷಾತ್ಕಾರದಿಂದ ಸುಟ್ಟುಹೋಗುತ್ತದೆ. ಕ್ರಿಯಮಾಣ (ಮುಂದೆ ಮಾಡಲ್ಪಡುವ) ಕರ್ಮವು ವಿಮುಕ್ತಾತ್ಮನನ್ನು ಮುಟ್ಟುವದಿಲ್ಲ. ಹೋಲಿಸಿ—

ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ
ನಿರಂಜನಃ ಪರಮಂ ಸಾಮ್ಯಮುಪೈತಿ ದಿವ್ಯಮ್ ॥

—ಮು. ೩.೧.೩

ತದ್ಯಥಾ ಪುಷ್ಕರಪಲಾಶೇ ಆಪೋ ನ ಶ್ಲಿಷ್ಯಂತೇ, ಏವಂ ಹಿ ಏವಂವಿದಿ ಪಾಪಂ ಕರ್ಮ ನ ಶ್ಲಿಷ್ಯತೇ । —ಛಾ. ೪.೧೪.೩

ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ ।

—ಗೀತಾ ೪.೩೭

ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ । —ಗೀತಾ ೫.೧೦

ಇಲ್ಲಿ 'ಕರ್ಮ'ವು ಕರ್ಮದ ಫಲವಾದ ಪುಣ್ಯ ಅಥವಾ ಪಾಪ ಎಂಬ ಅರ್ಥದಲ್ಲಿ ಪರಿಗಣಿಸಲಾಗಿದೆ.

೧೭. ಇತರ ಕರ್ಮಗಳು ಫಲಿಸದಿದ್ದರೂ ಪ್ರಾರಬ್ಧಕರ್ಮವು (ಫಲೋನ್ಮುಖಕರ್ಮವು) ಮಾತ್ರ ಫಲ ಕೊಡುತ್ತಲೇ ಹೋಗುವದು. ಅದು ದೇಹದೊಡನೆ ಮುಗಿಯುತ್ತದೆ. ಮುಕ್ತನಾದವನೂ ಕೂಡ ತನ್ನ ಪ್ರಾರಬ್ಧಕರ್ಮ ಮುಗಿಯುವವರೆಗೆ ಜೀವಿಸಬೇಕಾಗುತ್ತದೆ.

ಹೋಲಿಸಿ —

ತಸ್ಯ ತಾವದೇವ ಚಿರಂ ಯಾವನ್ನ ವಿಮೋಕ್ಷ್ಯೇ ಅಥ ಸಂಪತ್ಸ್ಯೇ ।

—ಛಾ. ೬.೧೪.೨

ವ್ಯಾಖ್ಯಾನದಲ್ಲಿ ಅತ್ಯಂತ ಮನಮೋಹಕವಾದ ಉದಾಹರಣೆಯನ್ನು ಕೊಡಲಾಗಿದೆ. ಅಶ್ವತ್ಥಾಮನ ದಿವ್ಯಾಸ್ತ್ರದಿಂದ ಸುಡುವ ಅರ್ಜುನನ ರಥವನ್ನು ಶ್ರೀಕೃಷ್ಣನು ಯುದ್ಧ ಮುಗಿಯುವವರೆಗೆ ತನ್ನ ಶಕ್ತಿಯಿಂದ ಅದನ್ನು ತಡೆಗಟ್ಟಿದನು. (ಇಲ್ಲಿ ಇದು ಅರ್ಜುನನ ಪ್ರಾರಬ್ಧಕರ್ಮಕ್ಕೆ ಅನುಸರಿಸಿ ಆದುದು.)

೧೮. ನ ಹಿ ಆತ್ಮಬುದ್ಧಿಃ ತನೌ—ದೇಹೇಂದ್ರಿಯಾದಿಷು ಅಹಮಭಿಮಾನರಹಿತಸ್ಯ ಪ್ರಮಾತೃತ್ವಾನುಪಪತ್ತೌ ಪ್ರಮಾಣಪ್ರವೃತ್ತ್ಯನುಪಪತ್ತೇಃ ।

—ಬ್ರ. ಸೂ. ಅಧ್ಯಾಸಭಾಷ್ಯ

ಅಹೇಃ ನಿರ್ಲ್ವಯಿನ್ಯಾಪ್ ಇವ—ಯಥಾ ಅಹಿನಿರ್ಲ್ವಯನೀ ವಲ್ಮೀಕೇ ಮೃತಾ ಪ್ರತ್ಯಸ್ತಾ ಶಯೀತ, ಏವಮೇವ ಇದಂ ಶರೀರಂ ಶೇತೇ। ಅಥಾಯಮ್ ಶರೀರಃ ಅಮೃತಃ ಪ್ರಾಣಃ ಬ್ರಹ್ಮೈವ, ತೇಜ ಏವ। —ಬೃ. ೪.೪.೭

೧೯. ಆತ್ಮನಃ ಅನಿಷ್ಟಕಾರೀ—ತಸ್ಯ ನ ಹ ದೇವಾಶ್ಚನ ಅಭೂತ್ಯಾ ಈಶತೇ ಆತ್ಮಾ ಹಿ ಏಷಾಂ ಸ ಭವತಿ। —ಬೃ. ೧.೪.೧೦

೨೦. ಮುಕ್ತನಾದವನು ಯಾವಾಗಲೂ ಪಾಪರಹಿತನಾದವನು. ಅದು ಅವನ ಮನಸ್ಸಿನ ಒಳ್ಳೆಯ ಸಂಸ್ಕಾರಗಳಿಂದಾಗುವದು.

೨೧. ಭಾವಯನ್ ಆತ್ಮನಾ–ಯತ್ರ ಚೈವಾತ್ಮನಾऽತ್ಮಾನಂ ಪಶ್ಯನ್ನಾತ್ಮನಿ ತುಷ್ಯತಿ। —ಗೀತಾ ೬.೨೦

೨೨. ಮುಕ್ತಾತ್ಮರ ವರ್ತನೆಯು ನಾನಾತರಹದ್ದು. ವಶಿಷ್ಠಾದಿ ಮಹರ್ಷಿಗಳು ವರ್ಣಾಶ್ರಮಾದಿ ಧರ್ಮನಿರತರಾಗಿದ್ದುದೂ, ಜಡಭರತನಂತಹ ಮಹಾತ್ಮರು ಹುಚ್ಚನಂತೆ ವರ್ತಿಸಿದ್ದು, ಸೌಭರಿ ಮುಂತಾದ ದ್ರಷ್ಟಾರರು ವಿಷಯಸುಖದಲ್ಲಿ ನಿರತರಾದದ್ದು ಕಂಡುಬರುವದೆಂದು ಲೇಖಕರು ಟೀಕೆಯಲ್ಲಿ ತಿಳಿಹೇಳಿದ್ದಾರೆ.

೨೩. ಮುಕ್ತನಾದವನು ಸ್ವಚ್ಛಂದವಾಗಿ ಈ ಜಗತ್ತಿನಲ್ಲಿ ಸಂಚರಿಸುತ್ತಾನೆ.

೨೪. ಮುಕ್ತನಾದವನು ದೇವರಿಗಿಂತ ದೊಡ್ಡವನೆಂದು ಹೇಳಲಾಗಿದೆ. ಮೊದಲು ಅವನು ಜೀವಚೈತನ್ಯನಾಗಿದ್ದು ಈಗ ವಿಶ್ವಚೈತನ್ಯವಾದ ಪರಬ್ರಹ್ಮದಲ್ಲಿ ಲೀನನಾಗಿದ್ದಾನೆ.

೨೫. ಮುಕ್ತನಾದವನು ಜನರನ್ನು ಆತ್ಮಜ್ಞಾನದಿಂದ ಉದ್ಧಾರ ಮಾಡಬೇಕೆಂದು ಜಗತ್ತಿನಲ್ಲಿ ಸಂಚರಿಸುತ್ತಾನೆ.

ಸಹಜಾತ್ ಕೌತೂಹಲಾತ್—ಅದು ಕೇವಲ ಸಹಜ ಕುತೂಹಲದಿಂದಾಗಿ; ಹೊರತು ಯಾವ ವಿಶೇಷ ಬಯಕೆಯು ತೀರಬೇಕಾದುದರಿಂದಲ್ಲ.

ಸಾಶ್ಚರ್ಯಂ—ತಾನು ಹೇಗೆ ಬ್ರಹ್ಮವನ್ನು ತಿಳಿಯಲು ಶಕ್ಯನಾದೆನೆಂದು ಆಶ್ಚರ್ಯಪಡುವದು.

ಸಕರುಣಂ—ಮಾನವಕುಲವನ್ನು ಉದ್ಧರಿಸಲು ಕರುಣೆ ತುಂಬಿದವನಾಗಿ.

೨೬. ಯಾವ ಗುರುವಿನ ಉಪದೇಶವು ಪರಮಸುಖವನ್ನು ತಂದುಕೊಟ್ಟಿತೋ ಆ ಉಪದೇಶಕನನ್ನು ಹೃತ್ಪೂರ್ವಕವಾಗಿ ಕೃತಜ್ಞತೆಗಳಿಂದ ನೆನೆಸುತ್ತಾನೆ.

ಅಮೃತಚಿಂತಾಮಣಿ—ಗುರುವು ಅಮೃತವನ್ನು ಅಥವಾ ಬ್ರಹ್ಮಜ್ಞಾನವನ್ನು ದಯಪಾಲಿಸುವ ಚಿಂತಾಮಣಿಯೇ ಸರಿ.

೨೭. ಜಗತ್ತು ಇರುವಾಗ ಆತ್ಮಾನಂದವನ್ನು ಅನುಭವಿಸಿರಲಿಲ್ಲ. ಆತ್ಮಾನಂದವಿರುವಾಗ ಜಗತ್ತು ಇಲ್ಲವೇ ಇಲ್ಲದ್ದಾಗಿದೆ. ಆತ್ಮಾನಂದವು ವಿಶ್ವಭಾವಿಯಾದುದು. ಆತ್ಮನು ಕೇವಲ ಅದನ್ನರಿಯುವವನಷ್ಟೇ. ಬೇರೆ ಏನೂ ಇಲ್ಲ.

೨೮. ಆತ್ಮನು ಪ್ರಕಾಶಿಸುವಾಗ ಜಗತ್ತು ಮಾಯವಾಗುತ್ತದೆ.

೨೯. ಜಗತ್ತಿನ ತೋರುವಿಕೆಯು ಅನಿರ್ವಚನೀಯವಾದರೆ ಅದರ ತೋರದಿರುವಿಕೆಯೂ ಕೂಡ ಹಾಗೆಯೇ ಸರಿ.

೩೦. ನಿರ್ವಿಕಾರಿಯಾದ ಬ್ರಹ್ಮದಿಂದ ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಲಯ ಇವು ಸಮವಾಗಿ ಮಿಥ್ಯೆಯಾಗಿವೆ. ಇದೇ ಗೌಡಪಾದರ ಅಜಾತಿವಾದದ ತಿರುಳಾಗಿದೆ.

೩೧. ನಿರ್ಗುಣವಾದ ಬ್ರಹ್ಮ ನಿಜವಾಗಿಯೂ ಜಗತ್ತನ್ನು ಹೇಗೆ ಹುಟ್ಟಿಸುವದು ? ಸಾಧ್ಯವೇ ಇಲ್ಲ.

೩೨. ಸ್ಪಷ್ಟವಾಗಿ ತೋರಿಬರುವ ಜಗತ್ತಿನ ರಕ್ಷಣೆಯಾದರೂ ಕೂಡ ಹೇಳಲಸಾಧ್ಯವೇ ಸರಿ.

ಈ ಪದ್ಯದಲ್ಲಿಯ ಶಬ್ದಗಳಿಗೆ ಈ ಕೆಳಗಿನಂತೆ ದ್ವಂದ್ವಾರ್ಥವಿದೆ.

ಭೃತ್ಯಾ:—೧) ಅವಶ್ಯಭರಣೀಯಾಃ ಸ್ವದೇಹಪುತ್ರದಾರಾದಯಃ
೨) ಭಟಾಃ

ಅಮಾತ್ಯಾ:—೧) ಬಾಹ್ಯವ್ಯವಹಾರಸಚಿವಾ ಮನೋಬುದ್ಧ್ಯಾದಯಃ
೨) ಮಂತ್ರಿಣಃ

ವಿಷಯಾ:—೧) ಶಬ್ದಾದಯಃ ಉಪಭೋಗ್ಯಾಃ
೨) ಪಾಲನೀಯದೇಶಾಃ

ಹಯಾ:—೧) ಇಂದ್ರಿಯಾಣಿ (ಹಯಾನಾಹುಃ) ೨) ತುರಂಗಮಾಃ

ಅಶೂನ್ಯಾ:—೧) ಅನಲೀಕಾಃ ಕೋಶಾಃ ಅನ್ನಮಯಾದಯಃ
೨) ಧನರತ್ನಾದಿಕಸಂಭೃತಕೋಶಾಗಾರಾಣಿ

ಪುರನಿವೇಶಾ:— ೧) ಜ್ಞಾನೇಂದ್ರಿಯ–ಕರ್ಮೇಂದ್ರಿಯ–ಪ್ರಾಣ–ಮಹಾಭೂತ–ಅಂತ:ಕರಣ–ಅವಿದ್ಯಾ-ಕಾಮ–ಕರ್ಮ–ಲಿಂಗದೇಹ ಲಕ್ಷಣಪುರ್ಯಷ್ಟಕಸ್ಯ ಅಧ್ಯಾಸಾಭಿಮಾನರೂಪಾ:
೨) ನಗರಸ್ಯ ವಸತಯಃ

ಸುಹೃದ:— ೧) ಶೋಭನಂ ಸಮ್ಯಕ್ ಪ್ರವರ್ತಕಂ ಹೃತ್ ಮನೋ ಯೇಷು ಲೌಕಿಕವ್ಯಾಪಾರೇಷು ತೇ ವ್ಯಾಪಾರಾ: ೨) ಮಿತ್ರಾಣಿ

ಅರಿಚಮೂಮ್ — ೧) ಕಾಮ-ಕ್ರೋಧ-ಲೋಭ-ಮೋಹ-ಮದ-ಮತ್ಸರ ಲಕ್ಷಣಾರಿಷಡ್ವರ್ಗಸೇನಾಂ ೨) ಶತ್ರುಸೇನಾಂ

ಏಕಾಕೀ—೧) ಅದ್ವಿತೀಯಃ ೨) ಅಸಹಾಯಶೂರಃ

ವಿಜಿತ್ಯ—೧) ಅಭಿಭೂಯ ೨) ಪರಾಭಾವ್ಯ

೩೩. ತೋರುವ ಜಗತ್ತಿನ ಲಯವೂ ಕೂಡ ಅಷ್ಟೇ ಅನಿರ್ವಚನೀಯವಾದುದು.

ಕವಲಯತಿ -ಯಸ್ಯ ಬ್ರಹ್ಮ ಚ ಕ್ಷತ್ರಂ ಚೋಭೇ ಭವದ ಓದನಃ ।
ಮೃತ್ಯುರ್ಯಸ್ಯೋಪಸೇಚನಂ ಕ ಇತ್ಥಾ ವೇದ ಯತ್ರ ಸ: ॥
— ಕಠ–೨.೨೫

೩೪. ಈ ಪದ್ಯವು ಒಬ್ಬ ದುಷ್ಟನ ನಡತೆಯನ್ನು ವಿವರಿಸುತ್ತದೆ. ಅವನು ಒಬ್ಬ ಅರೆಹುಚ್ಚನ ಧನವನ್ನಪಹರಿಸುತ್ತಾನೆ. ಯಾರನ್ನೂ ನಂಬುವದಿಲ್ಲ; ಮತ್ತು ನರಕ (ತೋರುವ ಪಾಪ)ಕ್ಕೆ ಹೆದರುವದಿಲ್ಲ; ಅವನು ತನ್ನ ಮೋಸತನದ ನಡತೆಯು ಬಯಲಾಗಬಾರದೆಂದು ಒಳ್ಳೇ ಗುಣಗಳನ್ನು ದ್ವೇಷಿಸುತ್ತಾನೆ, ಮತ್ತು ಅತಿಶಯ ಸ್ವಾರ್ಥಿಯಾಗಿರುತ್ತಾನೆ. ಇನ್ನೊಂದು ಒಳಗಿನ ಅರ್ಥವು ಹೀಗಿದೆ :—

ಮೂಢೈಃ—ಜಡೈಃ ಅಂತಃಕರಣೇಂದ್ರಿಯಾದಿಭಿಃ

ನ್ಯಸ್ತಮ್—ಅಧ್ಯಾಸೇನ ಸತ್ಯತಯಾ ಪ್ರತ್ಯಾಯಿತಮ್

ಅರ್ಥನಿಚಯಂ—ಶಬ್ದಾದಿವಿಷಯಜಾತಮ್

ಅಪಲಪಾಮಿ—ತಚ್ಛೃತ್ವೇನ ಅವಧಾರಯಾಮಿ, ನಿಷೇಧಾಮಿ ಚ

ವಿಶ್ವಾಸ್ಯಃ—ಪರಮಾರ್ಥಬುದ್ಧ್ಯಾ ಉಪಾದೇಯಃ

ನ ಯಮದಂಡಾತ್ ಭಯಮ್—ಆತ್ಮದರ್ಶನನಿರ್ದಗ್ಧಪಾಪ್ಮತ್ವಾತ್ ನರಕಪಾತಾದಿದಂಡನಾತ್ ಭಯಂ ನಾಸ್ತಿ, ಅಭಯಾತ್ಮದರ್ಶಿತ್ವಾತ್ ।

ಗುಣದ್ವೇಷೀ—ಗುಣಾನ್ ಸತ್ತ್ವಾದೀನ್ ದ್ವೇಷ್ಟಿ, ಅನೃತಕಾರ್ಯಪರಿಣಾಮಿತ್ವಾತ್ ಏವ ಅನೃತತ್ವಬುದ್ಧ್ಯಾ ಅಭಿಭವತಿ ।

ಸ್ವಾರ್ಥಪ್ರಿಯಃ—ಸ್ವ ಆತ್ಮಾ ಏವ ಅರ್ಥಃ ಪರಮಾರ್ಥ ಪ್ರೇಮಾಸ್ಪದಂ, ಯಸ್ಯ ತಥಾವಿಧಃ

ಜಗದ್ವಂಚನಪರಂ—ಸರ್ವಾಪಲಾಪನಿಪುಣಮ್

೩೫. ಈ ಪದ್ಯವು ಸ್ಪಷ್ಟವಾಗಿ ಮುಕ್ತಾತ್ಮನ ದುರ್ದೈವವನ್ನು ವಿವರಿಸುತ್ತದೆ. ಶಬ್ದಗಳ ದ್ವಂದ್ವಾರ್ಥವು ಹೀಗಿದೆ.

ತಾತ:—೧) ಕಾರಣಂ ೨) ಪಿತಾ

ಮಾತಾ—೧) ಪರಿಮಾತಾ, ಪರಿಚ್ಛೇದಕಃ ೨) ಜನನೀ

ಸುಹೃತ್—೧) ಅಂತರ್ಬಹಿಶ್ಚ ಸರ್ವವ್ಯವಹಾರನಿರ್ವಾಹಕತ್ವಾತ್ ಇತರಕರಣೇಭ್ಯ: ಶೋಭನಂ ಹೃತ್ ಮನ:

೨) ಮಿತ್ರಂ

ಧಾಮ ನಿಧನಂ—೧) ಶರೀರಗೃಹಂ ತೃತೀಯಂ ಮಹಾಭೂತಂ (ತೇಜಸ್), ನಿಬಂಧನಂ, ಮರಣಾದಿ (ನಾಸ್ತಿ)

೨) ಧಾಮನಿ (ಗೇಹೇ) ಧನಂ (ವಿತ್ತಂ) ನ ವರ್ತತೇ

ಅನ್ನಂ—೧) ಪೃಥಿವೀ (ಪೃಥಿವೀ ವಾ ಅನ್ನಂ ಇತಿ ಶ್ರುತೇ: । —ತೈ. ೩.೯.೧)

೨) ಅದನೀಯಂ ಧಾನ್ಯಾನಿ

ಪಾನಂ—೧) ಜಲಂ ೨) ಪಾನಾರ್ಹಂ ಪಯುಸ್ತಕ್ರಾದಿ

ಸತತಗತಿಃ—೧) ವಾಯುಃ ೨) ಸದೈವ ಪರಿಪಾಲಕ: ಅನ್ಯಃ ಬಂಧುಃ ಸ್ವಾಮ್ಯಾದಿ:

ಅಂಬರಂ—೧) ಆಕಾಶಃ ೨) ವಸ್ತ್ರಂ

ಚರಂತ್ರಮ್—೧) ಕಾರಣಸ್ಯ ಅವಿದ್ಯಾದೇ: ಕಾರ್ಯಸ್ಯ ಮಹಾಭೂತಾದೇಃ ಚ ಪರಿಚ್ಛೇದಸ್ಯ ಅಭಾವಾತ್ ಸರ್ವತಃ ವ್ಯಾಪ್ನುವಾನಮ್

೨) ಗ್ರಾಮಾತ್ ಗ್ರಾಮಂ ಗೃಹಾತ್ ಗೃಹಂ ಭೈಕ್ಷಕರಣಾದ್ಯಾಶಯಾ ಅಟಂತಮ್ ।

ಕೃತ್ಸ್ನಂ—೧) ಸರ್ವೇಷಾಂ ಹೃದಯಪ್ರದೇಶೇ ಚರಂತಮ್ ಆತ್ಮತಯಾ ಪ್ರತೀಪ್ಸಂ

೨) ಸರ್ವಂ ದೇಶಂ (ಚರಂತವಮ್)

ಲೋಕಃ—೧) ಲೋಕಯತಿ ಬಾಹ್ಯಾರ್ಥಾನ್ ಇತಿ ಲೋಕಃ ಇಂದ್ರಿಯ-ಕಲಾಪಃ

೨) ಮೂಢಜನಃ

ನ ವಿಮೃಶತಿ—೧) ಶ್ರವಣಾದಿನಾ ನ ವಿಚಾರಯತಿ

೨) ನ ಪಶ್ಯತಿ ದಯಯಾ

ದೌರ್ಗತ್ಯಂ—೧) ಅನ್ಯ ದುರ್ಗಮತ್ವಂ

೨) ದಾರಿದ್ರ್ಯಂ

ಸುಖಸಾಮ್ರಾಜ್ಯಂ— ಸಮ್ಯಕ್ ರಾಜತೇ ದೀಪ್ಯತೇ ತದ್ಭಾವಃ ಸುಖ-ಸಾಮ್ರಾಜ್ಯಂ ಸೌಖ್ಯೋತ್ಕರ್ಷಶಾಲಿ-ಸರ್ವಾಧಿಪತ್ಯಂ ಚ ಅತ್ಯಂತವಿರುದ್ಧಮಪಿ ಸ್ವತಃ ಸಿದ್ಧಮ್ ಏವಾಸ್ತಿ ಇತ್ಯಹೋ ಆಶ್ಚರ್ಯ ಮಿತ್ಯರ್ಥಃ ।

೩೬. ಈ ಪದ್ಯವು ವಿರೋಧಾಭಾಸವುಳ್ಳದ್ದು. ಅದರ ವಿರೋಧವನ್ನು ಹೀಗೆ ಪರಿಹರಿಸಬೇಕು.

ವಿಶ್ವಂ—ಯತ್ ಆತ್ಮವಸ್ತು ಮಾಯಿಕದೃಷ್ಟ್ಯಾ ಅವಲೋಕ್ಯಮಾನಂ ಜಗ-ದೇವೇತಿ ಸರ್ವಜಗದಾಕಾರೇಣ ನಟವತ್ ವ್ಯವಸ್ಥಿತಂ ನೃತ್ಯತಿ

ಅವಿಶ್ವಂ—ನಿಷ್ಪ್ರಪಂಚಮ್

ಬಹಿರಂತಶ್ಚ—'ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ ।'

—ಈಶಾವಾಸ್ಯ-೫

ನೋ ಬಹಿಃ ನಾನ್ತಃ— 'ತದೇತತ್ ಬ್ರಹ್ಮ ಅಪೂರ್ವಮ್ ಅನಪರಮ್ ಅನಂತರಮ್ ಅಬಾಹ್ಯಮ್ ಅಯಮಾತ್ಮಾ ಬ್ರಹ್ಮ ಸರ್ವಾನುಭೂಃ ।'

—ಬೃ. ೨.೫.೧೯

ಭವಪಾರಂ—ಭವಸ್ಯ ಸಂಸಾರಸಮುದ್ರಸ್ಯ ಪಾರಂ ಪರತೀರಭೂತಂ

ಅಪಾರಂ—ಅನವಧಿಕಮ್

ಅನಹಂ—ಅಹಂಕಾರ ನಿಷ್ಕರ್ಷಾತ್ ಅಹಂ ಶಬ್ದವಾಚ್ಯಮ್ ।

೩೭. ಜೀವನ್ಮುಕ್ತನ ಆನಂದವು ದೇವತೆಗಳಾದ ಬ್ರಹ್ಮ, ವಿಷ್ಣು ಮತ್ತು ಶಿವ ಇವರ ಸಂತೋಷಕ್ಕೂ ಮಿಗಿಲಾದುದು. ಇದನ್ನು ಇಲ್ಲಿ ವಿವರಿಸಲಾಗಿದೆ. ಅಲ್ಲದೆ ಶ್ಲೇಷಮಯವಾದ ವಿಶೇಷಣಗಳಿಂದ ಕೆಳಗಿನ ಎರಡು ಶ್ಲೋಕಗಳಲ್ಲಿಯೂ ವಿವರಿಸಲಾಗಿದೆ.

ಆತ್ಮಸುಖಲಾಭೇ ಬ್ರಹ್ಮವಿಷ್ಣುರುದ್ರಾಖ್ಯಾನಾಮ್ ಈಶ್ವರಮೂರ್ತೀನಾಂ ಯತ್ಸರ್ವೈಶ್ವರ್ಯಸುಖಂ ತದಪಿ ತದಾತ್ಮಭಾವಾತ್ ಲಬ್ಧಮೇವ ಇತಿ ನಾಧಿಕಮ್ ಅವಶಿಷ್ಯತೇ ।

ಜಗದ್ವ್ಯಾಪಾರವಿಕ್ಷೇಪರಾಹಿತ್ಯಾತ್ ಸಮಾಹಿತಂ ಸುಖಂ ತತೋಽಪ್ಯಧಿಕಮ್ ಇವ ಇತಿ ವಾ ಜೀವನ್ಮುಕ್ತಿಸುಖಸ್ಯ ಸರ್ವೋತ್ಕರ್ಷಪ್ರತಿಪಾದನಾಯ ತತ್ತದ್ವ್ಯಾಪಾರಮಾತ್ರರಹಿತಂ ಸ್ವಸ್ಯಾಪಿಬ್ರಹ್ಮಾದಿಭಾವಂ ತ್ರಿಭಿಃ ಶ್ಲೋಕೈಃ ದರ್ಶಯತಿ ।

ನ ಸತ್ಯೋ ಮೇ ಲೋಕಃ — ನಿಷ್ಪ್ರಪಂಚಾತ್ಮಭೂತಸ್ಯ ಮಮ ಭೂರಾದಿಃ ಲೋಕಃ ನ ಪರಮಾರ್ಥಃ

ಸರಸಿಜಮ್ — ಹೃದಯಪುಂಡರೀಕಂ ಜೀವಭಾವೇ ಮುಖ್ಯವಿಹಾರಸ್ಥಾನತ್ವೇನ ಉಪಾಸನಸ್ಥಾನತ್ವೇ ಚ ಪ್ರಸಿದ್ಧಮ್

ರಜಃ ಸಂಗಃ — ರಜಸಾ ರಾಗದ್ವೇಷಮೋಹಮಾಲಿನ್ಯೇನ ರಜೋಗುಣೇನ ಚ ಸಂಗಃ

ವಿಧಿಶಬ್ದಃ — 'ಯಜೇತ್' 'ದದ್ಯಾತ್' ಇತ್ಯಾದಿ ನಿಯೋಜಕಲಿಂಗಾದಿಶಬ್ದೋ ನಿಯಮಃ

ವಾಗ್ಭಿಃ ಸಂಸರ್ಗಃ — ಮಹಾವಾಕ್ಯೈಃ ಸಂಸರ್ಗಃ (ಏಕಪದಾರ್ಥಸಂಸೃಷ್ಟಾಪರಪದಾರ್ಥತಯಾ ಬೋಧನಂ ಶಬ್ದಸಂಬಂಧಃ)

ಬ್ರಹ್ಮಾ — 'ಏಷ ಬ್ರಹ್ಮಾ, ಏಷ ಇಂದ್ರ; ಏಷ ಪ್ರಜಾಪತಿಃ'

—ಐ. ೫.೩

೩೮. ಮಾಯೀ — ಮಾಯಾ ಕೂಟವೃತ್ತಂ ಜಗತ್ಕಾರಣೇಶ್ವರಶಕ್ತಿಃ ಚ ತದ್ವಾನ್

ಭೋಗಶಾಯೀ — ಭೋಗಿಷು ವಿಷಯಾಸಕ್ತೇಷು ಶೇತೇ, ಭೋಗಿನಿ ಸರ್ಪಸದೃಶೇ ರಾಗದ್ವೇಷಾದಿವಿಷಜ್ವಾಲಾಕುಲೇ ಸಂಸಾರೇ ವಾ ಶೇತೇ ಆತ್ಮಾನಂ ಅಪ್ರತಿಸಂದಿಧಾನ ಆಸ್ತೇ ಇತಿ ।

ನ ದಶಾವತಾರೀ — ದಶಾಸು ಬಾಲ್ಯಾದಿಷು ಜಾಗ್ರದಾದಿಷು ವಾ ಅವತರಣಶೀಲೋಽಹಂ ನ ಭವಾಮಿ ।

ನ ಪ್ರಪಂಚಃ ಪರಿಪಾಲನೀಯಃ—ನ ರಕ್ಷಣೀಯಃ ಪ್ರವಿಲಾಪನಬಾಧಾಭ್ಯಾಂ ತನ್ನಿರಾಸಕತ್ವಾತ್ ।

ವಿಷ್ಣುಃ—ನಾರಾಯಣಃ ಪರೋ ಜ್ಯೋತಿರಾತ್ಮಾ ನಾರಾಯಣಃ ಪರಃ ।
ನಾರಾಯಣಃ ಪರಂ ಬ್ರಹ್ಮತತ್ತ್ವಂ ನಾರಾಯಣಃ ಪರಃ ॥
—ಮಹಾನಾರಾಯಣ ಉಪ. ೧೧.೧

೩೯. ಮೂರ್ತಯಃ ಅಷ್ಟೌ—೧) ಅಂಡಜ ೨) ಸ್ವೇದಜ ೩) ಉದ್ಭಿಜ್ಜ ೪) ಜರಾಯುಜ ೫) ಅಮ್ಮಯ ೬) ತೈಜಸ ೭) ವಾಯವೀಯ ೮) ಮಾನಸ

ವಿಷಮಾ ದೃಷ್ಟಿಃ–ಭೇದಗ್ರಾಹಿಣೀ ದೃಷ್ಟಿಃ, ಬಹಿರ್ಮುಖಚಿತ್ತವೃತ್ತಿಃ

ಭೂತಿಲೇಪಃ—ಭೂತ್ಯಾ ಜನ್ಮನಾ ಸಂಪದಾ ಚ ಸಂಸರ್ಗಃ ಗರ್ವಃ ಚ ।

(ಭಗವತಸ್ತು ಅಷ್ಟಭೂತಿಸಮೃದ್ಧತ್ವಂ ಭಸ್ಮಾಂಗರಾಗತ್ವಂ ಚ ಪ್ರಸಿದ್ಧಮ್)

ವೃಷೇಣ ಗತಿಃ— ಯಾಗೋಪಾಸ್ತ್ಯಾದಿಜನ್ಯಧರ್ಮೇಣ ದಕ್ಷಿಣಾಯನೋ-ತ್ತರಾಯಣ ಪರಲೋಕಗಮನಮ್ ।

ಬೋಗಿಸಂಗಃ—ವಿಷಯಲಂಪಟೈಃ ಸಮಾಗಮಃ

ಕಾಮಭಂಗಃ—ಮನೋರಥಸ್ಯ ಫಲಾಸಂಪತ್ತಿಃ ಪೂರ್ಣಕಾಮತ್ವಾತ್

ಶಿವಃ— 'ಶಿವಮ್ ಅದ್ವೈತಂ ಚತುರ್ಥಂ ಮನ್ಯಂತೇ ಸ ಆತ್ಮಾ, ಸ ವಿಜ್ಞೇಯಃ ।' —ಮಾ. ೭

ಟೀಕಾಕಾರರು ಹೀಗೆ ಉದಾಹರಿಸುತ್ತಾರೆ—ಯಥಾಹುರ್ವೃದ್ಧಾಃ—

ಶಿವ ಇತ್ಯಹಮಿತ್ಯಭೌ ನ ಭಿನ್ನೌ
ಶಿವ ಏವಾಹಮಹಂ ಶಿವಃ ಸ ಏವ ।
ಯದಿ ನೈವ ಮಮಾತ್ಮತಾ ಶಿವಸ್ಯ
ಪ್ರಸರೇದಪ್ಯಶಿವತ್ವಮಾತ್ಮನೋಽಪಿ ॥

೪೦. ಈ ಪದ್ಯದಲ್ಲಿ ಜ್ಞಾನಿಯು ತನ್ನ ಅವಸ್ಥೆಯನ್ನು ಪರಂಪರಿತರೂಪಕ ಮುಖಾಂತರ ವರ್ಣಿಸುತ್ತಾನೆ. ಜ್ಞಾನಿಯು ತನ್ನ ಅನುಭವದಿಂದ ತರ್ಕ ಅಥವಾ ವಿಚಾರಕ್ಕೂ ನಿಲುಕದ ಚಿದಾವಸ್ಥೆಯುಳ್ಳ ತತ್ತ್ವಜ್ಞಾನಿಯೇ ಆಗಿರುವನು

ಸತ್ತ್ವೋತ್ಕರ್ಷಾತ್—೧) ಸತ್ತ್ವಸ್ಯ ಪ್ರಾತಿಭಾಸಿಕ–ವ್ಯಾವಹಾರಿಕ–ಸತ್ಯ-ತ್ವಾಪೇಕ್ಷಯಾ ಪಾರಮಾರ್ಥಿಕತ್ವೇನ ಉತ್ಕರ್ಷಾತ್ ಆಧಿಕ್ಯಾತ್

೨) ಬಲಾಧಿಕ್ಯಾಚ್ಚ

ಲೀಲಾವೃತ್ತಿ–ಪ್ರಶಮಿತ–ಮಹಾಮೋಹ–ಮತ್ತೇಭಜಾಲ:— ೧) ಜಾಗ್ರದ್ವಿಹಾರಾಂತರ್ಗತ–ಶ್ರವಣಾದಿಲೀಲಾಜನ್ಯಯಾ ಚರಮಸಾಕ್ಷಾತ್ಕಾರವೃತ್ತ್ಯಾ ಪ್ರಕರ್ಷೇಣ ಶಮಿತಂ ನಾಶಿತಂ ಮಹಾಮೋಹಮತ್ತೇಭಜಾಲಂ ಕಾಲತೋ ದೇಶತ: ಕಾರ್ಯತಶ್ಚ ಅತಿವಿಪುಲಮೂಲಾಜ್ಞಾನಲಕ್ಷಣಮತ್ತಮತಂಗಜಸಮೂಹಃ ಯೇನ

೨) ಲೀಲಾರ್ಥಂ ಕ್ರೀಡಾರ್ಥಂ ವೃತ್ತ್ಯರ್ಥಂ ದೇಹಯಾತ್ರಾರ್ಥಂ ಚ ಪ್ರಶಮಿತಂ ಸಂಹೃತಂ ಪ್ರಾಂಶೂನಾಂ ಮೋಹೇನ ಸಿಂಹಬಲಾಪರಿಜ್ಞಾನೇನ ಮತ್ತಾನಾಂ ಇಭಾನಾಂ ಜಾಲಂ ಸಮೂಹೋ ಯೇನ ।

ಸ್ವಾತ್ಮಕಂಠೀರವಃ—ಶ್ರೀ ನೃಸಿಂಹಮೂರ್ತಿಃ, ಪ್ರತ್ಯಗಾತ್ಮಪಂಚಾನನಃ

ಕಾಲಾತೀತೇ ಪದೇ— ಸರ್ವಗ್ರಾಸಿಮಹಾಕಾಲಚಕ್ರಾವಿಷಯೇ ಸ್ವರೂಪಲಕ್ಷಣೇ ಪರಮಪದೇ ।

ಪರಾಗ್ಭಿಃ—ವ್ಯಾವಹಾರಿಕ–ವಸ್ತುಮಾತ್ರ–ಪ್ರವಣೈಃ

ಹೊರಗಿನ ವಿಷಯಗಳನ್ನು ಗ್ರಹಿಸುವ ಇಂದ್ರಿಯಗಳು ಆತ್ಮನನ್ನು ಗ್ರಹಿಸಲಾರವು. ಹೋಲಿಸಿ—

ಪರಾಂಚಿ ಖಾನಿ ವ್ಯತೃಣತ್ ಸ್ವಯಂಭೂಃ
ತಸ್ಮಾತ್ ಪರಾಙ್ ಪಶ್ಯತಿ ನಾಂತರಾತ್ಮನ್ ।
—ಕಠ ೪ ೧

೪೧. ಸೂರ್ಯನು ಅಮೃತದಂತಹ ಒಳ್ಳೆಯ ಮತ್ತು ಹೊಳೆಯುವ ತನ್ನ ಕಿರಣಗಳಿಂದ ಜಗತ್ತನ್ನು ಎಚ್ಚರಿಸುತ್ತಾನೆ. ಹಾಗೆಯೇ ಜ್ಞಾನಿಯು ಸುಖಕರವಾದ ಮತ್ತು ಹಿತಕರವಾದ ಮನ ಒಲಿಸುವ ಶಬ್ದಗಳಿಂದ ಜಗತ್ತನ್ನು ಬೆಳಗಿಸುತ್ತಾನೆ.

ಭುವನಜಾಡ್ಯಹರೈಃ—೧) ತ್ರೈಲೋಕ್ಯಸ್ಯ ಅಜ್ಞಾನಾಂಧಕಾರಸ್ಯ
೨) ಹಿಮಸ್ಯ ತಿಮಿರಸ್ಯ ಚ ನಿವರ್ತಕೈಃ

ಸುಗೋಭಿಃ—೧) ಶುಭವಾಕ್ಯೈಃ ೨) ಶೋಭನೈಃ ಕಿರಣೈಃ

ಸತ್ಯೋಜ್ವಲೈಃ—೧) ಸತ್ಯೇನ ಪರಮಾರ್ಥೇನ ಉಜ್ಜ್ವಲೈಃ ಶುದ್ಧೈಃ
೨) ಸತ್ಯಾಖ್ಯೇನ ಮಂಡಲಾಂತರ್ಗತೇನ ಈಶ್ವರೇಣ ದೀಪ್ತೈಃ

ಯೇನ ಸೂರ್ಯಸ್ತಪತಿ ತೇಜಸೇದ್ಧಃ । —ತೈ. ಬ್ರಾ. ೩.೫೪

ಯೇನಾದಿತ್ಯಸ್ತಪತಿ ತೇಜಸಾ । —ಮಹಾನಾರಾ. ೧.೩

ಶ್ರುತಿಸುಖೈಃ—೧) ಮಧುರಾಕ್ಷರಾತ್ ಶ್ರವಣಾನಂದನೈಃ

೨) ಶೀತಾರ್ತಾನಾಂ ಶ್ರೋತ್ರಪ್ರದೇಶೇ ಶೀತಪೀಡಾಧಿಕ್ಯಸ್ಯ ಅನುಭವಿಕತ್ವಾತ್ ತದುಪಲಕ್ಷಿತ ಸರ್ವಾಂಗಸುಖಕರೈಃ ಅಥವಾ ಯಾಗಾದಿಪ್ರವರ್ತಕತ್ವೇನ ವೇದಸುಖದೈಃ ।

ಅಮೃತ ಪ್ರಬೋಧೈಃ—೧) ಅಮೃತಂ ಅಮರಣಧರ್ಮಕಂ ಅಮೃತವತ್ ಮಧುರತರಂ ಚ ಬ್ರಹ್ಮ ಪ್ರಬೋಧೋ ಯೇಭ್ಯಃ

೨) ಅಮೃತಂ ಮರಣರಹಿತಂ ಯಥಾ ಸ್ಯಾತ್ ತಥಾ ಸರ್ವ-ಜನಾನ್ ಪ್ರತಿದಿನಂ ಪ್ರಬೋಧಯಂತಿ ಇತಿ ಅಮೃತ–ಪ್ರಬೋಧಾಃ ತೈಃ ಅಥವಾ ಅಮೃತೇನ ಜಲೇನ ಪಾರ್ಯತೇ ಪಾಲ್ಯತೇ ಇತಿ ಅಮೃತಪ್ರಂ ಪದ್ಮಂ ತದ್ ಬೋಧಯಂತಿ ವಿಕಾಸಯಂತಿ ಇತಿ ತಥೋಕ್ತೈಃ

ಪ್ರತಿಪದಂ—೧) ಪ್ರತಿಚರಣನ್ಯಾಸಂ ೨) ಪ್ರತಿವಿಶ್ರಾಂತಿಸ್ಥಾನಂ ಚ

ಜ್ಞಾನಿಯು ಆತ್ಮಸಾಧಕನಿಗೆ ಆತ್ಮನನ್ನು ಅರಿಯಲು ಸಹಕರಿಸುತ್ತಾನೆ. ಅವನು ಜಗತ್ತಿನ ನಿಜಸ್ವರೂಪದಮೇಲೆ ಬೆಳಕು ಚೆಲ್ಲಿದಾಗ ಸಾಧಕರು ಜಗತ್ತು ಮಿಥ್ಯೆಯೆಂದು ತಿಳಿಯುತ್ತಾರೆ, ಮತ್ತು ತಮ್ಮನ್ನು ಆ ಪರವಸ್ತುವಿನಲ್ಲಿ ಅಥವಾ ಮೂಲಭೂತ ಸತ್ಯದಲ್ಲಿ ಲೀನವಾಗಿ ಮಾಡಿಕೊಳ್ಳುತ್ತಾರೆ. ನಿರಂತರ ಸ್ವಾತಂತ್ರ್ಯ ಅಥವಾ ಮುಕ್ತಿ–ಯನ್ನು ಪಡೆಯಲು ಪ್ರಯತ್ನಮಾಡುವ ಆತ್ಮಶೋಧಕರಿಗೆ ಸಹಾಯ ಮಾಡಲು 'ಜ್ಞಾನದ' ಬೌದ್ಧಿಕ–ಪರಾಶಕ್ತಿಯನ್ನು ಉಪಯೋಗಿಸುವ ಜ್ಞಾನಿಗೆ ಶ್ರೀ ಅರವಿಂದೋ ಅವರು ಅತಿಮಾನವನೆನ್ನುತ್ತಾರೆ. ಅವನ ಕಾರ್ಯವು ಮಾನವನ ಜನನಮರಣಗಳು ಮರಳಿಬರದಂತೆ ಅವುಗಳ ಬಂಧಮೋಚನೆಯನ್ನು ಮಾಡುವದು.

೪೨. ಚಿತ್ತಂ ವಿನ್ಯಸ್ಯ—ಮನಃ ತದೈಕರಸ್ಯೇನ ಸ್ಥಾಪಯಿತ್ವಾ
ಅಭಯಾತ್ಮನಿ—ಸರ್ವದ್ವೈತಭಯಶೂನ್ಯೇ ಪರಮಾತ್ಮನಿ

೪೩. ಜೀವನ್ಮುಕ್ತನ ಮಹಿಮೆಯ ವರ್ಣನೆಯು ಮುಂದುವರೆದಿದೆ ಈ ಪದ್ಯದಲ್ಲಿ. ಅವನು ವಿದೇಹ ಕೈವಲ್ಯವನ್ನು ಪಡೆಯುವನು.

ಸ್ವಾರಾಜ್ಯಸೌಖ್ಯಜಲಧಿಃ--ಸ್ವಯಮೇವ ರಾಜತೇ ದೀಪ್ಯತೇ ಯತ್ ಸೌಖ್ಯಂ ಆನಂದಃ ತತ್ಸ್ವರೂಪೇಣ ಜಲಧಿಃ ಸಮುದ್ರಃ, ಸಮುದ್ರ ಇವ ಸರ್ವತಃ ಪರಿಪೂರ್ಣಃ. ಪರಮಾತ್ಮಾ ತನ್ಮಾತ್ರ-ಸ್ವಭಾವೇ ಕೈವಲ್ಯೇ ಪ್ರತಿಷ್ಠಿತಃ ।

೪೪. ಈ ಪದ್ಯದಲ್ಲಿ ವ್ಯತಿರೇಕಾಲಂಕಾರವಿದೆ. ಸಾಮಾನ್ಯ ಚಂದ್ರನಿಗೆ ಉದಯಾಸ್ತಗಳಿವೆ; ಕಲೆಗಳ ವೃದ್ಧಿಕ್ಷಯಗಳಿವೆ; ಬೆಳಕಿನ ಸಾಲವಿದೆ ಮತ್ತು ಕಲೆ ಇದೆ. ಕೆಲವು ಸಲ ಅಮೃತತುಂಬಿದ ಕಿರಣಗಳಿರಲಾರವು. ಈ ಪ್ರಸಂಗವು ಆತ್ಮ-ಚಂದ್ರನಿಗಿಲ್ಲ.

೪೫. ಆತ್ಮನ ಮಹಿಮೆಯು ರೂಪಕಮಾಲೆಯಿಂದ ಕೊಂಡಾಡಲ್ಪಟ್ಟಿದೆ.

ಕೋಶಕುಹರೇ—ಖಡ್ಗವು ಒರೆಯ ಒಳಗಿರುವಂತೆ ಆತ್ಮನು ಅನ್ನಮಯ, ಪ್ರಾಣಮಯ ಮುಂತಾದ ಕೋಶಗಳಲ್ಲಿ ವಿಶ್ರಮಿಸುವನು.

೪೬. ಈ ಸ್ವಾರಾಜ್ಯ-ಸಿದ್ಧಿಯು ಸದ್ಗುಣಿಯಾಗಿ ಕೈವಲ್ಯಮಾರ್ಗದಲ್ಲಿ ಮುಂದುವರೆದು ವೇದಾಂತವನ್ನು ತಿಳಿಯುವದರಲ್ಲಿ ಕುತೂಹಲ ತುಂಬಿದವನಿಗೆ ಮೀಸಲವಾದುದು.

ಕೈವಲ್ಯಕಲ್ಪತರುಮೂಲ--ಉಪದೇಶಗುರುವೆಂದರೆ ಮುಕ್ತಿಯೆಂಬ ಬಯಕೆಯನ್ನು ಪೂರೈಸುವ ಕಲ್ಪತುರುವಿನ ಮೂಲವಿದ್ದಂತೆ. ಹಾಗೆಯೇ ಆ ಶಬ್ದವು ಈ ಗ್ರಂಥಕ್ಕೆ ಲೇಖಕರು ತಾವು ರಸಿಚಿದ ಕೈವಲ್ಯಕಲ್ಪದ್ರುಮ ಎಂಬ ಟೀಕೆಗೂ ಅನ್ವ-ಯಿಸುತ್ತದೆ.

ಆತ್ಮ, ಪರಮಾತ್ಮ, ಪರಬ್ರಹ್ಮ, ಪರಮಾರ್ಥ, ಪರಮಶಿವ, ಪರಮವಿಷ್ಣು, ನಿರ್ಗುಣ ಮತ್ತು ಸಚ್ಚಿದಾನಂದ ಈ ಶಬ್ದಗಳು ಸಮಾನಾರ್ಥಕವಾಗಿವೆ. ಪರಮ-ಸತ್ಯದ ಸಾಕ್ಷಾತ್ಕಾರವೆಂದರೆ ಸಾಮಾನ್ಯ ನರನಾರಿಯರ ವ್ಯಾವಹಾರಿಕ ಜ್ಞಾನಕ್ಕೂ ಭಿನ್ನವಾದ ಪರಮಚೈತನ್ಯಾವಸ್ಥೆಯೇ ಸರಿ. ಒಳಗಿನದನ್ನು ಸ್ವೀಕರಿಸಿ ಹೊರಗಿನ-ದಾದ ಇನ್ನೊಂದನ್ನು ನಿರಾಕರಿಸಿದಲ್ಲಿ ಒಂದು ಸತ್ಯ ಇನ್ನೊಂದು ಆಭಾಸ. ಬಾಧ್ಯ-ವಾದ ಮಾಯೆಯೇ ಜಗತ್ತಿನ ತೋರಿಕೆಗೆ ಕಾರಣ. ಇದರ ಬಾಧವೇ ಸ್ವಾರಾಜ್ಯ-ಸಿದ್ಧಿಯನ್ನು ಅಥವಾ ಮುಕ್ತಿಯನ್ನು (ಸಕಲಬಂಧವಿಮೋಚನೆಯಿಂದಾದ ಅಖಂಡ ಸ್ವಾತಂತ್ರ್ಯವನ್ನು) ಒದಗಿಸುತ್ತದೆ.

೪೭. ಗಂಗಾಧರಸರಸ್ವತಿಯವರು ಗಿರಿಜೆಯಿಂದ ಸಹಿತನಾದ ಗಿರಿಶನ ನಮನದೊಂದಿಗೆ ಈ ಗ್ರಂಥವನ್ನು ಉಪಕ್ರಮಿಸಿದ್ದರು. ಈಗ ಪಾದಗಳಿಗೆ ಪದ-ಕುಸುಮಗಳ ಕಾಣಿಕೆಯೊಂದಿಗೆ ಉಪಸಂಹರಿಸುತ್ತಾರೆ.

ಧಿಯಃ ಪ್ರೇರಕಯೋಃ-- ಇದು ಗಾಯತ್ರಿಮಂತ್ರದ ಧಿಯೋ ಯೋ ನಃ ಪ್ರಚೋದಯಾತ್ (ಋಗ್ವೇದ ३.६२.१०) ಎಂಬುದನ್ನು ನೆನಪಿಗೆ ತರುತ್ತದೆ.

ಲೇಖಕರು ಮೂರನೆಯ ಪ್ರಕರಣವನ್ನು ಈ ಕೆಳಗೆ ಹೀಗೆ ಸಂಕ್ಷೇಪಿಸಿರು-ತ್ತಾರೆ:--

ಅಪರೋಕ್ಷೀಕೃತೇ ತತ್ತ್ವೇ ವಾಕ್ಯಾದ್ವಾ ಯೋಗತೋಽಪಿ ವಾ ।
ಜೀವನ್ಮುಕ್ತಸ್ಯ ಧನ್ಯಸ್ಯ ಕೈವಲ್ಯಮಿಹ ಕೀರ್ತಿತಮ್ ॥

ನಿರ್ದೇಶನಾಲಯದ ನೂತನ ಪ್ರಕಟನೆಗಳು

		ಬೆಲೆ : ಸಾದಾ ಪ್ರತಿ	ಉತ್ತಮ ಪ್ರತಿ
		(ರೂಪಾಯಿಗಳಲ್ಲಿ)	
೧)	ಮೇಘದೂತ	೮-೦೦	೧೨-೦೦
೨)	ಸರ್ವದರ್ಶನ ಸಂಗ್ರಹ (ಅನುವಾದ)		
೩)	ರಕ್ಷಾಶತಕ ಪಂಪಾಶತಕ	೨-೦೦	೪-೦೦
೪)	ಗಿರಿಜಾ ಕಲ್ಯಾಣ	೧೫-೦೦	೧೮-೦೦
೫)	ಪ್ರಸಾದಿ ಸ್ಥಲದ ವಚನಗಳು	–	೨೬-೦೦
೬)	ವಿಮರ್ಶಾತ್ಮಕ ಲೇಖನಗಳು	೧೦-೦೦	೧೪-೦೦
೭)	ಸ್ವಪ್ನವಾಸವದತ್ತಮ್	೧೨-೦೦	–
೮)	ಶಾಸನ ವ್ಯಾಸಂಗ (ಭಾಗ ೨)	೧೦-೦೦	೧೩-೦೦
೯)	ವಿಜಾಪುರ ಜಿಲ್ಲೆಯ ಶಾಸನ ಸೂಚಿ	೩೦-೦೦	೪೦-೦೦
೧೦)	ಅನ್ಯಭಾಷಾ ಬೋಧೆ	೮-೦೦	೧೨-೦೦
೧೧)	ವಿಂಟರ್‌ನಿಟ್ಸ್ ಅವರ ಭಾರತೀಯ ಸಾಹಿತ್ಯ ಚರಿತ್ರೆ	೨೫-೦೦	೩೦-೦೦
೧೨)	ಭಾರತೀಯ ಸಾಹಿತ್ಯ ಸಮೀಕ್ಷೆ	೧೬-೦೦	೨೦-೦೦

ಪುಸ್ತಕಗಳಿಗಾಗಿ —

ನಿರ್ದೇಶಕರು,
ವ್ಯಾಸಂಗ ವಿಸ್ತರಣ-ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೩.
ಇವರಿಗೆ ಬರೆಯಿರಿ.